
ಮಂಗಳವಾರ, ಜುಲೈ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 184 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಬಡವರೂ ತೆರಿಗೆ ಕಟ್ಟುವರು
ಮುಖ್ಯ ಶಿಕ್ಷಕರಿಗೆ ವರ್ಗಾವಣೆ 'ಶಿಕ್ಷೆ' 5
ಮಣಿಪುರ: ವಸ್ತುಸ್ಥಿತಿ ವರದಿಗೆ ಸೂಚನೆ 10

ಸೆನ್ಸೆಕ್ಸ್	ನಿಫ್ಟಿ	₹/$
65,205 ▲	19,322 ▲	81.91 ▲

ಕರೆನ್ಸಿ ನಿರ್ವಹಣೆ ಕಂಪನಿಗಳ ಸರ್ವರ್ ಹ್ಯಾಕ್ • ₹ 5 ಸಾವಿರ ಕೋಟಿಗೂ ಹೆಚ್ಚು ಅಕ್ರಮ ಶಂಕೆ

ಬಿಟ್ ಕಾಯಿನ್: ಎಸ್ಐಟಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ರಾಷ್ಟ್ರಮಟ್ಟದ ಸುದ್ದಿಯಾಗಿ, ಸರ್ಕಾರ ಹಾಗೂ ಪಕ್ಷದ ಪ್ರಭಾವಿಗಳನ್ನು 'ಸಂಕಟ'ಕ್ಕೆ ದೂಡಿದ್ದ ಬಿಟ್ ಕಾಯಿನ್ (ಬಿಟಿಸಿ) ಪ್ರಕರಣಕ್ಕೆ ಮತ್ತೆ ಜೀವ ನೀಡಿರುವ ಕಾಂಗ್ರೆಸ್ ಸರ್ಕಾರ, ಬಹುಕೋಟಿ ವ್ಯವಹಾರದ ತನಿಖೆಗೆ ಎಡಿಜಿಪಿ ನೇತೃತ್ವದಲ್ಲಿ ಎಸ್ಐಟಿ ರಚಿಸಿದೆ.

ಅಂತರ ರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಹಾಗೂ ಇತರರ ವಿರುದ್ಧ ಕಾಟನ್‌ಪೇಟೆ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಬಿಟ್ ಕಾಯಿನ್ ಅಕ್ರಮ ಪ್ರಕರಣವನ್ನು ಎಸ್ಐಟಿ ಮತ್ತೆ ಭೇದಿಸಲಿದೆ.

ಪ್ರಕರಣದ ಬಗ್ಗೆ ಈ ಹಿಂದೆ ತನಿಖೆ ನಡೆಸಿದ್ದ ಸಿಸಿಬಿಯ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ ನೇತೃತ್ವದ ತಂಡ, ಶ್ರೀಕಿ ಹಾಗೂ ಇತರರ ವಿರುದ್ಧ 1ನೇ ಎಸಿಎಂಎಂ ನ್ಯಾಯಾಲಯಕ್ಕೆ 2021ರ ಫೆಬ್ರುವರಿ 22ರಂದು 757 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಈ ಬಗ್ಗೆ 'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಸರಣಿ ವರದಿಗಳು ಪ್ರಕಟಗೊಂಡಿದ್ದವು.

'ಅಮೆರಿಕದ 'ಬಿಟಿಸಿ ಇ ಡಾಟ್ ಕಾಮ್' ಜಾಲತಾಣ ಹ್ಯಾಕ್ ಮಾಡಿದ್ದ ಶ್ರೀಕಿ, 3,000 ಬಿಟಿಸಿ ಗಳಿಸಿದ್ದ. ಇಬ್ಬರು ಇಸ್ರೇಲ್ ಹ್ಯಾಕರ್ಸ್‌ಗಳ ಜೊತೆ ಸೇರಿ 'ಬಿಟ್ ಫಿನಿಕ್ಸ್' ಜಾಲತಾಣ ಹ್ಯಾಕ್ ಮಾಡಿ 2,000 ಬಿಟಿಸಿ ತನ್ನದಾಗಿಸಿಕೊಂಡಿದ್ದ. ಈ ಎರಡೇ ಜಾಲತಾಣದಿಂದ ಶ್ರೀಕಿ, 5,000 ಬಿಟ್ ಕಾಯಿನ್ ದೋಚಿದ್ದ. ಇದರ ಸದ್ಯದ ಮಾರುಕಟ್ಟೆ ಮೌಲ್ಯ ₹ 1,254 ಕೋಟಿ' ಎಂಬ ಅಂಶ ದೋಷಾರೋಪ ಪಟ್ಟಿಯಲ್ಲಿತ್ತು. ಆದರೆ, ದೋಚಿದ್ದ ಹಣ ಎಲ್ಲಿದೆ? ಎಂಬ ಬಗ್ಗೆ ಸಿಸಿಬಿ ಹೆಚ್ಚು ತನಿಖೆ ನಡೆಸಿರಲಿಲ್ಲ.

ಶ್ರೀಕಿಯ ಸ್ನೇಹಿತರು, ಉದ್ಯಮಿಗಳು, ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಇತರರು ಬಿಟ್ ಕಾಯಿನ್ ಹಣವನ್ನು ತಮ್ಮದಾಗಿಸಿಕೊಂಡಿರುವ ಅನುಮಾನ ಹೆಚ್ಚಿದೆ. ಇದೇ ಕಾರಣಕ್ಕೆ ಇದೀಗ ಎಸ್ಐಟಿ ರಚನೆ ಮಾಡಲಾಗಿದೆ.

ತನಿಖೆಗೆ ಇಳಿದ ಎಸ್ಐಟಿ ತಂಡ: ಸಿಐಡಿ ಎಡಿಜಿಪಿ ಮನೀಶ್ ಖರ್ಬೀಕರ್ ಅವರನ್ನು ಎಸ್ಐಟಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಡಿಐಜಿ ಡಾ.ಕೆ. ವಂಶಿಕೃಷ್ಣ, ಡಿಸಿಪಿ ಡಾ.ಅನೂಪ್ ಎ. ಶೆಟ್ಟಿ ಹಾಗೂ ಸಿಐಡಿ ಎಸ್ಪಿ ಶರತ್ ತಂಡದಲ್ಲಿ ಸದಸ್ಯರಾಗಿದ್ದಾರೆ.

5ನೇ ಪುಟ ನೋಡಿ

ಪ್ರಭಾವಿಗಳಿಗೆ ನೋಟಿಸ್?

ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬಿಜೆಪಿ ಸರ್ಕಾರದ ಸಂದರ್ಭದಲ್ಲಿ ಪ್ರಭಾವಿ ಹುದ್ದೆಗಳಲ್ಲಿದ್ದ ಕೆಲವರಿಗೆ ಎಸ್ಐಟಿ ಅಧಿಕಾರಿಗಳು ನೋಟಿಸ್ ನೀಡುವ ಸಾಧ್ಯತೆ ಇದೆ.

ಹ್ಯಾಕ್ ಮಾಡುವುದರಲ್ಲಿ ನಿಷ್ಣಾತನಾಗಿದ್ದ ಶ್ರೀಕಿಯನ್ನು ಬಳಸಿಕೊಂಡಿದ್ದ ಕೆಲವು ಪೊಲೀಸ್ ಅಧಿಕಾರಿಗಳು, ಪ್ರಭಾವಿ ರಾಜಕಾರಣಿಗಳು, ಅವರ ಮಕ್ಕಳು ಭಾರಿ ಮೊತ್ತವನ್ನು ತಮ್ಮ ಬೇನಾಮಿಗಳ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು ಎಂಬ ಆರೋಪ ಇತ್ತು. ಈಗ ಅವರೆಲ್ಲರನ್ನೂ ಎಸ್ಐಟಿ ವಿಚಾರಣೆಗೆ ಗುರಿಪಡಿಸುವ ಸಂಭವ ಇದೆ.

'ರಾಜಕಾರಣಿಗಳು ಹಾಗೂ ಅಧಿಕಾರಿಗಳ ಮಕ್ಕಳು ಶ್ರೀಕಿಯ ಸ್ನೇಹಿತರು. ಡ್ರಗ್ಸ್ ವ್ಯಸನಿಯಾಗಿದ್ದ ಶ್ರೀಕಿಗೆ ಹಣ ಹಾಗೂ ಡ್ರಗ್ಸ್ ನೀಡಿ ಹ್ಯಾಕ್ ಮಾಡಿಸುತ್ತಿದ್ದರು. ಆನ್‌ಲೈನ್ ಗೇಮ್ ಜಾಲತಾಣಗಳಲ್ಲಿ ಶ್ರೀಕಿ ಸುಲಭವಾಗಿ ಹ್ಯಾಕ್ ಮಾಡುತ್ತಿದ್ದ' ಎಂದು ಮೂಲಗಳು ಹೇಳಿವೆ.



ಶ್ರೀಕಿ ಎಲ್ಲಿದ್ದಾನೆ ?



ಶ್ರೀಕೃಷ್ಣ

ಕೆಂಪೇಗೌಡನಗರದಲ್ಲಿ ದಾಖಲಾಗಿದ್ದ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಶ್ರೀಕಿ, ಅಂತರರಾಷ್ಟ್ರೀಯ ಹ್ಯಾಕರ್ ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಬಳಿಕ ಆತನನ್ನು ಕಾಟನ್‌ಪೇಟೆ ಪ್ರರಣದಲ್ಲಿ ಬಂಧಿಸಿ ವಿಚಾರಣೆ ನಡೆಸಲಾಗಿತ್ತು. ನಂತರ, ಆತನನ್ನು ಸಿಐಡಿ ವಶಕ್ಕೆ ಪಡೆದಿತ್ತು. ಇದಾದ ನಂತರ, ಜಾಮೀನು ಮೇಲೆ ಬಿಡುಗಡೆಗೊಂಡಿರುವ ಶ್ರೀಕಿ ಈಗ ಎಲ್ಲಿದ್ದಾನೆಂಬ ಮಾಹಿತಿ ಲಭ್ಯವಾಗಿಲ್ಲ. ಎಸ್ಐಟಿ ಅಧಿಕಾರಿಗಳು, ಆರಂಭದಲ್ಲಿ ಶ್ರೀಕಿಯನ್ನು ಕಸ್ಟಡಿಗೆ ಪಡೆಯುವ ಸಾಧ್ಯತೆ ಹೆಚ್ಚಿದೆ.

'ಉದ್ಯಮಿ ಲೋಕನಾಥನ್ ಮಗ ವಿದ್ವತ್ ಮೇಲೆ ಮೊಹಮ್ಮದ್ ನಲಪಾಡ್ ಹಲ್ಲೆ ನಡೆಸಿದ್ದ ಪ್ರಕರಣದಲ್ಲಿ ಶ್ರೀಕಿ ಆರೋಪಿಯಾಗಿದ್ದ. ಮೊಬೈಲ್ ಬಳಸದ ಈತ, ಹಲವು ವರ್ಷ ತಲೆಮರೆಸಿಕೊಂಡಿದ್ದ. ಕೆಂಪೇಗೌಡ ನಗರ ಠಾಣೆ ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ. ಈತನ ಪೋಷಕರು, ಜಯನಗರದಲ್ಲಿದ್ದಾರೆ. ಅವರಿಗೂ ಆತ ಎಲ್ಲಿದ್ದಾನೆಂಬುದು ಗೊತ್ತಿಲ್ಲ. ಇದೀಗ ಆತ ಮೊಬೈಲ್ ಬಳಸುತ್ತಿಲ್ಲ. ಹೀಗಾಗಿ, ಹುಡುಕುವುದು ಕಷ್ಟ' ಎಂದು ಮೂಲಗಳು ಹೇಳಿವೆ.



ಮಂಗಳೂರಿನಲ್ಲಿ ಸೋಮವಾರ ಸಂಜೆ ಸುರಿದ ಭಾರಿ ಮಳೆಗೆ ರಾಜಕಾಲುವೆ ಉಕ್ಕಿ ಹರಿದು ಕೊಟ್ಟಾರಚೌಕಿ ಜಂಕ್ಷನ್‌ನಿಂದ ಪ್ರೇಮಾ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಜಲಾವೃತಗೊಂಡಿತು

ಮಂಗಳೂರಿನಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಜಯನಗರ, ಬಾಗಲಕೋಟೆ, ಉತ್ತರ ಕನ್ನಡ, ಗದಗ, ಕೊಪ್ಪಳ, ದಾವಣಗೆರೆ, ಕೊಡಗು, ದಕ್ಷಿಣ ಕನ್ನಡ ಸೇರಿದಂತೆ ಅನೇಕ ಕಡೆಗಳಲ್ಲಿ ಸೋಮವಾರ ಉತ್ತಮ ಮಳೆಯಾಗಿದೆ.

ಮಂಗಳೂರು ನಗರ ಪ್ರದೇಶದಲ್ಲಿ ಸಂಜೆ ಧಾರಾಕಾರವಾಗಿ ಮಳೆ ಸುರಿದಿದ್ದು, ಪಂಪ್‌ವೆಲ್ ಹಾಗೂ ಕೊಟ್ಟಾರಚೌಕಿ ಸೇರಿದಂತೆ ಇನ್ನಿತರ ತಗ್ಗು ಪ್ರದೇಶಗಳು ಜಲಾವೃತಗೊಂಡವು. ಈ ಭಾಗದ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತವಾಯಿತು. ಪಂಪ್‌ವೆಲ್ ವೃತ್ತದ ಬಳಿಯ ರಸ್ತೆಯಲ್ಲಿ ಸುಮಾರು 4 ಅಡಿಗಳಷ್ಟು ನೀರು ನಿಂತಿತ್ತು.

ಮಳೆಯಿಂದಾಗಿ ಬಸ್‌ಗಳು ತಡವಾಗಿ ಬಂದಿದ್ದರಿಂದ ವಿದ್ಯಾರ್ಥಿಗಳು ಹಾಗೂ ಕೆಲಸ ಮುಗಿಸಿ ಮನೆಗೆ ಮರಳುವ ಉದ್ಯೋಗಿಗಳು ತಾಸುಗಟ್ಟಲೆ ಕಾಯಬೇಕಾಯಿತು.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಹಕ್ಲಾಡಿಯಲ್ಲಿ ರಾಜ್ಯದಲ್ಲಿ ಅತ್ಯಧಿಕ 14.6 ಸೆಂಟಿ ಮೀಟರ್ ಮಳೆಯಾಗಿದೆ. ಭಾರಿ ಮಳೆಗೆ ಮಂಗಳೂರು ಹಾಗೂ ಬಂಟ್ವಾಳ ತಾಲ್ಲೂಕುಗಳಲ್ಲಿ ತಲಾ ಒಂದು ಮನೆ ನೆಲಸಮವಾಗಿವೆ.

ಬಿತ್ತನೆ ಚುರುಕು: ದಾವಣಗೆರೆ ಜಿಲ್ಲೆಯಲ್ಲಿ ಭಾನುವಾರ, ಸೋಮವಾರ ಎರಡೂ ದಿನ ಉತ್ತಮವಾಗಿ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ. ಜಿಲ್ಲೆಯ ಕೆಲವೆಡೆ ರೈತರು ಮೆಕ್ಕೆಜೋಳ ಬಿತ್ತನೆ ಕಾರ್ಯದಲ್ಲಿ ತೊಡಗಿದ್ದು ಕಂಡುಬಂದಿತು.

ಇನ್ನಷ್ಟು ಸುದ್ದಿಗಳು 5

ಎನ್‌ಸಿಪಿ ಬಣಗಳಿಂದ ಪರಸ್ಪರ ಶಿಸ್ತುಕ್ರಮ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಪಕ್ಷದ ವಿಭಜನೆಗೆ ಕಾರಣವಾದ ಕ್ಷಿಪ್ರ ರಾಜಕೀಯ ಬೆಳವಣಿಗೆಯ ಹಿಂದೆಯೇ ಎನ್‌ಸಿಪಿ ಶೀತಲಸಮರ ಆರಂಭವಾಗಿದೆ. ಪಕ್ಷದ ಮೇಲೆ ಹಕ್ಕು ಸ್ಥಾಪನೆ ಕ್ರಮವಾಗಿ ಉಭಯ ಬಣಗಳು ಶಿಸ್ತುಕ್ರಮಕ್ಕೆ ಮುಂದಾಗಿವೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಪಕ್ಷ ವಿರೊಧಿ ಚಟುವಟಿಕೆಯ ಆರೋಪದ ಮೇಲೆ ಪಕ್ಷದ ಕಾರ್ಯಾಧ್ಯಕ್ಷ ಸ್ಥಾನದಿಂದ ಪ್ರಫುಲ್ ಪಟೇಲ್ ಹಾಗೂ ಖಜಾಂಚಿ ಸ್ಥಾನದಿಂದ ಸಂಸದ ಸುನಿಲ್ ತತ್ಕರೆ ಅವರನ್ನು ಉಚ್ಚಾಟಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಪಕ್ಷದ ಪದಾಧಿಕಾರಿಗಳ ಪಟ್ಟಿಯಿಂದಲೂ ಈ ಇಬ್ಬರ ಹೆಸರನ್ನು ತೆಗೆಯಲಾಗಿದೆ ಎಂದು ತಿಳಿಸಿದ್ದಾರೆ. ಪ್ರಫುಲ್ ಮತ್ತು ತತ್ಕರೆ ಅವರ ಖಾತೆಗೂ ಈ ಟ್ವೀಟ್ ಅನ್ನು ಟ್ಯಾಗ್ ಮಾಡಿದ್ದಾರೆ.

ಅಲ್ಲದೆ, ಈ ಇಬ್ಬರು ನಾಯಕರಿಗೂ ನೋಟಿಸ್ ಜಾರಿ ಮಾಡಿರುವ ಶರದ್ ಪವಾರ್, 'ನನ್ನ ಅರಿವಿಗೆ ಬಾರದೆ 9 ಶಾಸಕರ ಪಕ್ಷಾಂತರಕ್ಕೆ ಕಾರಣರಾಗಿದ್ದೀರಿ. ನಿಮ್ಮ ನಡೆಯು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಅನರ್ಹಗೊಳಿಸಲು ಸೂಕ್ತವಾದುದಾಗಿದೆ' ಎಂದು ಹೇಳಿದ್ದಾರೆ.

10ನೇ ಪುಟ ನೋಡಿ

ಶಾಸಕ, ಸಂಸದರ ಒಗ್ಗಟ್ಟಿಗೆ ನಿತೀಶ್ ಒತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾರಾಷ್ಟ್ರದಲ್ಲಿನ ಕ್ಷಿಪ್ರ ರಾಜಕೀಯ ಬೆಳವಣಿಗೆಗಳ ಬೆನ್ನಲ್ಲೇ ಜಾಗೃತಗೊಂಡಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ರಾಜ್ಯದಲ್ಲಿನ ಸಂಭವನೀಯ ಪಕ್ಷಾಂತರ ಅಥವಾ ಆಮಿಷವೊಡ್ಡಿ ಶಾಸಕರನ್ನು ಸೆಳೆಯುವುದನ್ನು ತಡೆಯಲು ಮೈತ್ರಿಕೂಟ ಮುಂದಾಗಿದೆ.

ಮಹಾರಾಷ್ಟ್ರದ ನಂತರ ಬಿಜೆಪಿ ಬಿಹಾರದಲ್ಲಿ ಕಾರ್ಯತಂತ್ರಕ್ಕೆ ಮುಂದಾಗಬಹುದು ಎಂಬ ಮಾತು ಕೇಳಿಬರುತ್ತಿದೆ. ಹೀಗಾಗಿ ಈ ವಾರಾಂತ್ಯದಲ್ಲಿ ಪಕ್ಷದ ಶಾಸಕರ ಸಭೆಯನ್ನು ನಿತೀಶ್ ಕುಮಾರ್ ಕರೆದಿದ್ದಾರೆ. ಆ ನಂತರ ಸಂಸದರ ಜೊತೆಗೆ ಪ್ರತ್ಯೇಕವಾಗಿ ಮುಖಾಮುಖಿಯಾಗಲು ನಿರ್ಧರಿಸಿದ್ದಾರೆ.

10ನೇ ಪುಟ ನೋಡಿ

ಯುಸಿಸಿ: ಸರ್ಕಾರ ಉದ್ದೇಶ ಪ್ರಶ್ನಿಸಿದ ಪ್ರತಿಪಕ್ಷಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಪ್ರಕ್ರಿಯೆಯನ್ನು ಮುಂದುವರಿಸಲು ಕಾನೂನು ಆಯೋಗದ ವರದಿಗಾಗಿ ಕಾನೂನು ಮತ್ತು ನ್ಯಾಯ ಸಚಿವಾಲಯ ಕಾಯುತ್ತಿದ್ದರೆ, ಸೋಮವಾರ ನಡೆದ ಸಂಸದೀಯ ಸಮಿತಿ ಸಭೆಯಲ್ಲಿ ವಿರೋಧ ಪಕ್ಷಗಳು ಈ ಕುರಿತ ಸರ್ಕಾರದ ಉದ್ದೇಶವನ್ನು ಪ್ರಶ್ನಿಸಿವೆ.

ಐದು ವರ್ಷಗಳ ಹಿಂದೆಯೇ ಕಾನೂನು ಆಯೋಗವು ಯುಸಿಸಿ ಜಾರಿ ಅಗತ್ಯವೂ ಇಲ್ಲ, ಅಪೇಕ್ಷಣೀಯವೂ ಅಲ್ಲ ಎಂದು ಹೇಳಿದ ಬಳಿಕವೂ, ಈಗ ಮತ್ತೆ ಈ ಕುರಿತು ಕಸರತ್ತು ಆರಂಭಿಸಿರುವುದು ಏಕೆ ಎಂದು ಪ್ರತಿಪಕ್ಷಗಳು ಕೇಳಿವೆ.

ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಅವರು ತನ್ನ ಅಧ್ಯಕ್ಷತೆಯಲ್ಲಿ ನಡೆದ ಸಂಸದೀಯ ಸಮಿತಿ ಸಭೆಯಲ್ಲಿ, '371ನೇ ವಿಧಿಯಡಿ ವಿಶೇಷ ಸ್ಥಾನಮಾನ ಹೊಂದಿರುವ ಈಶಾನ್ಯ ರಾಜ್ಯಗಳಿಗೆ (ಆದಿವಾಸಿಗಳು ಹೆಚ್ಚಿರುವ) ಯುಸಿಸಿಯಿಂದ ವಿನಾಯಿತಿ ನೀಡಬಹುದೇ' ಎಂದು ಸಚಿವಾಲಯದ ಅಧಿಕಾರಿಗಳನ್ನು ಪ್ರಶ್ನಿಸಿದರು.


'ವಿರೋಧ ಪಕ್ಷಗಳು ಸಭೆಯಲ್ಲಿ ಯುಸಿಸಿ ಕುರಿತು ಬಹಿರಂಗವಾಗಿ ವಿರೋಧಿಸಿಲ್ಲ. ಅವರು ಯುಸಿಸಿ ಕರಡು ಪ್ರತಿಗಾಗಿ ಕಾಯುತ್ತಿದ್ದಾರೆ ಎಂದು ಸುಶೀಲ್ ಕುಮಾರ್ ಮೋದಿ ತಿಳಿಸಿದ್ದಾರೆ. ಸಮಿತಿಯು ಯುಸಿಸಿ ಕುರಿತು ಸಮಾಲೋಚನೆಗಳನ್ನು ಮುಂದುವರಿಸುತ್ತದೆ ಮತ್ತು ಭಾಗೀದಾರರಿಂದ ಸಲಹೆಗಳನ್ನು ಪಡೆಯಲಿದೆ' ಎಂದು ಮೂಲಗಳು ಹೇಳಿವೆ. ಕಾನೂನು ಆಯೋಗವು ಯುಸಿಸಿ ಕುರಿತು ತನ್ನ ಸಮಾಲೋಚನೆಗಳನ್ನು ಪೂರ್ಣಗೊಳಿಸಿ, ವರದಿ ಸಲ್ಲಿಸುವುದನ್ನು ಸರ್ಕಾರ ಕಾಯುತ್ತಿದೆ ಎಂದು ಸಚಿವಾಲಯದ ಅಧಿಕಾರಿಗಳು ಸಮಿತಿಗೆ ತಿಳಿಸಿದರು.

'ಮುಂದಿನ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಯುಸಿಸಿ ವಿಚಾರವನ್ನು ಮುಂಚೂಣಿಗೆ ತಂದಿದೆ' ಎಂದು ಕಾಂಗ್ರೆಸ್, ಡಿಎಂಕೆ ಸೇರಿದಂತೆ ಬಹುತೇಕ ವಿರೋಧ ಪಕ್ಷಗಳ ಸದಸ್ಯರು ಸಭೆಯಲ್ಲಿ ದೂರಿದರು ಎಂದು ಮೂಲಗಳು ಹೇಳಿವೆ.

2ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



'ದೇಶಕ್ಕೆ ಕರ್ನಾಟಕದ ಹೊಸ ಮಾದರಿ' 6
ದಿಲ್ಲಿಯತ್ತ ಬಿಜೆಪಿ ನಾಯಕರು 6
65 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್ 11

ಸುಧಾ, ಮಯೂರ ಓದಿರಿ

ಕರ್ನಾಟಕ ಸರ್ಕಾರ

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ನಗರ, ಡಾ. ಎಂ.ಹೆಚ್. ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ,
ಬೆಂಗಳೂರು-29, ದೂ. ಸಂ.080-29523458 ಇ-ಮೇಲ್: dcpo.bc@gmail.com

ಸಂ: ಜಿ.ಮ.ರ.ಘ/ಬೆಂ(ನ)/ಮ.ಸ/112/ಹೊಗುಸಿ/2023-24 ದಿನಾಂಕ: 01-07-2023

ಪತ್ರಿಕಾ ಪ್ರಕಟಣೆ

ಮಕ್ಕಳ ರಕ್ಷಣಾ ನಿರ್ದೇಶನಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಮಕ್ಕಳ ಸಹಾಯವಾಣಿಗೆ 19 ಹುದ್ದೆಗಳನ್ನು ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ Version-2 ಟೆಂಡರ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ್ Version-2 ಪೋರ್ಟಲ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ನಗರ ಜಿಲ್ಲೆ

ವಾ.ಸಾ.ಸಂ.ಇ/ವಾಪ್ರ/432/ಆಕಾರ್/2023-24

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಮಿನಿ ವಿಧಾನಸೌಧ (ನೆಲ ಮಹಡಿ), ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು,
ಬೆಂಗಳೂರು-560064. ದೂರವಾಣಿ ಸಂಖ್ಯೆ : 080-28462513

ಸಂಖ್ಯೆ : ಶಿಅಯೋ/ಯಬೆಂಉ/ಅಂ.ಕಾ.ಸ ಅರ್ಜಿ/2023-24 ದಿನಾಂಕ : 03.07.2023

ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು, ಯೋಜನಾ ವ್ಯಾಪ್ತಿಯಲ್ಲಿ ಖಾಲಿಯಿರುವ **96 ಅಂಗನವಾಡಿ ಕಾರ್ಯಕರ್ತೆ ಮತ್ತು 204 ಸಹಾಯಕಿಯ ಗೌರವಧನ ಹುದ್ದೆಗಳಿಗೆ** ಭೌತಿಕವಾಗಿ **ದಿನಾಂಕ: 05.07.2023ರಿಂದ 05.08.2023 ರವರೆಗೆ** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ : ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ : 03.12.2022 ಹೊರಡಿಸಿದ ಮಾರ್ಗಸೂಚಿ ಮತ್ತು ಆಯ್ಕೆಯ ಮಾನದಂಡಗಳು ಅನ್ವಯಿಸುತ್ತದೆ.

ವಿದ್ಯಾರ್ಹತೆ : ● ಕಾರ್ಯಕರ್ತೆ ಹುದ್ದೆಗೆ ಕನಿಷ್ಠ ಪಿಯುಸಿ ತೇರ್ಗಡೆ ಹೊಂದಿರಬೇಕು ಮತ್ತು ಎಸ್.ಎಸ್.ಎಲ್.ಸಿ ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು.

● ಸಹಾಯಕಿಯ ಹುದ್ದೆಗೆ ಕನಿಷ್ಠ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ತರಬೇತಿಯಲ್ಲಿ ಉತ್ತೀರ್ಣರಾಗಿರಬೇಕು.

ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. 1) ಅರ್ಜಿ ನಮೂನೆ (ಅರ್ಜಿಯನ್ನು ಕಛೇರಿಯಲ್ಲಿ ಪಡೆಯುವುದು). 2) 2 ಛಾಯಾಚಿತ್ರ 3) ವಾಸಸ್ಥಳ ದೃಢೀಕರಣ ಪತ್ರ 4) ಜಾತಿ ಮತ್ತು ಆದಾಯ ಪ್ರಮಾಣ ಪತ್ರ

ಹೆಚ್ಚಿನ ಮಾಹಿತಿಗಾಗಿ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಿನಿ ವಿಧಾನಸೌಧ (ನೆಲಮಹಡಿ), ಯಲಹಂಕ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು-560064, ದೂರವಾಣಿ ಸಂಖ್ಯೆ : 080-28462513 ಸಂಪರ್ಕಿಸುವುದು.

ಸಹಿ/-
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಶಿಶು ಅಭಿವೃದ್ಧಿ ಯೋಜನೆ, ಯಲಹಂಕ

ವಾಸಾಸಂಇ/ವಾಪ್ರ/435/ಎಂಎಎ/2023-24

ಅಧಿವೇಶನಕ್ಕೆ ಮುನ್ನ ಪ್ರಧಾನಿ ಅಧ್ಯಕ್ಷತೆಯಲ್ಲಿ ಮಂತ್ರಿ ಪರಿಷತ್‌ನ ಸಭೆ

ಸಚಿವರೊಂದಿಗೆ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೇಂದ್ರದ ಪ್ರಮುಖ ಯೋಜನೆಗಳ ಕುರಿತು ಚರ್ಚೆ
- ಯೋಜನೆಗಳ ಪ್ರಗತಿಯ ವರದಿ ಸಲ್ಲಿಸಿದ ಸಚಿವರು

ನವದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನಕ್ಕೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಮಂತ್ರಿ ಪರಿಷತ್‌ನ ಸಭೆ ಇಲ್ಲಿನ ಪ್ರಗತಿ ಮೈದಾನದ ನೂತನ ಸಮಾವೇಶ ಸಭಾಂಗಣದಲ್ಲಿ ಸೋಮವಾರ ನಡೆಯಿತು.



ಸಭೆಯ ಬಳಿಕ ಟ್ವೀಟ್ ಮಾಡಿರುವ ಪ್ರಧಾನಿ, 'ಮಂತ್ರಿಗಳ ಜತೆಗೆ ಫಲಪ್ರದ ಸಭೆ ನಡೆಸಲಾಗಿದೆ. ಅಲ್ಲಿ ನಾವು ವೈವಿಧ್ಯಮಯ ನೀತಿ ಸಂಬಂಧಿತ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ' ಎಂದು ತಿಳಿಸಿದ್ದಾರೆ.

'ಬಿಜೆಪಿ ಸರ್ಕಾರವು 9 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದೆ. ಲೋಕಸಭಾ ಚುನಾವಣೆಗೆ ಇನ್ನು 9 ತಿಂಗಳಷ್ಟೇ ಉಳಿದಿದೆ. ಈ ಅವಧಿಯಲ್ಲಿ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಎಲ್ಲ ವರ್ಗದ ಜನರಿಗೆ ತಲುಪಿಸುವ ಕೆಲಸ ಮಾಡಿ' ಎಂದು ಸಂಪುಟದ ಸಹೋದ್ಯೋಗಿಗಳಿಗೆ ಪ್ರಧಾನಿ ಸೂಚಿಸಿದರು ಎಂದು ಮೂಲಗಳು ಹೇಳಿವೆ. ಲೋಕಸಭಾ ಚುನಾವಣೆಗೆ ಮುನ್ನ ಸಚಿವ ಸಂಪುಟ ಹಾಗೂ ಪಕ್ಷದ ಸಂಘಟನೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಲು ಕಮಲ ಪಾಳಯ ಉತ್ಸುಕವಾಗಿದೆ. ಮುಂಗಾರು ಅಧಿವೇಶನದಲ್ಲಿ ವಿಪಕ್ಷಗಳ ಆರೋಪಗಳಿಗೆ ತಕ್ಕ ತಿರುಗೇಟು ನೀಡಲು ಸಭೆಯಲ್ಲಿ ಕಾರ್ಯತಂತ್ರ ರೂಪಿಸಲಾಗಿದೆ ಎಂದು ತಿಳಿಸಿವೆ.

ಕೇಂದ್ರದ ಕೆಲವು ಪ್ರಮುಖ ಯೋಜನೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಸಚಿವರು ಯೋಜನೆಗಳ ಪ್ರಗತಿಯ ವರದಿ ಸಲ್ಲಿಸಿದರು. ಲೋಕಸಭಾ ಚುನಾವಣೆಗೆ ಮುನ್ನ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಪೂರ್ಣಗೊಳಿಸುವಂತೆ ಪ್ರಧಾನಿ ಅವರು ಸಚಿವರಿಗೆ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಹಾಗೂ ಇತರರ ನಾಯಕರೊಂದಿಗೆ ಮೋದಿ ಕಳೆದ ವಾರ ಸುದೀರ್ಘ ಸಭೆ ನಡೆಸಿದ್ದರು. ಮುಂಬರುವ ಲೋಕಸಭಾ ಚುನಾವಣೆ ಹಾಗೂ ಸಂಪುಟ ಪುನರ್ ರಚನೆ ಕುರಿತು ಈ ಸಭೆಯಲ್ಲಿ ಚರ್ಚೆಗಳು ನಡೆದಿದ್ದವು.

ಸಿಇಟಿ: 18ರಿಂದ ದಾಖಲೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಹೊರನಾಡು, ಗಡಿನಾಡು, ಮಾಜಿ ಸೈನಿಕರು ಸೇರಿದಂತೆ ವಿಶೇಷ ಅರ್ಹತಾ ವಲಯದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯ ಜುಲೈ 18ರಿಂದ 21ರವರೆಗೆ ನಡೆಯಲಿದೆ.

4 ದಿನಗಳು ಬೆಳಿಗ್ಗೆ 9.30ರಿಂದ ದಾಖಲಾತಿ ಪರಿಶೀಲನಾ ಕಾರ್ಯ ಆರಂಭವಾಗಲಿದೆ. ಹಾಜರಾಗುವ ಅಭ್ಯರ್ಥಿಗಳು ಮೂಲ ದಾಖಲೆಗಳ ಜತೆಗೆ ನಕಲು ಪ್ರತಿ ತರಬೇಕು. ಮಾಹಿತಿಗೆ ಪ್ರಾಧಿಕಾರದ ಜಾಲತಾಣ http:// kea.kar.nic.in ವೀಕ್ಷಿಸಬಹುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದ್ದಾರೆ.

ಎನ್‌ಎಟಿಎ ಅಂಕ ಸಲ್ಲಿಕೆಗೆ ಮತ್ತೊಮ್ಮೆ ಅವಕಾಶ: ವಾಸ್ತುಶಿಲ್ಪಶಾಸ್ತ್ರ ಕೋರ್ಸ್‌ಗೆ ಪ್ರವೇಶ ಬಯಸುವವರು ಎನ್‌ಎಟಿಎ-1 (ವಾಸ್ತುಶಿಲ್ಪ ಶಾಸ್ತ್ರ ಪ್ರವೇಶ ಪರೀಕ್ಷೆ) ಅಥವಾ ಎನ್‌ಎಟಿಎ-2 ಪರೀಕ್ಷೆಗಳಲ್ಲಿ ಗಳಿಸಿರುವ ಅಂಕಗಳನ್ನು ನಮೂದಿಸಲು ಜುಲೈ 5ರ ಬೆಳಿಗ್ಗೆ 11ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರ ಉದ್ದೇಶ ಪ್ರಶ್ನಿಸಿದ ಪ್ರತಿಪಕ್ಷಗಳು

ಒಂದನೇ ಪುಟದಿಂದ

ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಯುಸಿಸಿಯನ್ನು ಬೆಂಬಲಿಸಿ ಮಾಡಿದ್ದ ಭಾಷಣವನ್ನು ಉಲ್ಲೇಖಿಸುವ ಮೂಲಕ ಬಿಜೆಪಿ ಸದಸ್ಯ ಮಹೇಶ್ ಜೇಠ್ಮಲಾನಿ ಅವರು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು. ಅದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಸಂಸದ ಮಾಣಿಕಂ ಟ್ಯಾಗೋರ್ ಅವರು, ಅಂಬೇಡ್ಕರ್ ಅವರ ಉದ್ದೇಶ ಪ್ರಶ್ನಾರ್ಹವಲ್ಲ, ಆದರೆ ಮೋದಿ ಸರ್ಕಾರದ ಉದ್ದೇಶದಲ್ಲಿ ಆ ಆಶಯ ಇಲ್ಲ ಎಂದು ಹೇಳಿದರು.

'ಯುಸಿಸಿಯು ಬುಡಕಟ್ಟು ವಿರೋಧಿ, ಈಶಾನ್ಯ ರಾಜ್ಯಗಳ ವಿರೋಧಿ ಮತ್ತು ದಮನಿತರ ವಿರೋಧಿಯಾಗಿದ್ದು, 2024ರ ಚುನಾವಣೆಯ ಉದ್ದೇಶವನ್ನು ಹೊಂದಿದೆ' ಎಂದು ಟ್ಯಾಗೋರ್ ದೂರಿದರು.

'ಹಿಂದಿನ ಕಾನೂನು ಆಯೋಗದ ಎಷ್ಟು ಶಿಫಾರಸುಗಳನ್ನು ಸರ್ಕಾರ ಜಾರಿಗೆ ತಂದಿದೆ' ಎಂದು ಟಿಆರ್‌ಎಸ್ ಸಂಸದ ಕೆ. ಸುರೇಶ್ ರೆಡ್ಡಿ ಪ್ರಶ್ನಿಸಿದರು.

ತರಾತುರಿ ಏಕೆ: ಬಿಎಸ್‌ಪಿ ಸಂಸದ ಮಲೂಕ್ ನಗರ್ ಅವರು, ಯುಸಿಸಿ ಅನುಷ್ಠಾನದ ತರಾತುರಿಯನ್ನು ಪ್ರಶ್ನಿಸಿದರು. ಅಲ್ಲದೆ ಅವರು, ಈ ವಿಷಯವನ್ನು ಪ್ರತಿ ಪಕ್ಷಗಳು ವಿವಾದವನ್ನಾಗಿಸಿವೆ ಎಂಬುದಾಗಿ ದೂರಿದರು ಎಂದು ಮೂಲಗಳು ತಿಳಿಸಿವೆ.

ಯುಸಿಸಿ ಕುರಿತು ಎರಡನೇ ಬಾರಿಗೆ ಸಲಹೆಗಳನ್ನು ಆಹ್ವಾನಿಸಿದ ಕಾನೂನು ಆಯೋಗದ ಕ್ರಮವನ್ನು ಪ್ರಶ್ನಿಸಿ ಕಾಂಗ್ರೆಸ್ ಸಂಸದ ವಿವೇಕ್ ತಂಖಾ ಮತ್ತು ಡಿಎಂಕೆ ಸಂಸದ ಪಿ. ವಿಲ್ಸನ್ ಅವರು ಸಮಿತಿಗೆ ಪ್ರತ್ಯೇಕವಾಗಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದರು. ಹಿಂದಿನ ಕಾನೂನು ಆಯೋಗದ ಅವಧಿಯು 2018ರ ಆಗಸ್ಟ್ 31ಕ್ಕೆ ಕೊನೆಗೊಂಡಿದೆ. ಈ ಹಂತದಲ್ಲಿ ಯುಸಿಸಿ ಜಾರಿ ಅಗತ್ಯವೂ ಇಲ್ಲ, ಅಪೇಕ್ಷಣೀಯವೂ ಅಲ್ಲ ಎಂದು ಈ ಆಯೋಗ ತಿಳಿಸಿತ್ತು ಎಂಬುದನ್ನೂ ಅವರು ಹೇಳಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕಾಂಗ್ರೆಸ್‌ಗೆ ಹೋಗುವ ದುಸ್ಥಿತಿ ಬಂದಿಲ್ಲ'

ಚಿಕ್ಕನಾಯಕನಹಳ್ಳಿ (ತುಮಕೂರು): 'ಕಾಂಗ್ರೆಸ್ ಪಕ್ಷಕ್ಕೆ ಹೋಗುವ ದುಸ್ಥಿತಿ ನನಗಿನ್ನೂ ಬಂದಿಲ್ಲ' ಎಂದು ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ ಸೋಮವಾರ ಪ್ರತಿಕ್ರಿಯಿಸಿದ್ದಾರೆ.

'ನಾನು ಕಾಂಗ್ರೆಸ್‌ಗೆ ಹೋಗುತ್ತೇನೆಂದು ಅಪಪ್ರಚಾರ ನಡೆದಿದೆ. ಮೊದಲಿಂದಲೂ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಿಕೊಂಡು ಬಂದ ನನಗೆ ಅದೇ ಪಕ್ಷಕ್ಕೆ ಹೋಗುವ ದುಸ್ಥಿತಿ ಬಂದಿಲ್ಲ' ಎಂದು ಅವರು ಹೇಳಿದರು. 'ಬಿಜೆಪಿ ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ನೋಡಿಕೊಂಡಿದೆ. ನನ್ನನ್ನು ಕರೆದು ಮಂತ್ರಿ ಮಾಡಿದೆ. ಪಕ್ಷದ ಋಣ ನನ್ನ ಮೇಲಿದೆ' ಎಂದು ತಾಲ್ಲೂಕು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಹೇಳಿದರು.

'ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ' (ಕೊಪ್ಪಳ ವರದಿ): 'ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಸೆಳೆಯಲು ಪ್ರಯತ್ನ ನಡೆಯುತ್ತಿದೆ ಎನ್ನುವುದು ಊಹಾಪೋಹ ಮಾತ್ರ. ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ' ಎಂದು ಬಿಜೆಪಿ ಸಂಸದ ಸಂಗಣ್ಣ ಕರಡಿ ತಿಳಿಸಿದರು.

'ಪ್ರಜಾವಾಣಿ'ಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಾನು ಬೇರೆ ಪಕ್ಷಕ್ಕೆ ಹೋಗುವ ರೀತಿಯಲ್ಲಿ ಯಾವುದೇ ಬೆಳವಣಿಗೆಗಳು ಆಗಿಲ್ಲ. ನನ್ನನ್ನು ಕಾಂಗ್ರೆಸ್‌ನ ಯಾವ ನಾಯಕರೂ ಸಂಪರ್ಕಿಸಿಲ್ಲ. ನಾನೂ ಆ ಪಕ್ಷದ ಯಾರ ಬಳಿಯೂ ಮಾತನಾಡಿಲ್ಲ' ಎಂದರು.

ಸುದ್ದಿ 2 ನಿಮಿಷ

ದ್ವಿತೀಯ ಪಿಯು ಅಂಕಪಟ್ಟಿ ಲಭ್ಯ

ಬೆಂಗಳೂರು: ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ನಾಡ್-ಡಿಜಿಲಾಕರ್‌ನಲ್ಲಿ (ನ್ಯಾಶನಲ್ ಅಕಾಡೆಮಿಕ್ ಡಿಪಾಸಿಟರಿ) ತಮ್ಮ ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

2022-23ನೇ ಸಾಲಿನಲ್ಲಿ ತೇರ್ಗಡೆಯಾದ 5.24 ಲಕ್ಷ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ಡಿಜಿಲಾಕರ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ವಿದ್ಯಾರ್ಥಿಗಳು https://nad.dijilocker.gov.in ಮೂಲಕ ತಮ್ಮ ಆಧಾರ್ ಸಂಖ್ಯೆ ನಮೂದಿಸಬೇಕು. ನೋಂದಾಯಿತ ಮೊಬೈಲ್ ಸಂಖ್ಯೆಗೆ ಬರುವ ಒಟಿಪಿ ನಮೂದಿಸಿ, ಲಾಗಿನ್ ಆದ ನಂತರ ಮುಖ್ಯ ಪರೀಕ್ಷೆಯ ನೋಂದಣಿ ಸಂಖ್ಯೆ, ಪರೀಕ್ಷೆ ತೇರ್ಗಡೆಯಾದ ಅವಧಿ ನಮೂಸಿದರೆ ಅಂಕಪಟ್ಟಿ ಸಿಗುತ್ತದೆ. ಅದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಹೇಳಿದೆ.

ಮೊಬೈಲ್‌ನಲ್ಲೂ ಡಿಜಿಲಾಕರ್ ಆ್ಯಪ್ ಬಳಸಿ ಅಂಕಪಟ್ಟಿ ಪಡೆಯಬಹುದು. ಅಂಕಪಟ್ಟಿಗಳ ಮುದ್ರಣ ಕಾರ್ಯವೂ ಪ್ರಗತಿಯಲ್ಲಿದ್ದು, ಆಯಾ ಕಾಲೇಜುಗಳಿಗೆ ಶೀಘ್ರ ಸರಬರಾಜು ಮಾಡಲಾಗುವುದು ಎಂದು ಮಂಡಳಿ ನಿರ್ದೇಶಕರು ಮಾಹಿತಿ ನೀಡಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ



ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರಾಥಮಿಕ ಶಿಕ್ಷಕ ಹುದ್ದೆ ಆಕಾಂಕ್ಷಿಗಳು ಹಾಗೂ ರೈತರು ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದರು. ವಿಧಾನಮಂಡಲದ ಅಧಿವೇಶನ ಆರಂಭದ ದಿನವೇ ಈ ಪ್ರತಿಭಟನೆಗಳು ನಡೆದವು.

'ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪರೀಕ್ಷೆ ಬರೆದು ಆಯ್ಕೆಯಾದವರಿಗೆ ಆದೇಶ ಪ್ರತಿ ನೀಡಬೇಕು' ಎಂದು ಆಕಾಂಕ್ಷಿಗಳು ಒತ್ತಾಯಿಸಿದರು.

'2022ರ ಮೇನಲ್ಲಿ ಪರೀಕ್ಷೆ ಬರೆದಿದ್ದ 13,352 ಅಭ್ಯರ್ಥಿಗಳು, ಹುದ್ದೆಗೆ ಆಯ್ಕೆಯಾಗಿದ್ದಾರೆ. ನೇಮಕಾತಿಯಲ್ಲಿ ಗೊಂದಲವಿರುವುದಾಗಿ ಕೆಲವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಆದರೆ, ಯಾವುದೇ ಗೊಂದಲವಿಲ್ಲದೇ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಅನ್ಯಾಯ ಆಗುತ್ತಿದೆ' ಎಂದು ಅಳಲು ತೋಡಿಕೊಂಡರು.

ಬರಗಾಲ ಘೋಷಣೆಗೆ ಆಗ್ರಹ: 'ರಾಜ್ಯದಲ್ಲಿ ಮಳೆ ಅಭಾವವಿದ್ದು, ಬರಗಾಲ ಘೋಷಿಸಬೇಕು. ರೈತರ ಸಾಲವನ್ನು ಮನ್ನಾ ಮಾಡಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಆಗ್ರಹಿಸಿದರು. 'ಸೂಕ್ತ ಸಮಯಕ್ಕೆ ಮಳೆಯಾಗದೆ ರೈತರು ಕಂಗಾಲಾಗಿದ್ದಾರೆ. ನೀರಾವರಿ ಸಮಸ್ಯೆ ಎದುರಾಗಿದೆ.

ಮುಖ್ಯಮಂತ್ರಿಯವರು ರಾಜ್ಯ ಪ್ರವಾಸ ಕೈಗೊಂಡು ಕೃಷಿ ಸಮಸ್ಯೆಗಳನ್ನು ತಿಳಿದುಕೊಳ್ಳಬೇಕು. ಬರಗಾಲ ಘೋಷಣೆ ಮಾಡಿ ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', #24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 2221 0705; ಫ್ಯಾಕ್ಸ್: +91 80 3985 6862
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸದಸ್ಯರಿಗೆ ಸೂಚನೆ – 24ನೇ ವಾರ್ಷಿಕ ಸಾಮಾನ್ಯ ಸಭೆಗೆ ಸಂಬಂಧಿಸಿದ ಮಾಹಿತಿ

ಕಂಪನಿಯ 24ನೇ ವಾರ್ಷಿಕ ಸಾಮಾನ್ಯ ಸಭೆ ("AGM") ವೀಡಿಯೊ ಕಾನ್ಫರೆನ್ಸಿಂಗ್ ("VC")/ಇತರ ಆಡಿಯೋ-ವಿಷುಯಲ್ ಮೀನ್ಸ್ ("OAVM") ಮೂಲಕ ಸೋಮವಾರ, 31ನೇ ಜುಲೈ 2023 ರಂದು ಮಧ್ಯಾಹ್ನ 3:30 ಗಂಟೆಗೆ (IST), ನಡೆಯಲಿದೆ ಎಂಬುದನ್ನು ಸದಸ್ಯರು ದಯವಿಟ್ಟು ಗಮನಿಸಬಹುದು. ಕಂಪನಿಗಳ ಕಾಯಿದೆ, 2013 ("ಆಕ್ಟ್") ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಗಳ ಅಡಿಯಲ್ಲಿ ಮಾಡಲಾದ ನಿಯಮಗಳು, 2015 ರ ಸಾಮಾನ್ಯ ಸುತ್ತೋಲೆಯೊಂದಿಗೆ ಓದುವ ಎಲ್ಲಾ ಅನ್ವಯವಾಗುವ ನಿಬಂಧನೆಗಳ ಅನುಸರಣೆಯಲ್ಲಿ ಸಂ.14/2020 ದಿನಾಂಕ ಏಪ್ರಿಲ್ 08, 2020,17/2020 ದಿನಾಂಕ ಏಪ್ರಿಲ್ 13,2020, 20/2020 ದಿನಾಂಕ ಮೇ 5, 2020, 2/2021 ದಿನಾಂಕ ಜನವರಿ 13, 2021, 19/2021 ದಿನಾಂಕ ಡಿಸೆಂಬರ್ 08, 2021, 21/2021 ದಿನಾಂಕ ಡಿಸೆಂಬರ್ 14, 2021, 2/2022 ದಿನಾಂಕ ಮೇ 05, 2022 ಮತ್ತು 10,2022, ದಿನಾಂಕ ಡಿಸೆಂಬರ್ 28/2022 ರಂದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA") ಮತ್ತು ಸುತ್ತೋಲೆ ಸಂಖ್ಯೆ SEBI/HO/CFD/CMD1/CIR/P/2020/79 ದಿನಾಂಕ ಮೇ 12, 2020, SEBI/HO/CFD/CMD2/CIR/P/2021/11 ದಿನಾಂಕ ಜನವರಿ 15, 2021, SEBI/HO/CFD/CMD2/CIR/P/2022/62 ದಿನಾಂಕ ಮೇ 13, 2022 ಮತ್ತು 15, 2021, SEBI/HO/CFD/POD2/P/CIR/2023/4 ದಿನಾಂಕ ಜನವರಿ 5, 2023 ರಂದು SEBI (ಇನ್ನು ಮುಂದೆ ಒಟರೆಯಾಗಿ ಸುತ್ತೋಲೆಗಳು ಎಂದು ಉಲ್ಲೇಖಿಸಲಾಗಿದೆ) ಹೊರಡಿಸಿದೆ.

ಈ ಸುತ್ತೋಲೆಗಳಿಗೆ ಅನುಗುಣವಾಗಿ, 2022-23ರ ಆರ್ಥಿಕ ವರ್ಷದ ಎಜಿಎಂ ಮತ್ತು ವಾರ್ಷಿಕ ವರದಿಯನ್ನು (ಒಟ್ಟಾರೆಯಾಗಿ 'ವಾರ್ಷಿಕ ವರದಿ' ಎಂದು ಕರೆಯಲಾಗುತ್ತದೆ) ಸದಸ್ಯರು ಮತ್ತು ಇತರ ವ್ಯಕ್ತಿಗಳಿಗೆ, ಕಂಪನಿಯಲ್ಲಿ ಅಥವಾ ಠೇವಣಿ ಭಾಗವಹಿಸುವವರೊಂದಿಗೆ ("ಡಿಪಿ"). ಯಾರ ಇಮೇಲ್ ವಿಳಾಸಗಳನ್ನು ನೋಂದಾಯಿಸಲಾಗಿದೆಯೋ ಅವರಿಗೆ ಇಮೇಲ್ ಮೂಲಕ ಮಾತ್ರ ಕಳುಹಿಸಲಾಗುತ್ತದೆ. ವಾರ್ಷಿಕ ವರದಿಯನ್ನು ಕಂಪನಿಯ ವೆಬ್‌ಸೈಟ್ www.diageoindia.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ, ಅಂದರೆ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.nseindia.com ಮತ್ತು ಬಿಎಸ್‌ಇ ಲಿಮಿಟೆಡ್ www.bseindia.com ನಲ್ಲಿ ಲಭ್ಯವಾಗಲಿದೆ.

ಡಿಮೆಟಿರಿಯಲೈಸ್ಡ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ತಮ್ಮ ಇಮೇಲ್ ವಿಳಾಸಗಳು ಮತ್ತು ಬ್ಯಾಂಕ್ ವಿವರಗಳನ್ನು ತಮ್ಮ ಸಂಬಂಧಿತ ಡಿಪಿ ಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ. ಭೌತಿಕ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು, ಕಂಪನಿಯೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್‌ಗಳಿಗೆ ("RTA") bglsta@integratedindia.in ನಲ್ಲಿ ಬರೆಯುವ ಮೂಲಕ ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ. ಸರಿಯಾಗಿ ತುಂಬಿದ ಮತ್ತು ಸಹಿ ಮಾಡಿದ ಫಾರ್ಮ್ ISR-1 (PAN, KYC, ವಿವರಗಳು ಅಥವಾ ಬದಲಾವಣೆಗಳು/ನವೀಕರಣಕ್ಕಾಗಿ ನಮೂನೆ). ಸದಸ್ಯರು ನಿಗದಿತ ನಮೂನೆಯನ್ನು ಕಂಪನಿಯ ವೆಬ್‌ಸೈಟ್‌ನಿಂದ https://www.diageoindia.com/investors/shareholder-centre/downloads/ ನಲ್ಲಿ ಡೌನ್ಲೋಡ್ ಮಾಡಬಹುದು. ಅದರಂತೆ, ವಾರ್ಷಿಕ ವರದಿಯನ್ನು ಸ್ವೀಕರಿಸಲು ಮೇಲೆ ನಿರ್ದಿಷ್ಟಪಡಿಸಿದಂತೆ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು / ನವೀಕರಿಸಲು ಸದಸ್ಯರನ್ನು ವಿನಂತಿಸಲಾಗಿದೆ.

ಸದಸ್ಯರು ವಿಸಿ / ಒಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂ ನಲ್ಲಿಭಾಗವಹಿಸಬಹುದು. ಎಲೆಕ್ಟ್ರಾನಿಕ್ ಮತದಾನ ವ್ಯವಸ್ಥೆ ("ಇ-ಮತದಾನ") ಮೂಲಕ ಸದಸ್ಯರು ಎಜಿಎಂ ಪ್ರಕಟಣೆಯಲ್ಲಿ ಸೂಚಿಸಿರುವಂತೆ ವ್ಯವಹಾರದಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದು. ಎಜಿಎಂ ಸಮಯದಲ್ಲಿ ಕಂಪನಿಯು ದೂರಸ್ಥ ಇ-ಮತದಾನ ಸೌಲಭ್ಯ ಮತ್ತು ಇ-ಮತದಾನದ ಸೌಲಭ್ಯವನ್ನು ಒದಗಿಸಲಿದೆ.

ಡಿಮೆಟರಲೈಸ್ಡ್ ಮೋಡ್, ಭೌತಿಕ ಮೋಡ್ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಷೇರುಗಳನ್ನು ಹೊಂದಿರುವ ಸದಸ್ಯರು, ದೂರಸ್ಥ ಇ-ಮತದಾನ ಪ್ರಾರಂಭವಾದ ನಂತರ, ಈ ಕೆಳಗಿನ ಸೂಚನೆಗಳನ್ನು ಅನುಸರಿಸಿ ಮತ ಚಲಾಯಿಸಬಹುದು:

(i) ಷೇರುದಾರರು ಇ-ಮತದಾನ ವೆಬ್‌ಸೈಟ್ www.evotingindia.com ಗೆ ಲಾಗ್ ಇನ್ ಆಗಬೇಕು.
(ii) "ಷೇರುದಾರರು / ಸದಸ್ಯರು" ಮಾಡ್ಯೂಲ್ ಕ್ಲಿಕ್ ಮಾಡಿ.
(iii) ಈಗ ನಿಮ್ಮ ಬಳಕೆದಾರ ಐಡಿ ಅನ್ನು ನಮೂದಿಸಿ
   ಎ. ಸಿಡಿಎಸ್‌ಎಗೆ ಲಾಗ್ ಆಗಿ 16 ಅಂಕೆಗಳ ಫಲಾನುಭವಿ ಐಡಿ ನಮೂದಿಸಿ,
   ಬಿ. ಎನ್‌ಎಸ್‌ಡಿಎಲ್‌ಗಾಗಿ: 8 ಅಕ್ಷರ ಡಿಪಿ ಐಡಿ ನಂತರ 8 ಅಂಕೆಗಳ ಕ್ಲೈಂಟ್ ಐಡಿ ನಮೂದಿಸಿ,
   ಸಿ. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ಕಂಪನಿಯಲ್ಲಿ ನೋಂದಾಯಿತ ಫೋಲಿಯೊ
(iv) ಮುಂದೆ, ಪ್ರದರ್ಶಿಸಲಾದ ಚಿತ್ರ ಪರಿಶೀಲನೆಯನ್ನು ನಮೂದಿಸಿ ಮತ್ತು ಲಾಗಿನ್ ಕ್ಲಿಕ್ ಮಾಡಿ.
(v) ನೀವು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿದ್ದರೆ ಮತ್ತು www.evotingindia.com ಗೆ ಲಾಗ್ ಇನ್ ಆಗಿದ್ದರೆ ಮತ್ತು ಹಿಂದಿನ ಇ-ಮತದಾನದ ಮೇಲೆ ಮತ ಚಲಾಯಿಸಿದರೆ ಯಾವುದೇ ಕಂಪನಿ, ನಂತರ ನಿಮ್ಮ ಅಸ್ತಿತ್ವದಲ್ಲಿರುವ ಪಾಸ್‌ವರ್ಡ್‌ಅನ್ನು ಬಳಸಬೇಕಾಗುತ್ತದೆ.
(vi) ನೀವು ಮೊದಲ ಬಾರಿಗೆ ಬಳಕೆದಾರರಾಗಿದ್ದರೆ ಈ ಕೆಳಗಿನ ಹಂತಗಳನ್ನು ಅನುಸರಿಸಿ:

	ಡಿಮ್ಯಾಟ್ ಫಾರ್ಮ್ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ
ಪ್ಯಾನ್	ಆದಾಯ ತೆರಿಗೆ ಇಲಾಖೆಯಿಂದ ನೀಡಲ್ಪಟ್ಟ ನಿಮ್ಮ 10-ಅಂಕಿಯ ಆಲ್ಫಾ-ಸಂಖ್ಯಾ ಪ್ಯಾನ್* ಅನ್ನು ನಮೂದಿಸಿ (ಡಿಮ್ಯಾಟ್ ಷೇರುದಾರರಿಗೆ ಮತ್ತು ಭೌತಿಕ ಷೇರುದಾರರಿಗೆ ಅನ್ವಯಿಸುತ್ತದೆ) • ಕಂಪನಿ/ಠೇವಣಿ ಭಾಗವಹಿಸುವವರೊಂದಿಗೆ ತಮ್ಮ ಪ್ಯಾನ್ ಅನ್ನು ನವೀಕರಿಸದ ಕಂಪನಿ ಷೇರುದಾರರು/RTA ಕಳುಹಿಸಿದ ಅನುಕ್ರಮ ಸಂಖ್ಯೆಯನ್ನು ಬಳಸಲು ವಿನಂತಿಸಲಾಗಿದೆ ಅಥವಾ bglsta@integratedindia.in ಅನ್ನು ಸಂಪರ್ಕಿಸಿ.
ಲಾಭಾಂಶ ಬ್ಯಾಂಕ್ ವಿವರಗಳು ಅಥವಾ ದಿನಾಂಕ ಜನನ (DOB)	ಲಾಗಿನ್ ಆಗಲು ನಿಮ್ಮ ಡಿಮ್ಯಾಟ್ ಖಾತೆಯಲ್ಲಿ ಅಥವಾ ಕಂಪನಿಯ ದಾಖಲೆಗಳಲ್ಲಿ ದಾಖಲಿಸಿದಂತೆ ಡಿವಿಡೆಂಡ್ ಬ್ಯಾಂಕ್ ವಿವರಗಳು ಅಥವಾ ಜನ್ಮ ದಿನಾಂಕವನ್ನು (dd / mm / yyyy ಸ್ವರೂಪದಲ್ಲಿ) ನಮೂದಿಸಿ. ಎರಡೂ ವಿವರಗಳನ್ನು ಠೇವಣಿ ಅಥವಾ ಕಂಪನಿಯೊಂದಿಗೆ ದಾಖಲಿಸದಿದ್ದರೆ, ಮೇಲಿನ ಸೂಚನೆ (iii) ಉಲ್ಲೇಖಿಸಿದಂತೆ ಡಿವಿಡೆಂಡ್ ಬ್ಯಾಂಕ್ ವಿವರಗಳ ಕ್ಷೇತ್ರದಲ್ಲಿ ದಯವಿಟ್ಟು ಸದಸ್ಯರ ಐಡಿ / ಫೋಲಿಯೊ ಸಂಖ್ಯೆಯನ್ನು ನಮೂದಿಸಿ.

(vii) ಈ ವಿವರಗಳನ್ನು ಸೂಕ್ತವಾಗಿ ನಮೂದಿಸಿದ ನಂತರ, ಸಲ್ಲಿಸು ಟ್ಯಾಬ್ ಕ್ಲಿಕ್ ಮಾಡಿ.
(viii) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ನಂತರ ನೇರವಾಗಿ ಕಂಪನಿ ಆಯ್ಕೆ ಪರದೆಯನ್ನು ತಲುಪುತ್ತಾರೆ. ಆದಾಗ್ಯೂ, ಷೇರುದಾರರು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹಿಡಿದಿಟ್ಟುಕೊಳ್ಳುವುದು, ಈಗ ಪಾಸ್‌ವರ್ಡ್ ರಚನೆ ಮೆನುವನ್ನು ತಲುಪುತ್ತದೆ. ಅದರಲ್ಲಿ ಅವರು ತಮ್ಮ ಲಾಗಿನ್ ಪಾಸ್ವರ್ಡ್ ಅನ್ನು ಕಡ್ಡಾಯವಾಗಿ ಹೊಸ ಪಾಸ್ವರ್ಡ್ ಕ್ಷೇತ್ರದಲ್ಲಿ ನಮೂದಿಸಬೇಕಾಗುತ್ತದೆ. ಚಯವಿಟ್ಟು ಗಮನಿಸಿ ಈ ಪಾಸ್‌ವರ್ಡ್ ಅನ್ನು ಡಿಮ್ಯಾಟ್ ಹೊಂದಿರುವವರು ಅವರು ಅರ್ಹರಾಗಿರುವ ಇತರೆ ಕಂಪನಿಯಲ್ಲಿ ಮತ ಚಲಾಯಿಸಲು ಸಹ ಬಳಸಬಹುದು, ಆ ಕಂಪನಿಯು ಸಹ ಸಿಡಿಎಸ್‌ಎಲ್ ಮೂಲಕ ಇ – ಮತದಾನ ಆರಿಸಿಕೊಂಡಲ್ಲಿ ನಿಮ್ಮ ಪಾಸ್‌ವರ್ಡ್ ಅನ್ನು ಬೇರೆ ಯಾವುದೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳದಿರಲು ಮತ್ತು ನಿಮ್ಮ ಪಾಸ್ವರ್ಡ್ ಗೌಪ್ಯತೆ ಉಳಿಸಿಕೊಳ್ಳಲು ಕಾಳಜಿ ವಹಿಸುವಂತೆ ಬಲವಾಗಿ ಶಿಫಾರಸು ಮಾಡಲಾಗಿದೆ.
(ix) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರಿಗೆ, ಈ ಪ್ರಕಟಣೆಯಲ್ಲಿರುವ ನಿರ್ಣಯಗಳ ಮೇಲೆ ಇ-ಮತದಾನಕ್ಕಾಗಿ ಮಾತ್ರ ವಿವರಗಳನ್ನು ಬಳಸಬಹುದು.
(x) ಕಂಪನಿಯ ಇವಿಎಸ್‌ಎನ್ ಕ್ಲಿಕ್ ಮಾಡಿ.
(xi) ಮತದಾನ ಪುಟದಲ್ಲಿ, ನೀವು ರೆಸಲ್ಯೂಶನ್ ಡಿಸ್ಕ್ರಿಪ್ಷನ್ ಅನ್ನು ನೋಡುತ್ತೀರಿ ಮತ್ತು ಮತದಾನಕ್ಕಾಗಿ ಹೌದು / ಇಲ್ಲ ಆಯ್ಕೆಯನ್ನು ನೋಡುತ್ತೀರಿ. ಬಯಸಿದಂತೆ ಹೌದು ಅಥವಾ ಇಲ್ಲ ಆಯ್ಕೆಯನ್ನು ಆರಿಸಿ. ಹೌದು ಆಯ್ಕೆಯು ನೀವು ರೆಸಲ್ಯೂಶನ್‌ಗೆ ಸಮ್ಮತಿಸುತ್ತೀರಿ ಮತ್ತು ಇಲ್ಲ ಆಯ್ಕೆಯು ನೀವು ರೆಸಲ್ಯೂಶನ್‌ಗೆ ಭಿನ್ನಾಭಿಪ್ರಾಯ ಹೊಂದಿದ್ದೀರಿ ಎಂದು ಸೂಚಿಸುತ್ತದೆ.
(xii) ನೀವು ಸಂಪೂರ್ಣ ರೆಸಲ್ಯೂಶನ್ ವಿವರಗಳನ್ನು ವೀಕ್ಷಿಸಲು ಬಯಸಿದರೆ "RESOLUTIONS FILE LINK" ಕ್ಲಿಕ್ ಮಾಡಿ.
(xiii) ನೀವು ಮತ ಚಲಾಯಿಸಲು ನಿರ್ಧರಿಸಿದ ರೆಸಲ್ಯೂಶನ್ (ಗಳನ್ನು) ಆಯ್ಕೆ ಮಾಡಿದ ನಂತರ, "SUBMIT" ಕ್ಲಿಕ್ ಮಾಡಿ. ದೃಡೀಕರಣ ಪೆಟ್ಟಿಗೆಯನ್ನು ಪ್ರದರ್ಶಿಸಲಾಗುತ್ತದೆ. ನೀವೇನಾದರೂ ನಿಮ್ಮ ಮತವನ್ನು ದೃಡೀಕರಿಸಲು ಬಯಸಿದರೆ, ಸರಿ ಕ್ಲಿಕ್ ಮಾಡಿ, ಇಲ್ಲದಿದ್ದರೆ ನಿಮ್ಮ ಮತವನ್ನು ಬದಲಾಯಿಸಲು, ರದ್ದುಪಡಿಸು ಕ್ಲಿಕ್ ಮಾಡಿ ಮತ್ತು ಅದಕ್ಕೆ ಅನುಗುಣವಾಗಿ ನಿಮ್ಮ ಮತವನ್ನು ಮಾರ್ಪಡಿಸಿ.
(xiv) ರೆಸಲ್ಯೂಶನ್‌ನಲ್ಲಿ ನಿಮ್ಮ ಮತವನ್ನು ದೃಡೀಕರಿಸಿದ ನಂತರ, ನಿಮ್ಮ ಮತವನ್ನು ಮಾರ್ಪಡಿಸಲು ನಿಮಗೆ ಅನುಮತಿಸಲಾಗುವುದಿಲ್ಲ.
(xv) ಮತದಾನ ಪುಟದಲ್ಲಿ ಮುದ್ರಿಸಲು "ಇಲ್ಲಿ ಕ್ಲಿಕ್ ಮಾಡಿ" ಆಯ್ಕೆಯನ್ನು ಕ್ಲಿಕ್ ಮಾಡುವುದರ ಮೂಲಕ ನೀವು ಚಲಾಯಿಸಿದ ಮತಗಳ ಮುದ್ರಣವನ್ನು ಸಹ ತೆಗೆದುಕೊಳ್ಳಬಹುದು.
(xvi) ಡಿಮ್ಯಾಟ್ ಖಾತೆದಾರನು ಲಾಗಿನ್ ಪಾಸ್‌ವರ್ಡ್ ಅನ್ನು ಮರೆತಿದ್ದರೆ, ನಂತರ ಬಳಕೆದಾರ ಐಡಿ ಮತ್ತು ಇಮೇಜ್ ಪರಿಶೀಲನಾ ಕೋಡ್ ಅನ್ನು ನಮೂದಿಸಿ ಮತ್ತು ಕ್ಲಿಕ್ ಮಾಡಿ ಪಾಸ್ವರ್ಡ್ ಮರೆತಿರುವಿರಿ ಮತ್ತು ಸಿಸ್ಟಮ್ ಕೇಳಿದಂತೆ ವಿವರಗಳನ್ನು ನಮೂದಿಸಿ.

ಯಾವುದೇ ಪ್ರಶ್ನೆಯ ಸಂದರ್ಭದಲ್ಲಿ, ಸದಸ್ಯರು ನೋಂದಾಯಿತ ಕಚೇರಿ ವಿಳಾಸ, ಮೇಲೆ ನೀಡಲಾದ ಇಮೇಲ್ ಐಡಿ ಅಥವಾ ನಮ್ಮ ಆರ್‌ಟಿಎಯನ್ನು ಸಂಪರ್ಕಿಸಬಹುದು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ

ದಿನಾಂಕ : 3ನೇ ಜುಲೈ, 2023
ಸ್ಥಳ : ಬೆಂಗಳೂರು

ಮಿತ್ತಲ್ ಸಂಘ್ವಿ
ಕಂಪನಿ ಕಾರ್ಯದರ್ಶಿ

ಮಾನ್ಯ ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶಿಸ್ತು ಪ್ರಾಧಿಕಾರ, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, ಇವರ ಮುಂದೆ
ಇಲಾಖಾ ವಿಚಾರಣೆ ಸಂಖ್ಯೆ: 02/2021

ಕಾರಣ ಕೇಳಿ ನೋಟೀಸ್

ಬೆಂಗಳೂರಿನ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಶಿರಸ್ತೇದಾರರಾಗಿ ಕೆಲಸ ಮಾಡುತ್ತಿದ್ದ ನೀವು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದರಿಂದ ನಿಮ್ಮ ಮೇಲೆ ಇಲಾಖಾ ವಿಚಾರಣೆ ಸಂಖ್ಯೆ: 02/2021ನ್ನು ನಡೆಸಲಾಗಿದ್ದು, ಸದರಿ ಇಲಾಖಾ ವಿಚಾರಣೆಗೂ ನೀವು ಗೈರು ಹಾಜರಾಗಿರುತ್ತೀರಿ. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ನಿಮ್ಮ ಮೇಲಿನ ಆರೋಪಗಳು ಸಾಬೀತಾಗಿರುವುದರಿಂದ, ಕಾರಣ ಕೇಳಿ ನೋಟೀಸ್‌ನ್ನು ಈ ಕಛೇರಿಯಲ್ಲಿ ಲಭ್ಯವಿರುವ ಎರಡು ವಿಳಾಸಗಳಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿ 1) "ವಿಳಾಸದಲ್ಲಿಲ್ಲ" 2)"ಅಂತಹ ವಿಳಾಸವಿಲ್ಲ" ಎಂಬ ಹಿಂಬರಹಗಳೊಂದಿಗೆ ಹಾಗೂ ಕೇಂದ್ರ ಪ್ರೋಸೆಸ್ ವಿಭಾಗದ ಮೂಲಕ ಕಳುಹಿಸಲಾಗಿ "ವಿಳಾಸ ಖಾಲಿ ಮಾಡಿರುತ್ತಾರೆ" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುತ್ತದೆ. ಹೀಗಾಗಿ ಈ ಪತ್ರಿಕಾ ಪ್ರಕಟಣೆಯ ಮೂಲಕ ಕಾರಣ ಕೇಳಿ ನೋಟೀಸನ್ನು ನಿಮಗೆ ನೀಡಲಾಗುತ್ತಿದ್ದು, ನೋಟೀಸು ಪ್ರಕಟವಾದ 15 ದಿನಗಳೊಳಗಾಗಿ ಈ ಬಗ್ಗೆ ನಿಮ್ಮ ಸಮಜಾಯಿಷಿಯನ್ನು ನೀವು ಸಲ್ಲಿಸದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮವಾನುಸಾರ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದನ್ನು ಈ ಮೂಲಕ ನಿಮಗೆ ತಿಳಿಯಪಡಿಸಲಾಗಿದೆ. **ದಿನಾಂಕ: 20 ನೇ ಜೂನ್, 2023.**

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶಿಸ್ತು ಪ್ರಾಧಿಕಾರದ ಆದೇಶದ ಮೇರೆಗೆ,
ವಿಲೇಖನಾಧಿಕಾರಿ, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು

ಇವರಿಗೆ,
ಶ್ರೀ ರಾಘವೇಂದ್ರ ಎಂ.,
ಶಿರಸ್ತೇದಾರ,
ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.
ವಾಸ: 1) ಬಿನ್ ಲೇಟ್ ಮಹಾದೇವ ರಾವ್,
ನಂ.87, ಹಳೇ ಅಂಚೆ ಕಛೇರಿ ರಸ್ತೆ,
ತ್ಯಾಗರಾಜನಗರ, ಬೆಂಗಳೂರು-560028.
2) ನಂ. ಸಿ-61, ಪಿ & ಟಿ ವಸತಿ ಗೃಹಗಳು,
ಸುಲ್ತಾನಪಾಳ್ಯ, ಆರ್.ಟಿ.ನಗರ, ಬೆಂಗಳೂರು.

ವಾಸಾಸಂಇ/ಉನಿ-ಸಿ.ಪಿ/416/ಕೆಎಸ್‌ಎಂಸಿಎ/2023-24

ಮಾನ್ಯ ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶಿಸ್ತು ಪ್ರಾಧಿಕಾರ, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು, ಇವರ ಮುಂದೆ
ಇಲಾಖಾ ವಿಚಾರಣೆ ಸಂಖ್ಯೆ: 03/2021

ಕಾರಣ ಕೇಳಿ ನೋಟೀಸ್

ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯದಲ್ಲಿ ಜವಾನರಾಗಿ ಕೆಲಸ ಮಾಡುತ್ತಿದ್ದ ನೀವು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದರಿಂದ ನಿಮ್ಮ ಮೇಲೆ ಇಲಾಖಾ ವಿಚಾರಣೆ ಸಂಖ್ಯೆ: 03/2021ನ್ನು ನಡೆಸಲಾಗಿದ್ದು, ಸದರಿ ಇಲಾಖಾ ವಿಚಾರಣೆಗೂ ನೀವು ಗೈರು ಹಾಜರಾಗಿರುತ್ತೀರಿ. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ನಿಮ್ಮ ಮೇಲಿನ ಆರೋಪಗಳು ಸಾಬೀತಾಗಿರುವುದರಿಂದ, ಕಾರಣ ಕೇಳಿ ನೋಟೀಸ್‌ನ್ನು ಈ ಕಛೇರಿಯಲ್ಲಿ ಲಭ್ಯವಿರುವ ನಿಮ್ಮ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗಿ "ಅಪೂರ್ಣ ವಿಳಾಸ" ಎಂಬ ಹಿಂಬರಹದೊಂದಿಗೆ ಹಾಗೂ ಕೇಂದ್ರ ಪ್ರೋಸೆಸ್ ವಿಭಾಗದ ಮೂಲಕ ಕಳುಹಿಸಲಾಗಿ "ವಿಳಾಸ ಬಿಟ್ಟಿರುತಾರೆ, ಮೊಬೈಲ್ ಮುಖಾಂತರ ವಿಚಾರ ತಿಳಿಸಿದ್ದರೂ ಸಹ ಬಂದು ತೆಗೆದು ಕೊಳ್ಳದ ಕಾರಣ ವಾಪಸ್" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುತ್ತದೆ. ಹೀಗಾಗಿ ಈ ಪತ್ರಿಕಾ ಪ್ರಕಟಣೆಯ ಮೂಲಕ ಕಾರಣ ಕೇಳಿ ನೋಟೀಸನ್ನು ನಿಮಗೆ ನೀಡಲಾಗುತ್ತಿದ್ದು, ನೋಟೀಸು ಪ್ರಕಟವಾದ 15 ದಿನಗಳೊಳಗಾಗಿ ಈ ಬಗ್ಗೆ ನಿಮ್ಮ ಸಮಜಾಯಿಷಿಯನ್ನು ನೀವು ಸಲ್ಲಿಸದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾನುಸಾರ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂಬುದನ್ನು ಈ ಮೂಲಕ ನಿಮಗೆ ತಿಳಿಯಪಡಿಸಲಾಗಿದೆ. **ದಿನಾಂಕ: 20 ನೇ ಜೂನ್, 2023.**

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಶಿಸ್ತು ಪ್ರಾಧಿಕಾರದ ಆದೇಶದ ಮೇರೆಗೆ,
ವಿಲೇಖನಾಧಿಕಾರಿ, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು

ಇವರಿಗೆ,
ಶ್ರೀ ವೆಂಕಟೇಶಪ್ಪ,
ಜವಾನರು,
ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು.
ವಾಸ: ನಂ. 12, 12ನೇ ಅಡ್ಡರಸ್ತೆ,
12ನೇ ಮುಖ್ಯರಸ್ತೆ, ಅಟ್ಟೂರು ಬಡಾವಣೆ,
ಯಲಹಂಕ, ಬೆಂಗಳೂರು-560 064

ವಾಸಾಸಂಇ/ಉನಿ-ಸಿ.ಪಿ/416(A)/ಕೆಎಸ್‌ಎಂಸಿಎ/2023-24

ವಿದ್ಯಾರ್ಥಿ ಕೊಲೆ

ಬೆಂಗಳೂರು: ಮಂಜುನಾಥ ನಗರದಲ್ಲಿ ಸುಹೈಲ್‌ನನ್ನು (17) ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿ ಪರಾರಿಯಾಗಿರುವ ಅನುಮಾನ ವ್ಯಕ್ತವಾಗಿದೆ. ಮೃತ ಸುಹೈಲ್, ಸ್ಥಳೀಯ ಕಾಲೇಜಿನಲ್ಲಿ ಪ್ರಥಮ ಪಿಯು ಓದುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

PUBLIC NOTICE

The General public are hereby inform that my client P. Pruthviraj, S/o J.N. Pushparaju is the absolute owner in possession in respect of Sites No.6 and 6A, lying with in the Survey number 51 of Doddabettahalli Village, Yelahanka Hobli, Bengaluru North Taluk and whereas my client has filed a suit in O.S.No.974/2020 against Smt. Saraswathi Naidu and Adhinarayana Reddy and another for the relief of permanent injunction and the Hon'ble Court was pleased to grant an order of Temporary injunction on merits vide order dated : 03-03-2022 and the said suit is pending for consideration before the Junior Civil Judge, Bengaluru Rural District, Bengaluru. The said Saraswathi Naidu is falsely claiming that the suit schedule is Site No.6, Khatha No. 4848/51/6 lying within the Sy.No.51 of Doddabettahalli Village and she is making attempts to alienate and encumber the same in favour of third party purchaser. Hence the general public are hereby caution not to deal with her in any manner with regard to the schedule property. Inspite of the same if they were to do so, they will be doing at their own cost, for which my client is not responsible and inspite of this public notice, the general public were to deal with the schedule property, same would not bind my client.

SCHEDULE

All that piece and parcel of Site bearing No.6A, Doddabettahalli Village, Khatha No. 51/16/16/6A (Khatha No.425) situated Doddabettahalli Village, Yelahanka Hobli, Bengaluru North Taluk, now within the limits of Bruhat Bengaluru Mahanagara Palike, Bengaluru measuring East to West: 40 feet and North to South: 80 feet and bounded on:

East by : Site No.6 belongs to P. Pruthviraj, West by : Site No.7, North by : Private property, South by : 30 feet Road.

K.H. Thimmaiah, Advocate
Dikshit Associates,
No.612, Chandra Building, Avenue Road,
Bangalore-560 002. Mob: 7892956934
Dated : 03-07-2023

PUBLIC NOTICE

Our client ('**Client**') is desirous of entering into sale and development transactions in connection with the immovable property morefully described in the '**Schedule**' hereto and hereinafter referred to as '**Schedule Property**'. The present owner of the Schedule Property being Mr. Srinivas, son of M. Venkataramanappa ('**Owner**') has represented that he is the absolute owner of the '**Schedule Property**', as detailed in the Schedule hereto, with unrestricted rights of alienation over the same.

Notice is hereby given to the general public that any person/s other than the present Owner asserting any right, title, charge, lien, interest or claims whatsoever in respect of the Schedule Property are hereby called upon to submit to the undersigned, their objections, if any, to the proposed transaction in connection with the Schedule Property. The said objections must be in writing, together with documentary proof of such claim/s and should reach us at the address given below within a period of 15 (Fifteen) days from the date of publication of this Notice. If no such objections are received, it shall be deemed that no one else other than the present Owner has any right, title, interest or claim whatsoever in respect of the Schedule Property and our Client would be at liberty to proceed with the transaction in connection with the Schedule Property.

SCHEDULE
(Description of the Schedule Property)

All that piece and parcel of immovable property bearing Survey No. 39/11 (earlier part of Survey No. 39/2), measuring 01 Acres 29 Guntas (including 02 Guntas of Kharab land) situated at Karahalli Village, Kundana Hobli, Devanahalli Taluk, Bangalore Rural District and bounded on the:

East by : Road and land owned by Munegowda and Nagesh;
West by : Land owned by Ashwath S/o. Late Munishamappa and Gopalagowda;
North by : Remaining portion of land in Survey No. 39/2 owned by V. Manjunatha, son of Venkataramanappa; and
South by : Lands in Survey No. 40.

Tejas Khiraiya, Partner
Dharma Law Partners
507, Westminster Building,
Cunningham Road, Bangalore - 560052.
Date: 03.07.2023 Place: Bangalore

ದೊರೆಯದ ಆರ್ಥಿಕ ನೆರವು • ಕೃಷಿ ಕ್ಷೇತ್ರದ ಆಸಕ್ತರಿಗೆ ನಿರಾಸೆ • ಸರ್ಕಾರದ ಸೂಚನೆಯಂತೆ ಅಧಿಸೂಚನೆ ವಾಪಸ್

ಕೃಷಿ ವಿ.ವಿಗಳಲ್ಲಿ ಡಿಪ್ಲೊಮಾ ಕೋರ್ಸ್ ಸ್ಥಗಿತ

• ಆದಿತ್ಯ ಕೆ.ಎ.

ಬೆಂಗಳೂರು: ಕಡಿಮೆ ಖರ್ಚಿನಲ್ಲಿ ಕೃಷಿ, ಅರಣ್ಯ ಹಾಗೂ ರೇಷ್ಮೆ ಡಿಪ್ಲೊಮಾ ಪೂರ್ಣಗೊಳಿಸಿ ಸ್ವಯಂ ಉದ್ಯೋಗ ಅಥವಾ ಖಾಸಗಿ ಕ್ಷೇತ್ರದಲ್ಲಿ ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದ್ದ 'ಡಿಪ್ಲೊಮಾ ಕೋರ್ಸ್'ಗಳನ್ನು ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಸ್ಥಗಿತಗೊಳಿಸಲು ಮುಂದಾಗಿವೆ.

ಈ ಹಿಂದೆ ಕೋರ್ಸ್ ಆರಂಭಕ್ಕೆ ಹೊರಡಿಸಿದ್ದ ಅಧಿಸೂಚನೆಯನ್ನು ಸರ್ಕಾರದ ಸೂಚನೆಯಂತೆ ವಿಶ್ವವಿದ್ಯಾಲಯಗಳು ವಾಪಸ್ ಪಡೆದುಕೊಳ್ಳುತ್ತಿವೆ. ಇದರಿಂದ ಕೃಷಿ ಕ್ಷೇತ್ರದ ಆಸಕ್ತ ಅಭ್ಯರ್ಥಿಗಳು ನಿರಾಸೆಗೆ ಒಳಗಾಗಿದ್ದಾರೆ. ಇದೇ ಶೈಕ್ಷಣಿಕ ಸಾಲಿನಿಂದಲೇ ಎರಡು ವರ್ಷದ ಡಿಪ್ಲೊಮಾ ಕಲಿಯಲು ಅವಕಾಶ ಸಿಗುವುದಿಲ್ಲ.

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿ, ಅರಣ್ಯ ಡಿಪ್ಲೊಮಾ ಕೋರ್ಸ್‌ಗಳಿದ್ದವು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವ್ಯಾಪ್ತಿಯ ಮಂಡ್ಯದ ಕೃಷಿ ಕಾಲೇಜಿನಲ್ಲಿ ಕೃಷಿ, ಚಿಂತಾಮಣಿ ಕೃಷಿ ಕಾಲೇಜಿನಲ್ಲಿ ರೇಷ್ಮೆಗೆ ಸಂಬಂಧಿಸಿದ ಕೋರ್ಸ್‌ಗಳಿದ್ದವು. ಧಾರವಾಡ ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಗಳು ಅಧಿಸೂಚನೆ ಹಿಂಪಡೆದಿರುವ ಬಗ್ಗೆ ಅಧಿಕೃತವಾಗಿ ತಿಳಿಸಿವೆ. ಆದರೆ, ಕಾರಣ ನಮೂದಿಸಿಲ್ಲ.

ರಾಯಚೂರು, ಶಿವಮೊಗ್ಗ, ಬೀದರ್ ಸೇರಿದಂತೆ ಉಳಿದ ವಿಶ್ವವಿದ್ಯಾಲಯಗಳಲ್ಲೂ ಅಧಿಕೃತ ಆದೇಶ ಹೊರಡಿಸುವುದು ಬಾಕಿಯಿದೆ. ಸರ್ಕಾರದ ಸೂಚನೆಯಿರುವ ಕಾರಣಕ್ಕೆ ಅಲ್ಲಿಯೂ ಈ ಕೋರ್ಸ್ ಕಲಿಕೆಗೆ ಅವಕಾಶ ಸಿಗುವುದಿಲ್ಲ ಎಂದು ಮೂಲಗಳು ತಿಳಿಸಿವೆ. ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಷಯದ ಡಿಪ್ಲೊಮಾ ಕೋರ್ಸ್ ಇತ್ತು.

'ಕೃಷಿ ಸಹಾಯಕರ ನೇಮಕದ ಉದ್ದೇಶದಿಂದ ವಿವಿಧ ವಿಷಯಗಳ ಡಿಪ್ಲೊಮಾ ಕೋರ್ಸ್‌ಗಳನ್ನು 10 ವರ್ಷಗಳ ಹಿಂದೆ ಆರಂಭಿಸ ಲಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಸ್ಸೆಸ್ಸೆಲ್ಸಿ ಪಡೆದ ತಲಾ 50 ವಿದ್ಯಾರ್ಥಿಗಳಿಗೆ ಪ್ರತಿವರ್ಷ ಪ್ರವೇಶ ನೀಡಲಾಗುತ್ತಿತ್ತು. ಡಿಪ್ಲೊಮಾ ಕಲಿತವರಿಗೆ ಬಿಎಸ್ಸಿ (ಕೃಷಿ) ಪದವಿಗೆ ಸೇರಲು ಮೀಸಲಾತಿ ಇತ್ತು. ಆದರೆ, ಈ ವಿದ್ಯಾರ್ಹತೆಗೆ ಸರ್ಕಾರಿ ನೌಕರಿ ಲಭಿಸುತ್ತಿರಲಿಲ್ಲ. ಕೋರ್ಸ್ ಮುಗಿಸಿದವರು ಕೃಷಿ ಪರಿಕರ ಮಾರಾಟ ಮಳಿಗೆ, ಬಿತ್ತನೆ ಬೀಜ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರು. ಖಾಸಗಿ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶಗಳು ಹೆಚ್ಚಿದ್ದವು' ಎಂದು ಪ್ರಾಧ್ಯಾಪಕರೊಬ್ಬರು ತಿಳಿಸಿದರು.

'ಹೊಸ ಶಿಕ್ಷಣ ನೀತಿ ಜಾರಿಯಾದರೆ ಬೇರೆ ಕೋರ್ಸ್‌ಗಳಲ್ಲಿಯೂ ಇದೇ ಡಿಪ್ಲೊಮಾ ವಿಷಯವನ್ನೂ ಕಲಿಯಬಹುದಾಗಿದೆ. ಆ ಕಾರಣಕ್ಕೆ ಈ ಕೋರ್ಸ್‌ಗಳನ್ನು ಸ್ಥಗಿತಗೊಳಿಸುವಂತೆ ಸೂಚಿಸಿರಬಹುದು' ಎಂದು ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಅನುದಾನದ ಕೊರತೆ

'ಈ ಕೋರ್ಸ್‌ಗಳಿಗೆ ಸರ್ಕಾರವು ಆರ್ಥಿಕ ನೆರವು ನೀಡುತ್ತಿರಲಿಲ್ಲ. ಕೋರ್ಸ್ ಆರಂಭಿಸುವಾಗ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದಾಗಿ ಭರವಸೆ ನೀಡಿತ್ತು. ಕ್ರಮೇಣ ಅದನ್ನು ನೀಡಲಿಲ್ಲ. ವರ್ಷದಿಂದ ವರ್ಷಕ್ಕೆ ಕೃಷಿ ವಿ.ವಿಗಳಿಗೆ ಆರ್ಥಿಕ ಹೊರೆ ಹೆಚ್ಚುತ್ತಲೇ ಹೋಯಿತು. ಪ್ರತ್ಯೇಕ ಕೊಠಡಿ, ಪ್ರಯೋಗಾಲಯದ ಸೌಕರ್ಯವನ್ನು ಸರ್ಕಾರವು ಕಲ್ಪಿಸಲಿಲ್ಲ. ಬೋಧನಾ ಸಿಬ್ಬಂದಿಯನ್ನೂ ನೇಮಿಸಲಿಲ್ಲ. ಬಹುತೇಕ ಕಡೆ ಪದವೀಧರರಿಗೆ ಬೋಧಿಸುತ್ತಿದ್ದ ಪ್ರಾಧ್ಯಾಪಕರೇ ಡಿಪ್ಲೊಮಾ ವಿದ್ಯಾರ್ಥಿಗಳಿಗೂ ಕಲಿಸುತ್ತಿದ್ದರು' ಎಂದು ಕೃಷಿ ವಿಶ್ವವಿದ್ಯಾಲಯವೊಂದರ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.



ಉನ್ನತ ಮಟ್ಟದ ಸಮಿತಿ ನಿರ್ದೇಶನದಂತೆ ಅಧಿಸೂಚನೆ ವಾಪಸ್ ಪಡೆಯಲಾಗಿದೆ. ದ್ವಿತೀಯ ವರ್ಷದ ವಿದ್ಯಾರ್ಥಿಗಳು ಕೋರ್ಸ್ ಪೂರ್ಣಗೊಳಿಸುತ್ತಾರೆ. ಹೊಸಪ್ರವೇಶವಿಲ್ಲ.

ಬಸವೇಗೌಡ
ಕುಲಸಚಿವ, ಬೆಂಗಳೂರು ಕೃಷಿ ವಿ.ವಿ

'ಬುಡಕಟ್ಟು ಜನರಿಗೆ ಬೇಕಿದೆ ಸುಧಾರಣೆಯ ದಾರಿ'

ಪ್ರಜಾವಾಣಿ ವಾರ್ತೆ



ರಾಜಭವನದಲ್ಲಿ ಸೋಮವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬುಡಕಟ್ಟು ಮಹಿಳೆ ಜತೆ ಚರ್ಚಿಸಿದರು

ಬೆಂಗಳೂರು: ಬುಡಕಟ್ಟು ಜನರಿಗೆ ಸುಧಾರಣೆಯ ದಾರಿ ತೋರಿದರೆ ಅವರು ಅದೇ ದಾರಿಯಲ್ಲಿ ಸಾಗುತ್ತಾರೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ರಾಜಭವನದಲ್ಲಿ ಸೋಮವಾರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ರಾಜ್ಯದ ವಿವಿಧ ಜಿಲ್ಲೆಗಳ ನೈಜ ಬುಡಕಟ್ಟು ಸಮುದಾಯಗಳ ಸದಸ್ಯರ ಜತೆಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕದಲ್ಲಿ 43 ಲಕ್ಷ ಪರಿಶಿಷ್ಟ ವರ್ಗದ ಜನಸಂಖ್ಯೆಯಿದೆ. ನೈಜ ದುರ್ಬಲ ಬುಡಕಟ್ಟುಗಳೆಂದು ಗುರುತಿಸ ಲಾಗಿರುವ ಜೇನುಕುರುಬರು ಹಾಗೂ ಕೊರಗ ಸಮುದಾಯಗಳ ಜನಸಂಖ್ಯೆ ಸುಮಾರು 50 ಸಾವಿರದಷ್ಟಿದೆ. ರಾಜ್ಯದ ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಆಶ್ರಮ ಶಾಲೆಗಳಲ್ಲಿ ನೈಜ ದುರ್ಬಲರಿಗಾಗಿ ವಿಶೇಷ ಸ್ಥಾನ, ಗಮನ ನೀಡಬೇಕು. ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು ಎಂದರು.

ಬುಡಕಟ್ಟು ಜನ ಮುಕ್ತವಾಗಿ ಮಾತನಾಡಲು ಹಿಂಜರಿದಾಗ ರಾಷ್ಟ್ರಪತಿ, ಜನರ ಆಸನಗಳ ಬಳಿ ತೆರಳಿ ಆಪ್ತವಾಗಿ ಮಾತನಾಡಿಸಿದರು. ಅವರಿಗೆ ಮನೆ ಇದೆಯೇ, ಸರ್ಕಾರ ಮನೆ ಕಟ್ಟಿಸಿಕೊಟ್ಟಿದೆಯೇ, ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆಯೇ, ಅರಣ್ಯಭೂಮಿಯಲ್ಲಿ ವಾಸವಾಗಿರುವವರು ಯಾರಿದ್ದೀರಿ ಎಂಬ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು. ಅವರ ಸ್ಥಳೀಯ ಭಾಷೆಯಲ್ಲಿಯೇ ಮಾತನಾಡಲು ಪ್ರೋತ್ಸಾಹಿಸಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವ ಬಿ.ನಾಗೇಂದ್ರ, ಪ್ರಾಧ್ಯಾಪಕಿ ಡಾ.ಸವಿತಾ, ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನಿರ್ದೇಶಕ ಪಿ.ಎಸ್.ಕಾಂತರಾಜು ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಬುಡಕಟ್ಟು ಜನರೊಂದಿಗೆ ರಾಷ್ಟ್ರಪತಿ ಸಂವಾದ
- ಸ್ಥಳೀಯ ಭಾಷೆಯಲ್ಲೇ ಮಾತನಾಡಲು ಮುರ್ಮು-ಪ್ರೋತ್ಸಾಹ

ಕಿರುನಾಟಕೋತ್ಸವ: ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ



ಬೆಂಗಳೂರು ಕಿರುನಾಟಕೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತೀರ್ಪುಗಾರರು, ರಂಗಕರ್ಮಿಗಳ ಜೊತೆಯಲ್ಲಿ ಪ್ರಶಸ್ತಿ ಪಡೆದವರು

ಬೆಂಗಳೂರು: ಬೆಂಗಳೂರು ಕಿರುನಾಟಕೋತ್ಸವ -2023ದಲ್ಲಿ ತೀರ್ಪುಗಾರರಿಂದ 'ಚೆನ್ನುಡಿ' ಹಾಗೂ ಪ್ರೇಕ್ಷಕರ ಆಯ್ಕೆಯಿಂದ 'ಎತ್ತ ಮುಖ ಮಾಡಲಯ್ಯ ನಾ' ಅತ್ಯುತ್ತಮ ನಾಟಕ ಪ್ರಶಸ್ತಿ ಪಡೆದುಕೊಂಡಿವೆ.

ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿ ಸಹಯೋಗದೊಂದಿಗೆ ಆಯೋಜಿಸಿದ್ದ ನಾಟಕೋತ್ಸವ ಆಯೋಜಿಸಲಾಗಿತ್ತು.

ರಂಗಕರ್ಮಿಗಳಾದ ಲಕ್ಷ್ಮಿ ಚಂದ್ರಶೇಖರ್, ಗೌರಿ ದತ್ತು ಮತ್ತು ಡಾ. ಬೇಲೂರು ರಘುನಂದನ್ ಅವರು ಅಂತಿಮ ಹಂತದ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ರಂಗಕರ್ಮಿಗಳಾದ ಬಿ. ಸುರೇಶ, ಪ್ರಕಾಶಕರಾದ ಜಮೀಲ್ ಸಾವಣ್ಣ, ಕಲಾತ್ಮಕ ನಿರ್ದೇಶಕರಾದ ಹನು ರಾಮಸಂಜೀವ ಮತ್ತು ನಂದೀಶ್ ದೇವ್, ತಾಂತ್ರಿಕ ನಿರ್ದೇಶರಾದ ಮಂಜು ನಾರಾಯಣ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಶಸ್ತಿ ವಿಜೇತರು : ಅತ್ಯುತ್ತಮ ನಾಟಕ (ತೀರ್ಪುಗಾರರ ಆಯ್ಕೆ): 'ಚೆನ್ನುಡಿ'. ತಂಡ- ಬೆಂಗಳೂರು ಥಿಯೇಟರ್ ಆನ್ಸಂಬಲ್.

ಅತ್ಯುತ್ತಮ ನಾಟಕ (ಪ್ರೇಕ್ಷಕರ ಆಯ್ಕೆ): 'ಎತ್ತ ಮುಖ ಮಾಡಲಯ್ಯ ನಾ'. ತಂಡ- ಉತ್ಕರ್ಷ್ ಅಭಿನಯ.

'ಆರ್ .ನಾಗೇಶ್' ಅತ್ಯುತ್ತಮ ನಿರ್ದೇಶನ: ರೇವಂತ್ ಆರ್ ಮಾಳಿಗೆ. ನಾಟಕ- ಕನ್ನಡಿಗ(ಳು). ತಂಡ - ಕರಣ ಥಿಯೇಟರ್

'ಸಂಚಾರಿ ವಿಜಯ್' ಅತ್ಯುತ್ತಮ ನಟ: ಪುನೀತ್ ಆರ್.ಎನ್. ನಾಟಕ- ಎತ್ತ ಮುಖ ಮಾಡಲಯ್ಯ ನಾ. ತಂಡ- ಉತ್ಕರ್ಷ್ ಅಭಿನಯ.

'ಉಮಾಶ್ರೀ' ಅತ್ಯುತ್ತಮ ನಟಿ: ರಾಣಿ ಪಿ. ವಿಶ್ವನಾಥ್. ನಾಟಕ- ಕನ್ನಡಿಗ(ಳು).

ಅತ್ಯುತ್ತಮ ನಾಟಕ ವಿನ್ಯಾಸ: ಅಭಿಮನ್ಯು ಭೂಪತಿ. ನಾಟಕ- ಚೆನ್ನುಡಿ.

ಅತ್ಯುತ್ತಮ ಕಥೆ (ಸ್ವರಚಿತ): ಅಭಿಮನ್ಯು ಭೂಪತಿ ಮತ್ತು ರೋಹಿತ್ ಎಚ್.ಎನ್. ನಾಟಕ- ಚೆನ್ನುಡಿ.

ಅತ್ಯುತ್ತಮ ಭಿತ್ತಿಪತ್ರ ವಿನ್ಯಾಸ: ಶಶಾಂಕ್ ಆರ್ ಮತ್ತು ವರ್ಷ ಎಸ್. ನಾಟಕ - ಕನ್ನಡಿಗ(ಳು).

ತೀರ್ಪುಗಾರರ ವಿಶೇಷ ಮೆಚ್ಚುಗೆ ಬಾಲ ನಟಿ: ಪುನರ್ವಿ. ನಾಟಕ- ಕನ್ನಡವೆಂದರೆ ಈಗಿನ ಜನರೇಶನ್‌ಗೆ ತೊಂದರೆ. ತಂಡ - ಮಲೆನಾಡು ರಂಗ ತಂಡ.

ಪ್ರಕಾಶ ಭಟ್ಟರಿಗೆ ವ್ಯಾಸಜ್ಯೋತಿ ಪ್ರಶಸ್ತಿ

ಬೆಂಗಳೂರು: ಭಾರತೀಯ ವಿದ್ಯಾಭವನ ಮತ್ತು ಜ್ಯೋತಿ ಚಾರಿಟಬಲ್ ಟ್ರಸ್ಟ್ ನೀಡುವ 'ವ್ಯಾಸಜ್ಯೋತಿ ಪ್ರಶಸ್ತಿ'ಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ದಾನಂದಿಯ ವಿದ್ವಾನ್ ಡಿ.ಎಸ್. ಪ್ರಕಾಶ ಭಟ್ಟ ಅವರನ್ನು ಆಯ್ಕೆ ಮಾಡಲಾಗಿದೆ.

ವಿವಿಧ ವೇದ- ಸಂಸ್ಕೃತ ಪಾಠಶಾಲೆಗಳಲ್ಲಿ 48 ವರ್ಷ ಅಧ್ಯಾಪನ ವೃತ್ತಿ ಮಾಡಿದ್ದಾರೆ. ಸದ್ಯ 'ವೇದಪ್ರಕಾಶ ಗುರುಕುಲಂ'ನಲ್ಲಿ ಅಧ್ಯಾಪಕ ಪ್ರಕಾಶ ಭಟ್ಟರಿಗೆ ಇದೇ 7ರಂದು ಬೆಳಿಗ್ಗೆ 9.30ಕ್ಕೆ ವಿದ್ಯಾಭವನ ದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಜ್ಯೋತಿ ಸಮೂಹಸಂಸ್ಥೆಗಳ ಅಧ್ಯಕ್ಷ ಎಂ. ನರಸಿಂಹನ್ ಪ್ರಶಸ್ತಿ ಪ್ರದಾನ ಮಾಡುವರು. 'ಗುರುವಿನ ಮಹತ್ವ' ಕುರಿತು ಎಂ. ಸಿ. ಪ್ರಕಾಶ್ ಉಪನ್ಯಾಸ ನೀಡುವರು ಎಂದು ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದ್ದಾರೆ.



ನಿಧನ ವಾರ್ತೆ

ಸಿದ್ದೇಶ್ ಯಾದವ್



ಚಿತ್ರದುರ್ಗ: ಬಿಜೆಪಿಯ ಬಳ್ಳಾರಿ ವಿಭಾಗದ ಪ್ರಭಾರಿ, ನಗರದ ನಿವಾಸಿ ಎಸ್. ಸಿದ್ದೇಶ್ ಯಾದವ್ (49) ಸೋಮವಾರ ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾದರು.

ಬೆಂಗಳೂರು ಕಚೇರಿಯಲ್ಲಿ ಆಯೋಜಿಸಿದ್ದ ಪಕ್ಷದ ಸಭೆಯಲ್ಲಿ ಪಾಲ್ಗೊಂಡಿದ್ದ ಅವರು, ಸಭೆ ನಡೆಯುತ್ತಿದ್ದಾಗಲೇ ಹೃದಯಾಘಾತಕ್ಕೆ ಒಳಗಾದರು. ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಹಿರಿಯೂರು ತಾಲ್ಲೂಕಿನ ಬಸಪ್ಪನ ಮಾಳಿಗೆ ಗ್ರಾಮದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನಗರ ಕಾರ್ಯದರ್ಶಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಹಾಗೂ ಜಿಲ್ಲಾ ಪ್ರಮುಖರಾಗಿ ಕಾರ್ಯನಿರ್ವಹಿಸಿದ್ದರು. ಬಿಜೆಪಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಾಗೂ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು. 2013ರ ವಿಧಾನಸಭಾ ಚುನಾವಣೆಯಲ್ಲಿ ಹಿರಿಯೂರು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಪಕ್ಷದ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ, ರಾಜ್ಯ ಸ್ಲಂ ಮೋರ್ಚಾ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಪಾಪಮ್ಮ



ಬೊಮ್ಮನಹಳ್ಳಿ: ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ ಅವರ ತಾಯಿ ಪಾಪಮ್ಮ (83) ಸೋಮವಾರ ನಿಧನರಾದರು. ಅವರು ಕೆಲವು ದಿನಗಳಿಂದ ವಯೋ ಸಹಜ ಕಾಯಿಲೆಗಳಿಂದ ಬಳಲುತ್ತಿದ್ದರು.

ಹೊಂಗಸಂದ್ರದ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಚಿವರಾದ ರಾಮಲಿಂಗಾರೆಡ್ಡಿ, ಜಮೀರ್ ಅಹಮ್ಮದ್ ಖಾನ್, ಶಾಸಕರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಎಸ್.ಆರ್.ವಿಶ್ವನಾಥ್, ಬಿ.ವೈ.ವಿಜಯೇಂದ್ರ, ರವಿ ಸುಬ್ರಮಣ್ಯ, ಮುನಿರಾಜು, ಸಂಸದ ತೇಜಸ್ವಿ ಸೂರ್ಯ ಅಂತಿಮ ದರ್ಶನ ಪಡೆದರು.

ಹೊಂಗಸಂದ್ರ ಅವರ ಜಮೀನಿನಲ್ಲಿ ಸೋಮವಾರ ಸಂಜೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೇತ್ರಾಧಿಕಾರಿ ವೆಂಕಟೇಶ್



ಬೆಂಗಳೂರು: ನಗರದ ಮಿಂಟೊ ಕಣ್ಣಿನ ಆಸ್ಪತ್ರೆಯ ನೇತ್ರಾಧಿಕಾರಿ ಡಾ.ಎಂ.ವೆಂಕಟೇಶ್ (57) ಅವರು ಶನಿವಾರ ರಾತ್ರಿ ನಿಧನರಾದರು.

ನಗರದ ನಾಗರಬಾವಿಯಲ್ಲಿ ನೆಲೆಸಿದ್ದ ಅವರು, ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಪ್ರೆಸ್‌ಕ್ಲಬ್ ಆಫ್ ಬೆಂಗಳೂರಿನ ಸಹ ಸದಸ್ಯರಾಗಿದ್ದ ವೆಂಕಟೇಶ್ ಅವರು, ರಾಜ್ಯ ನೇತ್ರಾಧಿಕಾರಿಗಳ ಸಂಘದ ಅಧ್ಯಕ್ಷರೂ ಆಗಿದ್ದರು. ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಕೆಲಸ ಮಾಡಿದ್ದರು. ವೆಂಕಟೇಶ್ ಅವರಿಗೆ ಹಲವು ಪ್ರಶಸ್ತಿಗಳೂ ಸಂದಿವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ತೊಂಡೇಬಾವಿಯ ಸಮೀಪದ ಅವರ ಸ್ವಂತ ಜಮೀನಿನಲ್ಲಿ ಭಾನುವಾರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಲಿನ್ಯದಿಂದ ಮುಕ್ತವಾಗಿಲ್ಲ • ವೃದ್ಧಿಯಾಗದ ನೀರಿನ ಗುಣಮಟ್ಟ • ಪರಿಸರಸ್ನೇಹಿ ವಾತಾವರಣವಿಲ್ಲ

ಕೆರೆಗಳ ಅಭಿವೃದ್ಧಿಗೆ ₹2 ಸಾವಿರ ಕೋಟಿ ವೆಚ್ಚ

ಜೀವವೈವಿಧ್ಯ ವೃದ್ಧಿಗಿಲ್ಲ ಒತ್ತು • ಸಿವಿಲ್ ಕಾಮಗಾರಿಗಳಿಗೆ ಪ್ರಾಶಸ್ತ್ಯ

ವಾಕಿಂಗ್–ಜಾಗಿಂಗ್ ಪಾಥ್, ಸೌಂದರ್ಯೀಕರಣಕ್ಕೆ ಅತಿವೆಚ್ಚ

₹2,322.55 ಕೋಟಿ ಒಟ್ಟು ವೆಚ್ಚ (ಬಿಬಿಎಂಪಿ+ಬಿಡಿಎ)

₹1,891.94 ಕೋಟಿ ಬಿಬಿಎಂಪಿಯಿಂದ ಒಟ್ಟು ವೆಚ್ಚ

₹1405.28 ಕೋಟಿ 2018–19ರಿಂದ 2022–23ರವರೆಗೆ ಅನುಮೋದನೆಯಾದ ಡಿಪಿಆರ್‌ನಲ್ಲಿನ ಮೊತ್ತ (99 ಕೆರೆ)

₹359.81 ಕೋಟಿ 2010–11ರಿಂದ 2017–18ರವರೆಗೆ ಮಾಡಿರುವ ವೆಚ್ಚ (65 ಕೆರೆ)


₹50 ಲಕ್ಷ 75 ಕೆರೆಗಳಿಗೆ ಸಿಸಿ ಟಿವಿ ಕ್ಯಾಮೆರಾ ಅಳವಡಿಕೆಗೆ

₹36.85 ಕೋಟಿ 102 ಕೆರೆಗಳಿಗೆ ತೂಬು ಅಳವಡಿಸಲು

₹470.61 ಕೋಟಿ ಬಿಡಿಎ ವೆಚ್ಚ

₹104.61 ಕೋಟಿ 12 ಕೆರೆಗಳ ಅಭಿವೃದ್ಧಿ


₹366 ಕೋಟಿ ಬೆಳ್ಳಂದೂರು ಕೆರೆ;₹248 ಕೋಟಿ; ವರ್ತೂರು ಕೆರೆ;₹118 ಕೋಟಿ


ಹೊಸ ರೂಪದಲ್ಲಿ ಹಲಸೂರು ಕೆರೆ

211 ಒಟ್ಟು ಕೆರೆಗಳು | **5** ಬಿಡಿಎ ವಶದಲ್ಲಿ | **4** ಅರಣ್ಯ ಇಲಾಖೆ ವಶದಲ್ಲಿ | **202** ಬಿಬಿಎಂಪಿ ವಶದಲ್ಲಿರುವುದು

ಸಂಖ್ಯೆ	
114	ಅಭಿವೃದ್ಧಿಯಾಗಿವೆ
41	ಅಭಿವೃದ್ಧಿ ಹಂತದಲ್ಲಿವೆ
1	ಟೆಂಡರ್ ಪ್ರಕ್ರಿಯೆಯಲ್ಲಿದೆ
27	ಅಭಿವೃದ್ಧಿ ಮಾಡಬೇಕಿದೆ
19	ಬಳಸಲು ಸಾಧ್ಯವಾಗದ ಕೆರೆಗಳು




ಸ್ಯಾಂಕಿ ಕೆರೆ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಕೆರೆಗಳ ನಗರಿ'ಯಲ್ಲಿ ಜೀವಂತ ಕೆರೆಗಳ ಸಂಖ್ಯೆಯ ಬಗ್ಗೆ ಜಿಲ್ಲಾಡಳಿತ ಹಾಗೂ ಬಿಬಿಎಂಪಿ ನಡುವೆ ಸಾಕಷ್ಟು ಗೊಂದಲವಿದ್ದರೂ, ನಗರದಲ್ಲಿ 156 ಕೆರೆಗಳ ಅಭಿವೃದ್ಧಿಗೆ ₹2 ಸಾವಿರಕ್ಕೂ ಹೆಚ್ಚು ಹಣ ವೆಚ್ಚ ಮಾಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 211 ಕೆರೆಗಳಿದ್ದು, 2010ರಿಂದ ಈವರೆಗೆ 156 ಕೆರೆಗಳು ಮಾತ್ರ ಅಭಿವೃದ್ಧಿ ಪಥದಲ್ಲಿವೆ. ಒಂದೊಂದು ಕೆರೆಗೆ ಕೋಟ್ಯಂತರ ವೆಚ್ಚ ಮಾಡಲಾಗಿದ್ದರೂ ಕೊಳಚೆ, ಕೊಳಕಿನಿಂದ ಮಾತ್ರ ಮುಕ್ತವಾಗಿಲ್ಲ. ಅಭಿವೃದ್ಧಿ ಮಾಡಲಾಗಿರುವ ಕೆರೆಗಳಿಗೇ ಮತ್ತೆ ಮತ್ತೆ ವೆಚ್ಚ ಮಾಡಲಾಗುತ್ತಿದೆ. ಕನಿಷ್ಠ ಅಭಿವೃದ್ಧಿಯನ್ನೂ ಕಾಣದ 29 ಕೆರೆಗಳು ಇನ್ನೂ ಯೋಜನಾ ಹಂತದಲ್ಲೇ ಉಳಿದಿವೆ.

ರಾಜ್ಯ ಸರ್ಕಾರ 2008ರಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಲು ಬಿಬಿಎಂಪಿ ಹಾಗೂ ಬಿಡಿಎಗೆ ಹಸ್ತಾಂತರಿಸಿತ್ತು. 12 ಕೆರೆಗಳ ಅಭಿವೃದ್ಧಿಗೆ ನೂರು ಕೋಟಿ ವೆಚ್ಚ ತೋರಿದ ನಂತರ ಬಿಡಿಎ ಹಣವಿಲ್ಲ ಎಂದು ಕೈಚಾಚಿತು. ಮತ್ತೆ ಎಲ್ಲ ಕೆರೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಬಿಬಿಎಂಪಿಯ ಹೆಗಲೇರಿತು. ಹಣವಿಲ್ಲ ಎಂದುಕೊಂಡೇ ಬಿಬಿಎಂಪಿ ಸುಮಾರು ಎರಡು ಸಾವಿರ ಕೋಟಿ ವೆಚ್ಚ ಮಾಡಿದೆ.

2018–19ನೇ ಸಾಲಿನವರೆಗೆ ಬಿಬಿಎಂಪಿ 65 ಕೆರೆಗಳ ಅಭಿವೃದ್ಧಿಗೆ ಮುನ್ನೂರಕ್ಕೂ ಹೆಚ್ಚು ಕೋಟಿ ರೂಪಾಯಿಗಳನ್ನು ವ್ಯಯಿಸಿದೆ. ಈ ಅಭಿವೃದ್ಧಿಯಾದ ಕೆರೆಗಳಿಗೆ ಮತ್ತೆ ಮುಂದಿನ ಸಾಲುಗಳಲ್ಲಿ ಇನ್ನಷ್ಟು ಕೋಟಿಗಳಷ್ಟು ಖರ್ಚು ಮಾಡಿದೆ.

ಕೆರೆಗಳ ಅಭಿವೃದ್ಧಿಗೆ 'ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ' (ಕೆಟಿಸಿಡಿಎ) ವಿಸ್ತೃತ ಯೋಜನಾ ವರದಿ (ಡಿಪಿಆರ್) ಅನುಮೋದನೆ ಪಡೆದುಕೊಳ್ಳಬೇಕು. 2018–19ರಿಂದ 2022–23ನೇ ಸಾಲಿನವರೆಗೆ ಬಿಬಿಎಂಪಿ ಹಾಗೂ ಬಿಡಿಎ ₹1,427 ಕೋಟಿಗೂ ಹೆಚ್ಚಿನ ಮೊತ್ತದ ಡಿಪಿಆರ್‌ಗಳಿಗೆ ಅನುಮೋದನೆ ಪಡೆದುಕೊಂಡಿವೆ. ನಂತರ, ಕಾಮಗಾರಿಗಳಿಗೆ ಇದಕ್ಕಿಂತ ಹೆಚ್ಚಿನ ವೆಚ್ಚವನ್ನೂ ವ್ಯಯ ಮಾಡಲಾಗಿದೆ.

ಬಿಬಿಎಂಪಿ ಅಧಿಕೃತವಾಗಿ ಇಷ್ಟೇ ಮೊತ್ತವನ್ನು ವೆಚ್ಚ ಮಾಡಲಾಗಿದೆ ಎಂದು ಹೇಳುತ್ತಿಲ್ಲ. ಆದರೆ, ಪಾಲಿಕೆಯೇ ಪ್ರಕಟಿಸಿರುವ 'ರೆಸ್ಟೋರೇಷನ್ ಆಫ್ ಲೇಕ್ಸ್' ಮತ್ತು ಕೆಟಿಸಿಡಿಎ ಅನುಮೋದಿಸಿರುವ ಡಿಪಿಆರ್‌ಗಳ ಮೌಲ್ಯಗಳು ವೆಚ್ಚದ ಮಾಹಿತಿಯನ್ನು ಬಹಿರಂಗಪಡಿಸಿವೆ.

ಕಾಂಕ್ರೀಟ್ ಟ್ಯಾಂಕ್: ಐಐಎಸ್‌ಸಿ

ಬೆಂಗಳೂರಿನಲ್ಲಿ ಸಾವಿರಾರು ಕೋಟಿ ವೆಚ್ಚದಲ್ಲಿ ಅಭಿವೃದ್ಧಿಯಾಗಿರುವ ಕೆರೆಗಳು ಜೀವವೈವಿಧ್ಯವನ್ನು ರಕ್ಷಿಸಿ ಬೆಳೆಸುವ ತಾಣಗಳಾಗದೆ ಸಿವಿಲ್ ಕಾಮಗಾರಿ ನಡೆಸಿರುವ 'ಕಾಂಕ್ರೀಟ್ ಟ್ಯಾಂಕ್'ಗಳಾಗಿವೆ. ಈ ಕೆರೆಗಳಲ್ಲಿ ಶುದ್ಧವಾದ ನೀರಿಲ್ಲ. ಕೊಳಕೆ ತುಂಬಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಅಧ್ಯಯನ ವರದಿ ತಿಳಿಸಿದೆ.

ಪ್ರೊ. ಟಿ.ವಿ. ರಾಮಚಂದ್ರ ನೇತೃತ್ವದಲ್ಲಿ ಗೌತಮ್ ಮತ್ತು ವಸಂತಾ ಜಗದೀಶನ್ ಅವರು ಸಲ್ಲಿಸಿರುವ ವರದಿಯಲ್ಲಿ, ಕೆರೆಗಳ ಪುನರುಜ್ಜೀವನ ಅಥವಾ ಅಭಿವೃದ್ಧಿಯಲ್ಲಿ ಹಣವನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದಕ್ಕೆ ಪ್ರಾಮುಖ್ಯ ನೀಡಲಾಗಿದೆ. ಕೆರೆಯ ಮೌಲ್ಯವನ್ನು ಅರಿಯದೆ, ವೈಜ್ಞಾನಿಕ ಕಾಮಗಾರಿಗಳನ್ನು ನಿರ್ಲಕ್ಷಿಸಲಾಗಿದೆ ಎಂದು ಹೇಳಲಾಗಿದೆ.

ಕೆರೆಯಲ್ಲಿ ಕಲ್ಮಶಯುಕ್ತ ಹೂಳನ್ನು ಹೊರಗೆ ಹಾಕದೆ, ಅದನ್ನೇ ದ್ವೀಪದ ರೀತಿ ಮಾಡಿ ಸ್ವಚ್ಛ ನೀರು ಕಲುಷಿತಗೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಕೆರೆ ಅಭಿವೃದ್ಧಿಯಾದ ಮೇಲೆ ಅದಕ್ಕೆ ಒಳಚರಂಡಿ ನೀರು ಸೇರಿದಂತೆ ಕಲ್ಮಶ ಹರಿಯದಂತೆ ತಡೆಯುವ ಕೆಲಸಗಳು ಆಗಿಲ್ಲ. ಕೆರೆಗಳ ಅಭಿವೃದ್ಧಿ ಕಾಮಗಾರಿಯಿಂದ 'ಸಿಮೆಂಟ್ ಬೌಲ್' ಅನ್ನು ಸೃಷ್ಟಿಸಲಾಗಿದ್ದು, ಜಾಗಿಂಗ್, ವಾಕಿಂಗ್ ಪಾಥ್, ಸೌಂದರ್ಯೀಕರಣಕ್ಕೆ ಹೆಚ್ಚು ವ್ಯಯ ಮಾಡಲಾಗಿದ್ದು, ಕೆರೆ ಪರಿಸರವನ್ನು ಪುನಶ್ಚೇತನಗೊಳಿಸುವ ಕೆಲಸವಾಗಿಲ್ಲ ಎಂದು 'ಸ್ಟೇಟಸ್ ಆಫ್ ರೆಸ್ಟೋರ್ಡ್ ಲೇಕ್ಸ್ ಇನ್ ಬೆಂಗಳೂರು: ಗ್ಯಾಪ್ಸ್ ಆ್ಯಂಡ್ ಸಲ್ಯೂಷನ್ಸ್' ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ.

ಸ್ಯಾಂಕಿಗೆ ₹46 ಕೋಟಿ ವೆಚ್ಚ!

2010ರಲ್ಲೇ ಅಭಿವೃದ್ಧಿ ಹೊಂದಿದ ಕೆರೆಗಳ ಪಟ್ಟಿಯಲ್ಲಿದ್ದ ಸ್ಯಾಂಕಿ ಕೆರೆಗೆ 2019–20ರಿಂದ ₹46.92 ಕೋಟಿ ವೆಚ್ಚ ಮಾಡಲಾಗಿದೆ. ಕೆರೆಯ ಒತ್ತುವರಿಯನ್ನು ತೆರವು ಮಾಡದಿದ್ದರೂ, ಸೌಂದರ್ಯೀಕರಣ ಕಾಮಗಾರಿಗಳು ವೃದ್ಧಿಯಾಗುತ್ತಿವೆ. ಮಲ್ಲತ್ತಹಳ್ಳಿ ಕೆರೆಗೆ ₹80 ಕೋಟಿ ವೆಚ್ಚ ಮಾಡುವ ಯೋಜನೆ ಬಿಬಿಎಂಪಿಯಲ್ಲಿ ಇದ್ದು, ಇದರಲ್ಲಿ ಈಗಾಗಲೇ ಸಾಕಷ್ಟು ಬಿಡುಗಡೆಯಾಗಿದೆ. ಡಿಪಿಆರ್ ಮಾತ್ರ ₹31.5 ಕೋಟಿಗೆ ಅನುಮೋದನೆಯಾಗಿದೆ.

ರಾಚೇನಹಳ್ಳಿ, ಕೆಂಪಾಂಬುಧಿ, ಕಲ್ಕೆರೆ, ಜಕ್ಕೂರು, ಕೈಕೊಂಡ್ರಹಳ್ಳಿ, ದೊರೆಕೆರೆ, ಸೀಗೇಹಳ್ಳಿ, ಸಿಂಗಸಂದ್ರ, ಕೊಡಿಗೆ ಸಿಂಗಸಂದ್ರ, ಯಲಹಂಕ, ಯಲಚೇನಹಳ್ಳಿ, ಅಟ್ಟೂರು, ದೊಡ್ಡಬೊಮ್ಮಸಂದ್ರ, ಗರುಡಾಚಾರಪಾಳ್ಯ, ಜೆ.ಪಿ. ಪಾರ್ಕ್ ಮತ್ತಿಕೆರೆ, ಲಿಂಗಧೀರನಹಳ್ಳಿ, ಸ್ಯಾಂಕಿ, ವಿಭೂತಿಪುರ ಕೆರೆಗಳಿಗೆ ಒಂದಕ್ಕಿಂತ ಹೆಚ್ಚು ಬಾರಿ ಅಭಿವೃದ್ಧಿಗಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದೆ. ಆದರೆ, ಇಂದಿಗೂ ಆ ಕೆರೆಗಳು ಸ್ವಚ್ಛವಾಗಿಲ್ಲ.

ಯಾವ ಕೆರೆಗೆ ಹೆಚ್ಚು ವೆಚ್ಚ? (₹ಕೋಟಿಗಳಲ್ಲಿ)

ಕೆರೆ	ವೆಚ್ಚ
ಕಲ್ಕೆರೆ ರಾಂಪುರ	61.46
ಸ್ಯಾಂಕಿ	46.92
ಕಲ್ಕೆರೆ	44.22
ಯಲಹಂಕ	35.44
ಮಲ್ಲತ್ತಹಳ್ಳಿ (ರಿಟೇನಿಂಗ್ ವಾಲ್ +ಲೇಕ್ ಬೆಡ್–ಪಾತ್‌ವೇ)	31.50
ದೊಡ್ಡಬಿದರಕಲ್ಲು	27.50
ಗಾಂಧಿನಗರ ಹೊಸಕೆರೆ	28.60
ದೊಡ್ಡನೆಕ್ಕುಂದಿ	29.90
ಜೆ.ಪಿ. ಪಾರ್ಕ್–ಮತ್ತಿಕೆರೆ	25.36
ಗುಂಜೂರು ಮಾವಿನ ಕೆರೆ	20
ದೊರೆ ಕೆರೆ	18.21
ಅಬ್ಬಿಗೆರೆ	18.02
ಕೆಂಪಾಂಬುಧಿ	17.31
ಕರಿಹೋಬನಹಳ್ಳಿ (ನರಸಪ್ಪನಹಳ್ಳಿ)	17
ಚಿಕ್ಕಬೇಗೂರು	16.92
ಹಲಸೂರು	15.17
ಕೋನಪ್ಪನ ಅಗ್ರಹಾರ	13.87
ವೆಂಗಯ್ಯನಕೆರೆ	13.80
ಸಿಂಗಾಪುರ	13.60
ಕಣ್ಣೂರು	13.26
ಗಾರ್ವೆಬಾವಿ ಪಾಳ್ಯ	13
ಜುನ್ನಸಂದ್ರ	12.60
ಹೊಸಕೆರೆ–ಹಳೆಕೆರೆ ನೆಲಕದಿರೇನಹಳ್ಳಿ	10.29
ಕಾಚರಕನಹಳ್ಳಿ	10.11
ಕಾಡುಸೊಣ್ಣಪ್ಪನಹಳ್ಳಿ	10.15
ಬೇಗೂರು	10

ಹಿಂದುಸ್ತಾನ್ ಇನ್‌ಫ್ರಾಕಾನ್ ವಂಚನೆ: ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಸ್ತಾನ್ ಇನ್‌ಫ್ರಾಕಾನ್ ಇಂಡಿಯಾ ಲಿಮಿಟೆಡ್ ಹೆಸರಿನಲ್ಲಿ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಿ ₹ 199.54 ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ)ಅಧಿಕಾರಿಗಳು ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಯ ಐದ ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ.

'ಜೂನ್ 27ರಂದು ಬೆಂಗಳೂರು ಮತ್ತು ಮಂಡ್ಯದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಸಾರ್ವಜನಿಕರಿಂದ ಸಂಗ್ರಹಿಸಿದ್ದ ಠೇವಣಿ ಹಣವನ್ನು ದುರ್ಬಳಕೆ ಮಾಡಿರುವುದು, ಅನ್ಯ ಉದ್ದೇಶಗಳಿಗೆ ವರ್ಗಾವಣೆ ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಠೇವಣಿ ಹಣ ಬಳಸಿ ಖರೀದಿಸಿರುವ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳೂ ಪತ್ತೆಯಾಗಿವೆ' ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

2010ರಿಂದ 2015ರ ಅವಧಿಯಲ್ಲಿ ಇನ್‌ಫ್ರಾಕಾನ್ ಕಂಪನಿಯು ಹೆಚ್ಚಿನ ಬಡ್ಡಿ ನೀಡುವ ಆಮಿಷವೊಡ್ಡಿ ಸಾರ್ವಜನಿಕರಿಂದ ₹389 ಕೋಟಿಯಷ್ಟು ಠೇವಣಿ ಸಂಗ್ರಹಿಸಿತ್ತು. ಈ ಪೈಕಿ ₹ 199.54 ಕೋಟಿಯನ್ನು ಠೇವಣಿದಾರರಿಗೆ ಹಿಂದಿರುಗಿಸದೇ ವಂಚಿಸಲಾಗಿತ್ತು. ಬೆಂಗಳೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣ ಆಧರಿಸಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಇ.ಡಿ ಪ್ರತ್ಯೇಕ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

ವಿದ್ಯಾರ್ಥಿನಿ ಸಾವು

ಬೆಂಗಳೂರು: ಜಾಲಹಳ್ಳಿ ವೃತ್ತದಲ್ಲಿ ಖಾಸಗಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ಸೋಮವಾರ ಬೆಳಿಗ್ಗೆ ಅಪಘಾತ ಸಂಭವಿಸಿದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿ ದಿಶಾ (18) ಮೃತಪಟ್ಟಿದ್ದಾರೆ.

ಸ್ಥಳೀಯ ನಿವಾಸಿ ದಿಶಾ, ಮಲ್ಲೇಶ್ವರದ ಕಾಲೇಜೊಂದರಲ್ಲಿ ಓದುತ್ತಿದ್ದರು. ಟ್ಯೂಶನ್‌ಗೆಂದು ತಂದೆ ಸತೀಶ್ ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದ ಬಗ್ಗೆ ಪೀಣ್ಯ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಅಪಘಾತದ ಆರೋಪದಡಿ ಚಾಲಕನನ್ನು ಬಂಧಿಸಲಾಗಿದ್ದು, ಬಸ್ ಜಪ್ತಿ ಮಾಡಲಾಗಿದೆ. ಪ್ರತ್ಯಕ್ಷದರ್ಶಿಗಳಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹೇಳಿದರು.

ಕೈ ಕತ್ತರಿಸಿ ಹತ್ಯೆ: ಪತ್ನಿ, ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ


ಗಣೇಶ್

ಬೆಂಗಳೂರು: ನೈಸ್ ರಸ್ತೆಯ ನೆಟ್ಟಿಗೆರೆ-ಪಾಳ್ಯ ಸಮೀಪದಲ್ಲಿ ನಡೆದಿದ್ದ ಅರುಣ್‌ಕುಮಾರ್ (34) ಕೊಲೆ ಪ್ರಕರಣ ಭೇದಿಸಿರುವ ತಲಘಟ್ಟಪುರ ಠಾಣೆ ಪೊಲೀಸರು, ಮೃತರ ಪತ್ನಿ ರಂಜಿತಾ ಹಾಗೂ ಪ್ರಿಯಕರ ಗಣೇಶ್ ಸೇರಿ ಐವರನ್ನು ಬಂಧಿಸಿದ್ದಾರೆ.

'ಚನ್ನಪಟ್ಟಣ ತಾಲ್ಲೂಕಿನ ಅರುಣ್‌ಕುಮಾರ್ ಅವರನ್ನು ಜೂನ್ 28ರಂದು ರಾತ್ರಿ ಮಾರಕಾಸ್ತ್ರಗಳಿಂದ ಹೊಡೆದು ಕೈ ಕತ್ತರಿಸಿ ಕೊಲೆ ಮಾಡಲಾಗಿತ್ತು. ಜೂನ್ 29ರಂದು ಮೃತದೇಹ ಪತ್ತೆಯಾಗಿತ್ತು. ಆರಂಭದಲ್ಲಿ ಮೃತರ ಹೆಸರು ಗೊತ್ತಾಗಿರಲಿಲ್ಲ. ತನಿಖೆ ಕೈಗೊಂಡಾಗ, ಅರುಣ್ ಎಂಬುದು ತಿಳಿದಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಅರುಣ್ ಪತ್ನಿ ರಂಜಿತಾ ಹಾಗೂ ಗಣೇಶ್ ನಡುವೆ ಸಲುಗೆ ಇತ್ತು. ಅರುಣ್ ಎಚ್ಚರಿಕೆ ನೀಡಿದರೂ ರಂಜಿತಾ ಹಾಗೂ ಗಣೇಶ್, ಒಟ್ಟಿಗೆ ಸೇರುತ್ತಿದ್ದರು. ತಮ್ಮ ಅಕ್ರಮ ಸಂಬಂಧಕ್ಕೆ ಪತಿ ಅಡ್ಡಿಯಾಗುತ್ತಾರೆಂದು ತಿಳಿದ ರಂಜಿತಾ, ಪ್ರಿಯಕರ ಹಾಗೂ ಆತನ ಸಹಚರರ ಜೊತೆ ಸೇರಿ ಈ ಕೊಲೆ ಮಾಡಿಸಿರುವುದು ಗೊತ್ತಾಗಿದೆ' ಎಂದು ತಿಳಿಸಿದರು.

ಮಹಾರಾಷ್ಟ್ರದಲ್ಲಿ ಕಾರ್ಯಾಚರಣೆ: ನಾಲ್ವರು ಪೆಡ್ಲರ್ ಬಂಧನ

ಬೆಂಗಳೂರು: ರಾಜ್ಯಕ್ಕೆ ಅಕ್ರಮವಾಗಿ ಗಾಂಜಾ ಸಾಗಿಸಿ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಗಿರಿನಗರ ಠಾಣೆ ಪೊಲೀಸರು ಮಹಾರಾಷ್ಟ್ರದಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ.

'ಮಹಾರಾಷ್ಟ್ರದ ಸೈಯದ್, ಅಮೂಲ್, ಆಕಾಶ್ ಹಾಗೂ ರಾಹುಲ್ ಬಂಧಿತರು. ಇವರಿಂದ ₹ 50 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಗಾಂಜಾ ಮಾರಾಟ ಜಾಲದ ಆರೋಪಿಯೊಬ್ಬನನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಮಹಾರಾಷ್ಟ್ರದಿಂದ ಗಾಂಜಾ ತರುತ್ತಿದ್ದ ಬಗ್ಗೆ ಆತ ಮಾಹಿತಿ ನೀಡಿದ್ದ. ಪೆಡ್ಲರ್‌ಗಳ ಪತ್ತೆಗೆ ರಚಿಸಲಾಗಿದ್ದ ವಿಶೇಷ ತಂಡ, ಮಹಾರಾಷ್ಟ್ರ ಜಲನಾ ಜಿಲ್ಲೆಗೆ ಹೋಗಿತ್ತು. ಆರೋಪಿಗಳ ಮನೆಯಲ್ಲಿ ಪರಿಶೀಲನೆ ನಡೆಸಿತ್ತು. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಕುಟುಂಬಸ್ಥರು ಪೊಲೀಸರ ಮೇಲೆ ಹಲ್ಲೆಗೂ ಯತ್ನಿಸಿದ್ದರು.'

'ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸರು, ಅವರನ್ನು ಕರೆದುಕೊಂಡು ರಾಜ್ಯದತ್ತ ಪ್ರಯಾಣ ಬೆಳೆಸಿದ್ದರು. ಪೊಲೀಸರ ವಾಹನವನ್ನು ಬೆನ್ನಟ್ಟಿದ್ದ ಕುಟುಂಬಸ್ಥರು, 'ನಮ್ಮ ಸಂಬಂಧಿಕರನ್ನು ಯಾರೋ ಅಪಹರಿಸಿಕೊಂಡು ಹೋಗುತ್ತಿದ್ದಾರೆ' ಎಂದು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಸಹ ವಾಹನ ಬೆನ್ನಟ್ಟಿದ್ದರು' ಎಂದು ಮೂಲಗಳು ತಿಳಿಸಿವೆ. 'ಮಹಾರಾಷ್ಟ್ರ ಗಡಿಯಲ್ಲಿ ಪೊಲೀಸರ ವಾಹನವನ್ನು ಅಡ್ಡಗಟ್ಟಲಾಗಿತ್ತು. ವಿಶೇಷ ತಂಡದಲ್ಲಿದ್ದ ಪೊಲೀಸರು, ಗಾಂಜಾ ಮಾರಾಟದ ಆರೋಪಿಗಳ ಬಗ್ಗೆ ಮಹಾರಾಷ್ಟ್ರ ಪೊಲೀಸರಿಗೆ ಮಾಹಿತಿ ಹಂಚಿಕೊಂಡಿದ್ದರು. ಬಳಿಕ ಪೊಲೀಸರ ತಂಡ ಆರೋಪಿ ಗಳ ಸಮೇತ ಬೆಂಗಳೂರಿಗೆ ಬಂದಿದೆ' ಎಂದು ಮೂಲಗಳು ಹೇಳಿವೆ.

ಕಾನ್‌ಸ್ಟೆಬಲ್ ಸೇರಿ ಇಬ್ಬರು ಸಾವು

ಬೆಂಗಳೂರು: ಅಪಘಾತವಾಗಿ ಕೆಟ್ಟು ನಿಂತಿದ್ದ ವಾಹನ ಪರಿಶೀಲನೆಗೆ ಹೋಗಿದ್ದ ಸಂದರ್ಭದಲ್ಲಿ ಕಾರೊಂದು ಡಿಕ್ಕಿಯಾಗಿ ಕಾನ್‌ಸ್ಟೆಬಲ್ ಸುರೇಶ್ (40) ಸೇರಿ ಇಬ್ಬರು ಮೃತಪಟ್ಟಿದ್ದು, ಈ ಸಂಬಂಧ ಚಿಕ್ಕಜಾಲ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಿ.ಬಿ. ರಸ್ತೆಯ ದೊಡ್ಡಜಾಲ ಮೇಲ್ಸೇತುವೆ ಬಳಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದೆ. ದೇವನಹಳ್ಳಿ ಠಾಣೆಯ ಕಾನ್‌ಸ್ಟೆಬಲ್ ಸುರೇಶ್ ಹಾಗೂ ಕೊತ್ತನೂರು ನಿವಾಸಿ ಶರತ್ (28) ಮೃತಪಟ್ಟಿದ್ದಾರೆ. ಅಪಘಾತಕ್ಕೆ ಕಾರಣವಾದ ಆರೋಪದಡಿ ಚಾಲಕ ಚಂದ್ರಪ್ರಕಾಶ್‌ನನ್ನು (30) ಬಂಧಿಸಲಾಗಿದೆ. ಈತ ಪಾನಮತ್ತನಾಗಿ ಕಾರು ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಹುಂಡೈ ಕಾರಿನಲ್ಲಿ ಚಾಲಕ ಸೇರಿ ಆರು ಜನರಿದ್ದರು. ಅದೇ ಕಾರಿನಲ್ಲಿದ್ದ ಶರತ್ ಸಹ ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಇಮ್ಯಾನ್ಯುಯೆಲ್ (29), ಪ್ರಿಯದರ್ಶಿನಿ (26), ಕೆಜಿಯಾ (24) ಹಾಗೂ ಶೆರಿನ್ (25) ಗಾಯಗೊಂಡಿದ್ದಾರೆ. ಎಲ್ಲರೂ ಮದ್ಯದ ಪಾರ್ಟಿ ಮಾಡಿ ಜಾಲಿರೈಡ್ ಹೊರಟಿದ್ದರೆಂಬುದು ಗೊತ್ತಾಗಿದೆ' ಎಂದರು.

ಅರ್ಜಿ ಆಹ್ವಾನ


ಬೆಂಗಳೂರು: ಪಂಡಿತರತ್ನ ಎ.ಶಾಂತಿ ರಾಜ ಶಾಸ್ತ್ರಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ 95 ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 92ಕ್ಕೂ ಹೆಚ್ಚು ಅಂಕ ಗಳಿಸಿದ ದಿಗಂಬರ್ ಜೈನ್ ಸಮುದಾಯದ ವಿದ್ಯಾರ್ಥಿಗಳು ಜುಲೈ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 93430 94443 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಪತ್ರ ಬರೆಯುವ ಸ್ಪರ್ಧೆ: ರಾಜ್ಯದ ಮೂವರಿಗೆ ಪ್ರಶಸ್ತಿ

ಬೆಂಗಳೂರು: ಕೇಂದ್ರ ಸರ್ಕಾರದ ಯುನಿವರ್ಸಲ್ ಪೋಸ್ಟಲ್ ಯೂನಿಯನ್ ನಡೆಸಿದ ಅಂತರರಾಷ್ಟ್ರೀಯ ಪತ್ರ ಬರೆಯುವ ಸ್ಪರ್ಧೆಯಲ್ಲಿ ರಾಜ್ಯದ ಮೂವರು ವಿದ್ಯಾರ್ಥಿಗಳು ಪ್ರಶಸ್ತಿ ಪಡೆದಿದ್ದಾರೆ.

ಮೈಸೂರು ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ವಿದ್ಯಾರ್ಥಿನಿ ಆಸ್ಫಿಯಾ ಸಮ್ರೀನ್ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರಥಮ, ಬೆಂಗಳೂರಿನ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಅಂಕಿತಾ ಕೆ.ಆರ್. ರಾಷ್ಟ್ರ ಮಟ್ಟದಲ್ಲಿ ತೃತೀಯ, ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಮೈಸೂರು ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ವಿದ್ಯಾರ್ಥಿನಿ ಖುಷಿ ಎ. ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ರಾಷ್ಟ್ರ ಮಟ್ಟದ ವಿಜೇತರಿಗೆ ದೆಹಲಿಯಲ್ಲಿ ಹಾಗೂ ರಾಜ್ಯಮಟ್ಟದ ವಿಜೇತರಿಗೆ ಬೆಂಗಳೂರಿನಲ್ಲಿ ಸಮಾರಂಭ ಆಯೋಜಿಸಿ ಬಹುಮಾನ ವಿತರಿಸಲಾಗುವುದು ಎಂದು ಅಂಚೆ ಇಲಾಖೆಯ ಪ್ರಕಟಣೆ ತಿಳಿಸಿದೆ.


ಆಸ್ಫಿಯಾ


ಅಂಕಿತಾ ಕೆ.ಆರ್.


ಖುಷಿ ಎ.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ: ಬಿಬಿಎಂಪಿ

110 ಹಳ್ಳಿಗಳಲ್ಲಿ 100 ಕೊಳವೆಬಾವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 110 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮವನ್ನು ಕೈಗೊಂಡಿದ್ದು, ಸುಮಾರು 100 ಕೊಳವೆಬಾವಿಗಳನ್ನು ಕೊರೆಯಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಕುಡಿಯುವ ನೀರು ಸರಬರಾಜು ಜವಾಬ್ದಾರಿ ಬಿಬಿಎಂಪಿಯದ್ದು ಅಲ್ಲದಿದ್ದರೂ, ಹೊರಭಾಗದ 110 ಹಳ್ಳಿಗಳಲ್ಲಿ ಕಾವೇರಿ ನೀರು ಪೂರೈಕೆ ಇನ್ನೂ ಸಾಧ್ಯವಾಗಿಲ್ಲ. ಹೀಗಾಗಿ ಅಲ್ಲಿನ ಜನರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ತುರ್ತು ಕಾಮಗಾರಿಯಡಿ ₹10 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ನಿರ್ಲ್ಲಿ ರಥ ನೀರಿನ ವ್ಯವಸ್ಥೆ ಮಾಡಲಾಗುತ್ತದೆ. ಪ್ರತಿ ಕೊಳವೆಬಾವಿ ಸುಮಾರು ₹8 ಲಕ್ಷ ವೆಚ್ಚವಾಗಲಿದೆ. ಯಲಹಂಕ, ದಾಸರಹಳ್ಳಿ, ಆರ್.ಆರ್. ನಗರ, ಬೊಮ್ಮನಹಳ್ಳಿ ವಲಯಗಳಲ್ಲಿ ಅಗತ್ಯಕ್ಕನುಸಾರವಾಗಿ ಕೊಳವೆಬಾವಿ ಕೊರೆಯಲಾಗುತ್ತದೆ ಎಂದರು.

ಬೆಂಗಳೂರು ನಗರ ಭಾಗದಲ್ಲಿ ನೀರು ಪೂರೈಕೆ ಜವಾಬ್ದಾರಿ ಬಿಡಬ್ಲ್ಯುಎಸ್‌ಎಸ್‌ಬಿಯದ್ದಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಳೆಗಾಲಕ್ಕೆ ಸಿದ್ಧತೆ: ನಗರದಲ್ಲಿ 198 ಸೂಕ್ಷ್ಮ ಪ್ರದೇಶಗಳಲ್ಲಿ ಜಲಾವೃತವಾಗುವುದನ್ನು ಗುರುತಿಸಲಾಗಿದೆ. ಇದರಲ್ಲಿ ಶೇ 80ರಷ್ಟು ಪ್ರದೇಶದಲ್ಲಿ ಸಮಸ್ಯೆಯನ್ನು ನಿವಾರಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಹೇಳಿದರು.

ಅತಿಹೆಚ್ಚು ಮಳೆ ಬಂದರೆ ಸಮಸ್ಯೆ ಉಂಟಾಗುವುದು ಸಹಜ. ಆದರೂ ಅಂತಹ ಸಮಸ್ಯೆಯನ್ನು ನಿವಾರಿಸಲು ಸಾಕಷ್ಟು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಕಂಟ್ರೋಲ್ ರೂಂ ಸರ್ವಸನ್ನದ್ಧವಾಗಿದೆ ಎಂದರು.

ರಾಜಕಾಲುವೆ ಒತ್ತುವರಿ ಕಾರ್ಯಾಚರಣೆ ನಡೆಯುತ್ತಲೇ ಇದೆ. 118 ಪ್ರಕರಣಗಳು ನ್ಯಾಯಾಲಯದಲ್ಲಿವೆ. ಇದರಲ್ಲಿ 50 ಕಡೆ ಕಾಲುವೆ ಇಲ್ಲ. ಅದರ ಮಾರ್ಗ ಬದಲಾಯಿಸಲಾಗಿದೆ. ಅಲ್ಲಿ ನೀರಿನ ಸಮಸ್ಯೆ ಉಂಟಾಗುವುದಿಲ್ಲ. ಹೀಗಾಗಿ ಅದರ ತೆರವಿಗೆ ಹೆಚ್ಚಿನ ಆದ್ಯತೆ ನೀಡಿಲ್ಲ. ಇನ್ನುಳಿದ ಸುಮಾರು 50 ಕಡೆ ನೀರು ಪಂಪ್ ಮಾಡಲು ತಾತ್ಕಾಲಿಕವಾಗಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಾಮಗಾರಿ ನಿಲ್ಲಿಸಿದರೆ ಕ್ರಮ: ಎಚ್ಚರಿಕೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ರಾಜ್ಯ ಸರ್ಕಾರದ ಅನುದಾನದಲ್ಲಿ ಮುಗಿದಿರುವ ಕಾಮಗಾರಿಗಳಿಗೆ ಫೆಬ್ರುವರಿಯವರೆಗೆ ಬಿಲ್ ಪಾವತಿಸಲಾಗಿದೆ. ಅದು ಸಾಲದೆಂದು ಕಾಮಗಾರಿ ನಿಲ್ಲಿಸುವುದಾಗಿ ಹೇಳಿದರೆ ಗುತ್ತಿಗೆದಾರರ ಮೇಲೆ ಕಾನೂನು ಕ್ರಮಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಎಚ್ಚರಿಸಿದರು.

ಬಿಲ್ ಪಾವತಿಸದಿದ್ದರೆ ಕಾಮಗಾರಿ ನಿಲ್ಲಿಸುವುದಾಗಿ ಗುತ್ತಿಗೆದಾರರು ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕಾಮಗಾರಿ ಮುಗಿದ ತಕ್ಷಣ ಬಿಲ್ ಪಾವತಿಸುತ್ತೇವೆ ಎಂದು ಅವರಿಗೆ ನಾವು ಹೇಳಿಲ್ಲ. ಐದು ತಿಂಗಳು ಕಾಯಲು ಸಾಧ್ಯವಿಲ್ಲ ಎಂದರೆ ಕಾಮಗಾರಿ ನಿಲ್ಲಿಸಲಿ. ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುತ್ತೇವೆ' ಎಂದರು.

'ಬಿಬಿಎಂಪಿ ಅನುದಾನದಲ್ಲಿ ನಡೆಯುವ ಕಾಮಗಾರಿಗಳಿಗೆ ಹಲವು ವರ್ಷಗಳಿಂದಲೂ 24 ತಿಂಗಳ ಬಾಕಿ ಇರುತ್ತದೆ. ಇದರಂತೆ ಅವರಿಗೆ ಏಪ್ರಿಲ್‌ವರೆಗೆ ₹40 ಕೋಟಿ ಮಾತ್ರ ಬಾಕಿ ಇದೆ. ಮೇ, ಜೂನ್ ಅವಧಿಯ ₹300 ಕೋಟಿ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.





ಗುರುಪೂರ್ಣಿಮೆ ಪ್ರಯುಕ್ತ ಜೆ.ಪಿ. ನಗರದ ಶಿರಡಿ ಸಾಯಿಬಾಬಾ ವಿಗ್ರಹಕ್ಕೆ ಸಾವಿರ ತೆಂಗಿನಕಾಯಿ, ಪರಂಗಿ, ಹಲಸಿನ ಹಣ್ಣು, ಖರ್ಜೂರ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಒಣ ಹಣ್ಣುಗಳು, ಅಸಂಖ್ಯಾತ ನವಧಾನ್ಯಗಳಿಂದ ವಿಶೇಷ ಅಲಂಕಾರ ಮಾಡಲಾಯಿತು (ಎಡಚಿತ್ರ). ಬಲಮುರಿ ಗಣಪತಿ ಮತ್ತು ಶಿರಡಿ ಸಾಯಿಬಾಬಾ ದೇವಾಲಯದಲ್ಲಿ ಸುನೀತಾ ಸುಕುಮಾರನ್ ನೇತೃತ್ವದ ಕೃಷ್ಣ ಕಲಾಲಯದ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು.

ಭಕ್ತಿಭಾವದಿಂದ ಗುರುಪೂರ್ಣಿಮೆ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ದೇವಸ್ಥಾನಗಳಲ್ಲಿ ಸೋಮವಾರ ಭಕ್ತಿ ಭಾವದಿಂದ ಗುರುಪೂರ್ಣಿಮೆಯನ್ನು ಆಚರಿಸಲಾಯಿತು.

ಜೆ.ಪಿ. ನಗರದ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್‌ನಿಂದ ಶಿರಡಿ ಸಾಯಿಬಾಬಾ ವಿಗ್ರಹಕ್ಕೆ 20 ಸಾವಿರ ತೆಂಗಿನಕಾಯಿ, 2,500 ಪರಂಗಿ, ಹಲಸಿನ ಹಣ್ಣು, 5,000 ಬೆಲ್ಲ, 25,000ಕ್ಕೂ ಹೆಚ್ಚು ಖರ್ಜೂರ, ಬಾದಾಮಿ, ಗೋಡಂಬಿ, ದ್ರಾಕ್ಷಿ, ಒಣ ಹಣ್ಣುಗಳು, ಅಸಂಖ್ಯಾತ ನವಧಾನ್ಯಗಳ ಮೂಲಕ ವಿಶೇಷ ಅಲಂಕಾರ ಮಾಡಲಾಯಿತು.

ಸಾಯಿ ಬಾಬಾ ಅವರಿಗೆ ಅಲಂಕಾರ ಮಾಡಿದ ಎಲ್ಲಾ ವಸ್ತುಗಳನ್ನು ಮರಳಿ ಭಕ್ತರಿಗೆ ತಲುಪಿಸಲಾಯಿತು. ಪರಂಗಿ, ಹಲಸು ಮತ್ತಿತರ ಆಹಾರ ವಸ್ತುಗಳನ್ನು ಸ್ಥಳದಲ್ಲಿಯೇ ಭಕ್ತರಿಗೆ ಸಮರ್ಪಿಸಲಾಯಿತು. ಕ್ರೀಡಾ ಪರಿಕರಗಳನ್ನು ಶಾಲೆಗಳಿಗೆ ವಿತರಿಸಲಾಯಿತು ಎಂದು ಟ್ರಸ್ಟಿ ರಾಮಮೋಹನ್ ರಾಜ್ ತಿಳಿಸಿದರು.

ಕಾಕಡ ಆರತಿ: ಲಗ್ಗೆರೆ ಹೊರ ವರ್ತುಲ ರಸ್ತೆಯಲ್ಲಿರುವ ಶಿರಡಿ ಸಾಯಿಬಾಬು ಮಂದಿರದಲ್ಲಿ ಶಿರಡಿ ಸಾಯಿಬಾಬಾರಿಗೆ ವಿಶೇಷ ಹೂವಿನ ಅಲಂಕಾರ ಮಾಡಿದ ಬಳಿಕ ಕಾಕಡ ಆರತಿ ನಡೆಯಿತು. ಜಿ.ವೈ. ಪದ್ಮನಾಗರಾಜ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ರುದ್ರಾರಾಧ್ಯ, ಶಶಿಕಲಾ ಪಕ್ಕ ವಾದ್ಯಗಳಲ್ಲಿ ಸಹಕರಿಸಿದರು.

ಅಮೃತನಗರ: ಅಮೃತನಗರ ಮಾರಿಯಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಯಿಬಾಬಾರಿಗೆ ಪಂಚಾಮೃತ ಅಭಿಷೇಕ, ಮಂಗಳಾರತಿ ಮಾಡಲಾಯಿತು. ಸತ್ಯನಾರಾಯಣ ಪೂಜೆ, ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಹುಣ್ಣಿಮೆ ಹಾಡು: ಕಾಡುಮಲ್ಲೇಶ್ವರ ಗೆಳೆಯರ ಬಳಗದಿಂದ ಹುಣ್ಣಿಮೆ ಹಾಡು ಕಾರ್ಯಕ್ರಮವನ್ನು ಮಲ್ಲೇಶ್ವರದ ಕಾಡು ಮಲ್ಲೇಶ್ವರ ಬಯಲು ರಂಗಮಂಟಪದಲ್ಲಿ ಹಮ್ಮಿಕೊಳ್ಳಲಾಯಿತು. ಕನ್–ಫ್ಯೂಷನ್ ತಂಡದವರು ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ರಸ್ತೆ ಅಗೆತ: ಅಧಿಕಾರಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯನ್ನು ಅಕ್ರಮವಾಗಿ ಅಗೆದು ಕುಡಿಯುವ ನೀರು ಹಾಗೂ ಒಳಚರಂಡಿ ಮಾರ್ಗಕ್ಕೆ ಹಾನಿ ಮಾಡಿರುವ ಪ್ರಕರಣದಲ್ಲಿ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ವಿರುದ್ಧ ಪುಟ್ಟೇನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಜಿಯೊ ಡಿಜಿಟಲ್ ಫೈಬರ್ ಕಂಪನಿಯ ನಿರ್ದೇಶಕರಾದ ನಟರಾಜನ್ ಜ್ಞಾನಸ್ಕಂದನ್ ತಂಜೂರ, ಶ್ರೀಧರ್ ವೈದ್ಯಾನಂದ್, ಧ್ರುವ್ ಕುಮಾರ್ ತಾಯಲ್ ಹಾಗೂ ಕೃತ್ಯಕ್ಕೆ ಸಹಕರಿಸಿ ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿರುವ ಬಿಬಿಎಂಪಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಾಶ್, ಜಲಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವಿನಾಯಕ್ ನಾಯಕ್ ವಿರುದ್ಧ ಸ್ಥಳೀಯ ನಿವಾಸಿಯೊಬ್ಬರು ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ಅರಕೆರೆಯ ಬ್ರಿಗೇಡ್ ಮಿಲೇನಿಯಂ ಮುಖ್ಯರಸ್ತೆ, ಸೆಂಚುರಿ ಪ್ರಗತಿ ಅಪಾರ್ಟ್‌ಮೆಂಟ್ ಸಮುಚ್ಚಯ ಮುಂಭಾಗ ಹಾಗೂ ಸುತ್ತಮುತ್ತ ಹೊಸದಾಗಿ ಡಾಂಬರ್ ರಸ್ತೆ ನಿರ್ಮಿಸಲಾಗಿದೆ. ಬಿಬಿಎಂಪಿಯಿಂದ ಯಾವುದೇ ಅನುಮತಿ ಪಡೆಯದೇ ಜಿಯೊ ಡಿಜಿಟಲ್ ಫೈಬರ್ ಕಂಪನಿಯವರು, ಕೇಬಲ್ ಅಳವಡಿಸಲು ರಸ್ತೆಯನ್ನು ಅಕ್ರಮವಾಗಿ ಅಗೆದಿದ್ದಾರೆ. ಇದರಿಂದ ಕುಡಿಯುವ ನೀರಿನ ಪೈಪ್ ಹಾಗೂ ಒಳಚರಂಡಿ ವ್ಯವಸ್ಥೆಗೆ ಧಕ್ಕೆಯಾಗಿದೆ.

ಜಿಯೊ ಕಂಪನಿ ಕೃತ್ಯದಿಂದ ಕುಡಿಯುವ ನೀರಿನ ಜೊತೆ ಒಳಚರಂಡಿ ನೀರು ಸೇರಿದೆ. ಇಂಥ ನೀರು ಕುಡಿದು ಸ್ಥಳೀಯರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಜೊತೆಗೆ, ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳು ಸಹ ಯಾವುದೇ ಕ್ರಮ ಕೈಗೊಳ್ಳದೇ ಸರ್ಕಾರಕ್ಕೆ ನಂಬಿಕೆದ್ರೋಹ ಮಾಡುತ್ತಿದ್ದಾರೆ' ಎಂದು ದೂರಿನಲ್ಲಿ ಹೇಳಲಾಗಿದೆ.

ಅರ್ಜಿ ಆಹ್ವಾನ

ಬೆಂಗಳೂರು: ನವಜೀವನ ಶಾರೀರಕ ಸಾಂಸ್ಕೃತಿಕ ಸಂಸ್ಥೆ ಟ್ರಸ್ಟ್ ನಡೆಸುತ್ತಿರುವ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ವೃತ್ತಿಪರ ಸ್ನಾತಕೋತ್ತರ ಪದವಿ ಹಾಗೂ ಉನ್ನತ ಸ್ನಾತಕೋತ್ತರ ಪದವಿಗಳಲ್ಲಿ ಅಧ್ಯಯನ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಪದವಿ ಕಾಲೇಜುಗಳಲ್ಲಿ ಓದುತ್ತಿರುವ ಆಸಕ್ತ ವಿದ್ಯಾರ್ಥಿಗಳು ಜುಲೈ 31ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 76194 54178ಗೆ ಸಂಪರ್ಕಿಸಬಹುದು.



ಚಾಮರಾಜಪೇಟೆ ಕ್ಷೇತ್ರದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಪುಷ್ಪ ನಮನ ಸಲ್ಲಿಸಿದರು. ಸ್ಥಳೀಯ ಮುಖಂಡರಾದ ಅಲ್ತಾಫ್ ಖಾನ್, ಡಿ.ಸಿ. ರಮೇಶ್, ಚಂದ್ರಶೇಖರ್, ವಿನಾಯಕ್, ಗೌಸಿ ಇದ್ದರು.

ಮೇಕೆದಾಟು ಯೋಜನೆ ಸ್ಥಿತಿ: ಮಾಹಿತಿ ಪಡೆದ ಡಿಸಿಎಂ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಲ್ಲಿ ಬಾಕಿ ಇರುವ ಕಡತಗಳ ಸ್ಥಿತಿಗತಿ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಲ ಸಂಪನ್ಮೂಲ ಇಲಾಖೆ ಅಧಿಕಾರಿಗಳಿಂದ ಸೋಮವಾರ ಮಾಹಿತಿ ಪಡೆದರು.

ಮೇಕೆದಾಟು ಯೋಜನೆ ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಚುನಾಯಿತ ಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆ ವಿಕಾಸಸೌಧದಲ್ಲಿ ಅವರು ಸಭೆ ನಡೆಸಿದರು.

ಸಮತೋಲನ ಜಲಾಶಯ ನಿರ್ಮಾಣಕ್ಕೆ ಬಾಕಿ ಇರುವ ಅನುಮತಿಗಳು, ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಕೇಂದ್ರ ಜಲ ಆಯೋಗ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಬಾಕಿ ಇರುವ ಕಡತಗಳ ಕುರಿತು ಅಧಿಕಾರಿಗಳು ಮಾಹಿತಿ ಒದಗಿಸಿದರು. ತ್ವರಿತವಾಗಿ ಅನುಮತಿಗಳನ್ನು ಪಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಸಂಸದ ಡಿ.ಕೆ. ಸುರೇಶ್, ಶಾಸಕರಾದ ಎಚ್.ಸಿ. ಬಾಲಕೃಷ್ಣ, ಬಿ. ಶಿವಣ್ಣ, ಶರತ್ ಬಚ್ಚೇಗೌಡ, ಇಕ್ಬಾಲ್ ಹುಸೇನ್, ಡಾ.ಎಚ್.ಡಿ. ರಂಗನಾಥ್, ವಿಧಾನ ಪರಿಷತ್ ಸದಸ್ಯ ಎಸ್. ರವಿ, ಜಲ ಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಗ್ರಾಮೀಣಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅಂಜುಂ ಪರ್ವೇಜ್, ಬೆಂಗಳೂರು ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಸಭೆಯಲ್ಲಿದ್ದರು.

ಹೊರಗುತ್ತಿಗೆ ಪದ್ಧತಿಯಿಂದ ಮುಕ್ತಿಗೊಳಿಸಲು ಒತ್ತಾಯ

ಪೌರಕಾರ್ಮಿಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆ ಮತ್ತು ನೇರಪಾವತಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿರನ್ನು ಕಾಯಂಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ಪೌರಕಾರ್ಮಿಕರ ಮಹಾಸಂಘ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ನಾರಾಯಣ, 'ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು, ಕಸ ವಿಲೇವಾರಿ ಮಾಡುವ ಲೋಡರ್ಸ್, ಕ್ಲೀನರ್ಸ್ ಮತ್ತು ವಾಹನ ಚಾಲಕರನ್ನು ಒಂದೇ ಬಾರಿಗೆ ಕಾಯಂಗೊಳಿಸಬೇಕು. ಕಾನೂನು ಬಾಹಿರ ಹೊರಗುತ್ತಿಗೆ ಎಂಬ ಜೀತ ಪದ್ಧತಿಯಿಂದ ಮುಕ್ತಿಗೊಳಿಸಬೇಕು' ಎಂದು ಒತ್ತಾಯಿಸಿದರು.

'2022ರಲ್ಲಿ ಅಂದಿನ ಬಿಜೆಪಿ ಸರ್ಕಾರ ಪೌರಕಾರ್ಮಿಕರ ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತವೆ ಎಂದು ಲಿಖಿತವಾಗಿ ತಿಳಿಸಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ 52 ಸಾವಿರ ಸ್ವಚ್ಛತಾ ಕಾರ್ಮಿಕರನ್ನು ನೇಮಿಸಿಕೊಳ್ಳುವ ನಿರ್ಧಾರ ಕೈಗೊಳ್ಳಲಾಗಿತ್ತು. ಸರ್ಕಾರ ಕೇವಲ 20 ಸಾವಿರ ಕಾರ್ಮಿಕರನ್ನು ಕಾಯಂಗೊಳಿಸುವ ಸುತ್ತೋಲೆ ಹೊರಡಿಸಿ, ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿತು. ಆದರೆ, ಚುನಾವಣೆ ಘೋಷಣೆಯಾದ ಕಾರಣ ಪ್ರಕ್ರಿಯೆಗಳು ಸ್ಥಗಿತಗೊಂಡವು' ಎಂದರು.

'2018ರಿಂದ ಇದುವರೆಗೂ ನೇರಪಾವತಿ ಅಡಿಯಲ್ಲಿ ಕಾರ್ಯನಿರ್ವಹಿಸಿ ಅನಾರೋಗ್ಯದಿಂದ ಮೃತಪಟ್ಟಿರುವ ಪೌರಕಾರ್ಮಿಕರ ಕುಟುಂಬಕ್ಕೆ ಕನಿಷ್ಠ ₹10 ಲಕ್ಷ ಪರಿಹಾರದ ಜೊತೆಗೆ ಒಬ್ಬರಿಗೆ ಸರ್ಕಾರಿ ಕೆಲಸ ನೀಡಬೇಕು. ಗೃಹ ಭಾಗ್ಯ ಯೋಜನೆಯ ನಿಯಮಗಳನ್ನು ತಿದ್ದುಪಡಿ ಮಾಡುವುದರ ಮೂಲಕ ಮನೆ ನಿರ್ಮಿಸಿ ಕೊಡಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಆರೋಗ್ಯ ಕಾರ್ಡ್ ನೀಡಬೇಕು. ಕೋವಿಡ್ ಸಂದರ್ಭದಲ್ಲಿ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬಸ್ಥರಿಗೆ ಕೂಡಲೇ ಪರಿಹಾರ ನೀಡಬೇಕು' ಎಂದು ಹೇಳಿದರು.

ಸಂಘದ ರಾಜ್ಯ ಸಂಚಾಲಕ ಕೆ.ಬಿ. ಓಬಳೇಶ, ಪ್ರಧಾನ ಕಾರ್ಯದರ್ಶಿ ಆಂಜನೇಯಲು, ಕಾರ್ಯಾಧ್ಯಕ್ಷ ಹೆಬ್ಬಾಳ ನಾಗರಾಜು, ನಗರ ಘಟಕದ ಅಧ್ಯಕ್ಷ ಮುನಿರಾಜು ಇದ್ದರು.

ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮ: ಅನುದಾನಕ್ಕೆ ಮುಖ್ಯಮಂತ್ರಿಗೆ ಮನವಿ

ನಿಗಮಕ್ಕೆ ಅನುದಾನ ಅಸಾಧ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಜಾತಿ, ವರ್ಗದ ಬಡವರಿಗಾಗಿಯೇ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಪರಿಣಾಮ ಈ ಬಾರಿಯ ಬಜೆಟ್‌ನಲ್ಲಿ 'ಹಡಪದ ಅಪ್ಪಣ್ಣ ಅಭಿವೃದ್ಧಿ ನಿಗಮ'ಕ್ಕೆ ಪ್ರತ್ಯೇಕ ಅನುದಾನ ನೀಡಲು ಅಸಾಧ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸೋಮವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶಿವಶರಣ ಹಡಪದ ಅಪ್ಪಣ್ಣ ರಾಜ್ಯಮಟ್ಟದ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

'ಮುಂದಿನ ಬಜೆಟ್‌ನಲ್ಲಿ ಈ ನಿಗಮಕ್ಕೆ ಹೆಚ್ಚಿನ ಅನುದಾನ ಕಲ್ಪಿಸಲಾಗುವುದು. ಗ್ಯಾರಂಟಿಗಳನ್ನು ಸರ್ವರಿಗೂ ಅನ್ವಯ ಆಗುವಂತೆಯೇ ಜಾರಿ ಮಾಡಿದ್ದೇವೆ. ಯೋಜನೆಗಳ ಕಾಳಜಿಯನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು' ಎಂದರು.

'ಜನರಿಗೆ ಬಸವಣ್ಣ, ಹಡಪದ ಅಪ್ಪಣ್ಣ, ಡಾ.ಬಿ.ಆರ್ .ಅಂಬೇಡ್ಕರ್ ಅವರ ಆದರ್ಶಗಳು ತಿಳಿಯಬೇಕು. ಅದೇ ಉದ್ದೇಶದಿಂದ ಸರ್ಕಾರವೇ ಮಹನೀಯರ ಜಯಂತಿಯನ್ನು ಆಚರಿಸುತ್ತಿದೆ' ಎಂದರು.

ತಂಗಡಗಿಯ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ ಮಾತನಾಡಿ, ಮಠಕ್ಕೆ ₹ 10 ಕೋಟಿ, ಸಮಾಜದ ಅಭಿವೃದ್ಧಿಗೆ ₹ 100 ಕೋಟಿ ಅನುದಾನ, ಬೆಂಗಳೂರಿನಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ 5 ಎಕರೆ ಜಾಗ ಮಂಜೂರು ಮಾಡುವಂತೆ ಮನವಿ ಮಾಡಿದರು.

ಹಡಪದ ಅಪ್ಪಣ್ಣ ಅವರು ಜನಿಸಿದ ಸ್ಥಳವನ್ನು ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ತಂದು ಅಭಿವೃದ್ಧಿ ಮಾಡುವಂತೆ ಕೋರಿದರು.

ಸಚಿವ ಶಿವರಾಜ್ ಎಸ್. ತಂಗಡಗಿ, ಅಖಿಲ ಕರ್ನಾಟಕ ಅಪ್ಪಣ್ಣ ಸಮಾಜ ಸೇವಾ ಸಂಘದ ರಾಜ್ಯ ಅಧ್ಯಕ್ಷ ಸಿದ್ದಪ್ಪ ಹಡಪದ, ಸಾಹಿತಿ ಸಚ್ಚಿದಾನಂದ ಚಟ್ನಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ಇಲಾಖೆ ನಿರ್ದೇಶಕ ವಿಶ್ವನಾಥ ಪಿ. ಹಿರೇಮಠ ಇದ್ದರು.



ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ ಶಿವಶರಣ ಹಡಪದ ಅಪ್ಪಣ್ಣ ಜಯಂತಿಯಲ್ಲಿ (ಎಡದಿಂದ) ಅಖಿಲ ಕರ್ನಾಟಕ ಅಪ್ಪಣ್ಣ ಸಮಾಜ ಸೇವಾ ಸಂಘದ ರಾಜ್ಯ ಅಧ್ಯಕ್ಷ ಸಿದ್ದಪ್ಪ ಹಡಪದ, ಸಚಿವ ಶಿವರಾಜ್ ಎಸ್. ತಂಗಡಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ತಂಗಡಗಿಯ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನ ಮಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎಂ. ಮಂಜುಳಾ ಅವರು ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಸ್ವಾರ್ಥಕ್ಕಾಗಿ ಕೆಲವರು ಜಾತಿ ವ್ಯವಸ್ಥೆ ಸೃಷ್ಟಿಸಿದ್ದರು. ಜಾತಿ ವ್ಯವಸ್ಥೆಯಿಂದಲೇ ಅಸಮಾನತೆ ಸೃಷ್ಟಿಯಾಗಿತ್ತು. ಇದನ್ನು ತೊಲಗಿಸಲು ಬಸವಾದಿ ಶರಣರು ಹೋರಾಟ ನಡೆಸಿದ್ದರು

ಸಿದ್ದರಾಮಯ್ಯ, ಮುಖ್ಯಮಂತ್ರಿ

ಹಡಪದ ಸಮಾಜದ ಕುಲಶಾಸ್ತ್ರ ಅಧ್ಯಯನ ಆಗಬೇಕು. ಬೆಂಗಳೂರಿನಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆಗೆ ನೆರವು ನೀಡಬೇಕು

ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಹಡಪದ ಅಪ್ಪಣ್ಣ ದೇವರ ಮಠ

ಚಿತ್ರದುರ್ಗದ ಮುರುಘಾ ಮಠ: ಮೇಲ್ಮನವಿ ವಿಚಾರಣೆ

ಆಡಳಿತಾಧಿಕಾರಿಯಾಗಿ ಜಿಲ್ಲಾ ನ್ಯಾಯಾಧೀಶರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ, 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ನೇಮಕ ಮಾಡಿ ಹೈಕೋರ್ಟ್ ಆದೇಶಿಸಿದೆ.

ಈ ಕುರಿತ ಮೇಲ್ಮನವಿಯನ್ನು ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠವು, 'ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರು ಮಂಗಳವಾರ (ಜುಲೈ 04) ಬೆಳಿಗ್ಗೆ 11 ಗಂಟೆಗೆ ಮಠದ ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಬೇಕು' ಎಂದು ನಿರ್ದೇಶಿಸಿದೆ.

'ಜಿಲ್ಲಾ ನ್ಯಾಯಾಧೀಶರು ಯಾವುದೇ ಪ್ರಮುಖ ನೀತಿ ನಿರ್ಧಾರ ಕೈಗೊಳ್ಳಬಾರದು. ಮಠ ಮತ್ತು ವಿದ್ಯಾಪೀಠದ ದೈನಂದಿನ ವ್ಯವಹಾರಗಳನ್ನು ಮಾತ್ರವೇ ನಿಭಾಯಿಸಬೇಕು. ಈ ದಿಸೆಯಲ್ಲಿ ಯಾವುದಾದರೂ ನೆರವು ಬೇಕಾದಲ್ಲಿ ಚಿತ್ರದುರ್ಗ ಜಿಲ್ಲಾಧಿಕಾರಿಯನ್ನು ಲಿಖಿತವಾಗಿ ಕೋರಬಹುದು. ಅದರನ್ವಯ ಜಿಲ್ಲಾಧಿಕಾರಿ ತಕ್ಷಣವೇ ಅಗತ್ಯ ನೆರವು ಕಲ್ಪಿಸಬೇಕು' ಎಂದು ನಿರ್ದೇಶಿಸಿದೆ. ಮೇಲ್ಮನವಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದೆ.



ಹರ್ಷ ಹತ್ಯೆ ಪ್ರಕರಣ: ಜಾಮೀನು ನಕಾರ

ಬೆಂಗಳೂರು: ಶಿವಮೊಗ್ಗದ ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣದ ಆರೋಪಿ ಫರಾಜ್ ಪಾಷಾಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಫರಾಜ್ ಪಾಷ (26) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್ ಕುಮಾರ್ ಮತ್ತು ಜಿ.ಬಸವರಾಜು ಅವರಿದ್ದ ವಿಭಾಗೀಯ ನ್ಯಾಯಪೀಠ, 'ಅರ್ಜಿದಾರ ಪಾಷ ಕೊಲೆ ಪ್ರಕರಣದ ಪಿತೂರಿಯ ಭಾಗವಾಗಿದ್ದಾನೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ಆರೋಪಿ ವಿರುದ್ಧದ ಅಪರಾಧಗಳು ದೇಶದ ಏಕತೆ, ಸಮಗ್ರತೆ, ಭದ್ರತೆ ಹಾಗೂ ಸಾರ್ವಭೌಮತೆಗೆ ಧಕ್ಕೆ ತರುವಂತಿವೆ. ಮೃತ ಹರ್ಷನ ಬಗ್ಗೆ ಯಾವುದೇ ವೈಯಕ್ತಿಕ ದ್ವೇಷ ಇರಲಿಲ್ಲ. ಹಿಂದೂಗಳಲ್ಲಿ ಭಯ ಬಿತ್ತುವ ಉದ್ದೇಶದಿಂದ ಹರ್ಷನನ್ನು ಹತ್ಯೆಗೆ ಆಯ್ದುಕೊಳ್ಳಲಾಗಿದೆ. ಪಾಷನ ವಯಸ್ಸು ಚಿಕ್ಕದು ಮತ್ತು ಆತ ಕ್ರಿಮಿನಲ್ ಹಿನ್ನೆಲೆ ಹೊಂದಿಲ್ಲ ಎಂಬ ವಾದವನ್ನು ಒಪ್ಪಲು ಆಗದು' ಎಂದು ನ್ಯಾಯಪೀಠ ಹೇಳಿದೆ.

ಕಲಿಕೆಗೆ ನಷ್ಟ: ₹ 10 ಲಕ್ಷ ದಂಡ

ಬೆಂಗಳೂರು: ವಿಶ್ವವಿದ್ಯಾಲಯ ನಿಗದಿಪಡಿಸಿದ ಗಡುವಿನೊಳಗೆ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸದೆ ವಿದ್ಯಾರ್ಥಿಗಳಿಗೆ ಒಂದು ವರ್ಷದ ಕಲಿಕೆಗೆ ನಷ್ಟ ಉಂಟುಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಬೆಳ್ಳಂದೂರು ಅಗ್ರಹಾರದ ಮದರ್ ಮೇರಿ ಕಾಲೇಜ್ ಆಫ್ ನರ್ಸಿಂಗ್‌ಗೆ ಹೈಕೋರ್ಟ್, ಒಟ್ಟು ₹ 10 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ ಮದರ್ ಮೇರಿ ಕಾಲೇಜ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಒಂದು ವರ್ಷದ ಓದಿನ ನಷ್ಟಕ್ಕೆ ಒಳಗಾದ 10 ವಿದ್ಯಾರ್ಥಿಗಳಿಗೆ ನರ್ಸಿಂಗ್ ಕಾಲೇಜು ತಲಾ ₹ 1 ಲಕ್ಷ ಪಾವತಿಸಬೇಕು. ನಿಯಮ ಪಾಲಿಸದ ಕಾಲೇಜಿನ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವುದೂ ಸೇರಿದಂತೆ ಕಾನೂನುಗಳಡಿ ಲಭ್ಯವಿರುವ ಕ್ರಮ ಕೈಗೊಳ್ಳಬೇಕು' ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿಗೆ ಪೀಠ ನಿರ್ದೇಶಿಸಿದೆ.

2021–22ರಲ್ಲಿ ಮೊದಲ ವರ್ಷದ ಬಿಎಸ್ಸಿ ನರ್ಸಿಂಗ್ ಕೋರ್ಸ್‌ಗೆ ಪ್ರವೇಶ ಪಡೆದಿದ್ದ ವಿದ್ಯಾರ್ಥಿಗಳು, ವಿಶ್ವವಿದ್ಯಾಲಯಕ್ಕೆ ಪೋರ್ಟಲ್ ಓಪನ್ ಮಾಡಲು ಮತ್ತು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲು ನಿರ್ದೇಶಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಹೈಕೋರ್ಟ್‌ಗೆ 20 ಎಜಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ಅಡ್ವೊಕೇಟ್ ಜನರಲ್ ಹುದ್ದೆಗೆ 20 ವಕೀಲರನ್ನು ನೇಮಕ ಮಾಡಲಾಗಿದೆ.



ಈ ಕುರಿತಂತೆ ರಾಜ್ಯ ಸರ್ಕಾರ ಸೋಮವಾರ ಅಧಿಸೂಚನೆ ಹೊರಡಿಸಿದ್ದು, ಇವರಲ್ಲಿ 10 ಜನರು ಬೆಂಗಳೂರು, ಮೂವರು ಕಲಬುರಗಿ ಮತ್ತು ಧಾರವಾಡಕ್ಕೆ ಇಬ್ಬರನ್ನು ನೇಮಕ ಮಾಡಲಾಗಿದೆ.

ಬೆಂಗಳೂರು: ಹಿರಿಯ ವಕೀಲ ವಿಕ್ರಂ ಹುಯಿಲಗೋಳ, ಕೆಂಪಣ್ಣ, ಸಂತೋಷ ಎಸ್. ಗೋಗಿ, ಪ್ರತಿಮಾ ಹೊನ್ನಾಪುರ, ಇಸ್ಮಾಯಿಲ್ ಜಬೀವುಲ್ಲಾ, ಸಿ.ಎಸ್.ಪ್ರದೀಪ್, ರೂಬೆನ್ ಜಾಕೊಬ್, ವಿ.ಜಿ. ಭಾನುಪ್ರಕಾಶ್, ಕಿರಣ ರೋಣ, ಎಸ್.ಎ.ಅಹ್ಮದ್.

ಧಾರವಾಡ: ಜೆ.ಎಂ. ಗಂಗಾಧರ ಮತ್ತು ಕೇಶವ ರೆಡ್ಡಿ.

ಕಲಬುರಗಿ: ಮಲ್ಹಾರ ರಾವ್, ವೈ.ಎಚ್. ವಿಜಯ ಕುಮಾರ್ ಮತ್ತು ಅರ್ಚನಾ ಬಿ.ತಿವಾರಿ.

ಸುಪ್ರೀಂ ಕೋರ್ಟ್ ಪ್ರತಿನಿಧಿಗಳಾಗಿ ಐವರು ಎಜಿಗಳನ್ನು ನೇಮಕ ಮಾಡಲಾಗಿದೆ. ನಿಶಾಂತ ಪಾಟೀಲ, ಮೊಹಮದ್ ಅಲಿಖಾನ್, ಪ್ರತೀಕ್ ಛಡ್ಡಾ, ಆವಿಷ್ಕಾರ್ ಸಿಂಘ್ವಿ ಮತ್ತು ಅಮನ್ ಪನ್ವಾರ್.

ನೂರು ಸರ್ಕಾರಿ ಶಾಲೆಗಳಿಗೆ ಪುಸ್ತಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಲ್ಲಿ ಪುಸ್ತಕ ಪ್ರೀತಿ ಬೆಳೆಸುವುದಕ್ಕಾಗಿ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಈ ಬಾರಿ ಚಿಕ್ಕಮಗಳೂರು ಜಿಲ್ಲೆಯ ನೂರು ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪುಸ್ತಕ ವಿತರಣೆ ಮಾಡಲಿದೆ.

'ನೂರು ಶಾಲೆಗಳಿಗೆ ನೂರು ನೂರು ಪುಸ್ತಕ' ಯೋಜನೆಯಡಿ ಈಗಾಗಲೇ ಬೆಂಗಳೂರು ಗ್ರಾಮಾಂತರ, ಧಾರವಾಡ, ಚಾಮರಾಜನಗರ, ತುಮಕೂರು, ಮೈಸೂರು, ಮಂಡ್ಯ ಹಾಗೂ ಶಿವಮೊಗ್ಗ ಜಿಲ್ಲೆಗಳ ತಲಾ ನೂರು ಶಾಲೆಗಳ ಗ್ರಂಥಾಲಯಗಳಿಗೆ 70,000 ಪುಸ್ತಕಗಳನ್ನು ವಿತರಿಸಲಾಗಿದೆ. 2023ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ನೂರು ಸರ್ಕಾರಿ ಶಾಲೆಗಳಿಗೆ ತಲಾ ನೂರರಂತೆ 10,000 ಪುಸ್ತಕ ವಿತರಿಸಲಾಗುವುದು.

ಪುಸ್ತಕಗಳನ್ನು ಬರಹಗಾರರು, ಪ್ರಕಾಶಕರು, ಸಂಘ–ಸಂಸ್ಥೆಗಳು, ಅಕಾಡೆಮಿಗಳು, ಪುಸ್ತಕ ಪ್ರಾಧಿಕಾರ, ವಿಶ್ವವಿದ್ಯಾಲಯಗಳ ಪ್ರಸಾರಾಂಗ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಯಾರಾದರೂ ಉಚಿತವಾಗಿ ನೀಡಬಹುದು. ಒಂದು ವಿಷಯಕ್ಕೆ 100 ಪ್ರತಿಗಳನ್ನು ನೀಡಬೇಕು. ಆಸಕ್ತರು ಮೊಬೈಲ್: 94487563991, 9886249672 ಸಂಪರ್ಕಿಸಬಹುದು ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ಆರ್. ದೊಡ್ಡೇಗೌಡ ತಿಳಿಸಿದ್ದಾರೆ.

ದಲಿತರ ಹಕ್ಕೊತ್ತಾಯ ಸಮಾವೇಶದಲ್ಲಿ ಅರವಿಂದ ಮಾಲಗತ್ತಿ ವಿಷಾದ

ವ್ಯಾಪಾರ ಕೇಂದ್ರವಾಗಿರುವ ಮಠಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜವನ್ನು ತಿದ್ದುವುದರಲ್ಲಿ ಸ್ವಾಮೀಜಿಗಳ ಪಾತ್ರ ದೊಡ್ಡದಿದೆ. ಆದರೆ, ಅವರು ತಿದ್ದುವ ಕೆಲಸ ಮಾಡುತ್ತಿಲ್ಲ. ಮಠಗಳು ವ್ಯಾಪಾರ ಕೇಂದ್ರಗಳಾಗಿವೆ. ರಾಜಕೀಯ ಅದಕ್ಕೆ ಪೂರಕವಾಗಿದೆ' ಎಂದು ಬರಹಗಾರ ಅರವಿಂದ ಮಾಲಗತ್ತಿ ವಿಷಾದ ವ್ಯಕ್ತಪಡಿಸಿದರು.

ದಲಿತ ಹಕ್ಕುಗಳ ಸಮಿತಿ ಸೋಮವಾರ ಹಮ್ಮಿಕೊಂಡಿದ್ದ ದಲಿತ ಹಕ್ಕೊತ್ತಾಯ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಆರತಿ ತಟ್ಟೆ ಮುಟ್ಟಿದ್ದಕ್ಕೆ, ಕೋಲು ಮುಟ್ಟಿದ್ದಕ್ಕೆ ಹಲ್ಲೆ ನಡೆಯುತ್ತಿದೆ. ಜಾತಿ ವ್ಯವಸ್ಥೆಯ ಕಾರಣದಿಂದ ಇಂಥ ಹಲ್ಲೆಗಳು ನಿರಂತರವಾಗಿ ನಡೆಯುತ್ತಿವೆ. ಇದು ಸರಿಯಲ್ಲ ಎಂದು ಹೇಳಬೇಕಾದ ಸ್ವಾಮೀಜಿಗಳೇ ಸುಮ್ಮನಿದ್ದಾರೆ. ಅವರಿಗೂ ಈ ಜಾತಿ ವ್ಯವಸ್ಥೆ ಬೇಕಿದೆ ಎಂದು ಕಾಣುತ್ತದೆ. ಖಾವಿ ಧರಿಸಿದವರು ಮನುಷ್ಯರಾಗಬೇಕು ಮತ್ತು ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡಬೇಕು' ಎಂದು ತಿಳಿಸಿದರು.

'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬಂತೆ ಜಾತಿ ವಿನಾಶಕ್ಕಾಗಿ ಜಾತಿಯನ್ನು ಬಳಸಬೇಕು. ಆದರೆ, ಜಾತಿ ದೃಢೀಕರಣಕ್ಕೆ ಬಳಸಲಾಗುತ್ತಿದೆ. ಜಾತಿ ಹೆಸರಿನ ಎಲ್ಲ ಸಂಸ್ಥೆಗಳನ್ನು ತೊಡೆದುಹಾಕಬೇಕು. ಸರ್ಕಾರ ಜಾತಿ ರಹಿತ ಅಭಿವೃದ್ಧಿಗೆ ಒತ್ತು ನೀಡಬೇಕು. ಜಾತಿಗೊಂದು ಸ್ಮಶಾನ ಮಾಡಬಾರದು. ಎಲ್ಲ ಜಾತಿ, ಧರ್ಮಗಳಿಗೆ ಒಂದೇ ಸ್ಮಶಾನ ಮಾಡಬೇಕು' ಎಂದು ಸಲಹೆ ನೀಡಿದರು.

'ಪೂನಾ ಒಪ್ಪಂದಕ್ಕೆ ಅಂಬೇಡ್ಕರ್ ಸಹಿ ಹಾಕಬೇಕಾದ ಅನಿವಾರ್ಯವನ್ನು ಗಾಂಧೀಜಿ ಸೃಷ್ಟಿಸಿದ್ದರಿಂದ ದಲಿತರಿಗೆ ಅನ್ಯಾಯವಾಗಿದ್ದು ನಿಜ. ಸಹಜವಾದ ಸಿಟ್ಟಿನಿಂದ ದಲಿತ ಸಂಘರ್ಷ ಸಮಿತಿ 80ರ ದಶಕದಲ್ಲಿ ಗಾಂಧೀಜಿಯನ್ನು ಟೀಕೆ ಮಾಡಿತು. ಅಲ್ಲಿಯವರೆಗೆ ಬಹಿರಂಗವಾಗಿ ಗಾಂಧೀಜಿಯ ವಿರುದ್ಧ ಮಾತನಾಡದ ಕೋಮು ಶಕ್ತಿಗಳಿಗೆ ಧೈರ್ಯ ಬರಲು ಇದು ಕಾರಣವಾಯಿತು. ಗಾಂಧೀಜಿಯನ್ನು ಖಳನಾಯಕನಂತೆ, ಗೋಡ್ಸೆಯನ್ನು ನಾಯಕನಂತೆ ಬಿಂಬಿಸಲು ಶುರು ಮಾಡಿದರು. ಹಾಗಾಗಿ ದಲಿತರು ಸೂಕ್ಷ್ಮವಾಗಿರದೇ ಹೋದರೆ ನಮ್ಮ ವಿರೋಧಿ ಶಕ್ತಿಗಳನ್ನು ಬಡಿದೆಬ್ಬಿಸಿದಂತಾಗುತ್ತದೆ ಎಂಬ ಎಚ್ಚರ ಇರಬೇಕು' ಎಂದು ತಿಳಿಸಿದರು.



ಗಾಂಧಿ ಭವನದಲ್ಲಿ ನಡೆದ ದಲಿತ ಹಕ್ಕೊತ್ತಾಯ ರಾಜ್ಯ ಸಮಾವೇಶಕ್ಕೆ ಸಾಹಿತಿ ಅರವಿಂದ ಮಾಲಗತ್ತಿ ಚಾಲನೆ ನೀಡಿದರು. ದಲಿತ ಹಕ್ಕುಗಳ ಸಮಿತಿಯ ಎನ್. ನಾಗರಾಜ್, ಟಿ.ಆರ್. ಚಂದ್ರಶೇಖರ್, ಗೋಪಾಲಕೃಷ್ಣ ಹರಳಹಳ್ಳಿ, ಮಾಳಮ್ಮ ಇದ್ದರು —ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಓರುಗಂಟಿ ರಾಮಚಂದ್ರಯ್ಯ ಸ್ಮಾರಕ ದತ್ತಿ ಉಪನ್ಯಾಸ: 'ಕರ್ನಾಟಕದಲ್ಲಿ ಭಕ್ತಿ ಚಳವಳಿ ಸಾಮಾಜಿಕ ನ್ಯಾಯದ ಕಡೆಗೆ' ಕುರಿತು ಉಪನ್ಯಾಸ: ವಾಣಿಶ್ರೀ ಬಿ.ಎಂ., ಅಧ್ಯಕ್ಷತೆ: ಜಯಕರ ಎಸ್.ಎಂ., ಉಪಸ್ಥಿತಿ: ಎನ್. ಶೇಖ್ ಮಸ್ತಾನ್, ಎಂ.ಜಿ. ನಾಗರಾಜ್, ವಿ. ನಾಗರಾಜ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಇತಿಹಾಸ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಇತಿಹಾಸ ವಿಭಾಗ, ಅಶೋಕ ಭವನ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಬಣಜಿಗ ಸಮಾಜದ ನೂತನ ಸಚಿವರಿಗೆ, ಶಾಸಕರಿಗೆ, ಕೇಂದ್ರ ನಾಗರಿಕ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳಿಗೆ ಸನ್ಮಾನ ಸಮಾರಂಭ: ಉದ್ಘಾಟನೆ: ಶಿವರಾಜ ತಂಗಡಗಿ, ಸಂಗಮೇಶ ಬಾದವಾಡಗಿ ಅವರ 'ಶೃಂಗಾರ ಶಾಯಿರಿ' ಪುಸ್ತಕ ಬಿಡುಗಡೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿ: ದೊಡ್ಡಣ್ಣ, ಶಂಕರ ಬಿದರಿ. ಸಚಿವರು, ಶಾಸಕರಿಗೆ ಸನ್ಮಾನ: ಉದ್ಘಾಟನೆ: ಭಗವಂತ ಖೂಬಾ, ಸನ್ಮಾನಿಸುವವರು: ಜಗದೀಶ ಶೆಟ್ಟರ್, ಅತಿಥಿ: ಶಂಕರ ಬಿದರಿ, ಸನ್ಮಾನಿತರು: ಈಶ್ವರ ಖಂಡ್ರೆ, ಡಾ.ಶರಣ ಪ್ರಕಾಶ್ ಪಾಟೀಲ, ಅಶೋಕ ಪಟ್ಟಣ, ಶಶಿಕಲಾ ಜೊಲ್ಲೆ, ಮಹಾಂತೇಶ ಕೌಜಲಗಿ, ಅಲ್ಲಮಪ್ರಭು ಪಾಟೀಲ, ಶರಣು ಸಲಗರ, ಬಿ.ವೈ. ವಿಜಯೇಂದ್ರ, ಮಹೇಶ ಟೆಂಗಿನಕಾಯಿ, ಯಶವಂತರಾಯಗೌಡ ಪಾಟೀಲ, ಸಿದ್ಧು ಪಾಟೀಲ, ನಿಖಿಲ್ ಕತ್ತಿ, ಗಣೇಶ್ ಪ್ರಸಾದ್, ಶೈಲೇಂದ್ರ ಬೆಲ್ದಾಳೆ, ಆಯೋಜನೆ: ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3ರಿಂದ

ಪ್ರವಚನ ವಾಹಿನಿ: 'ಧರ್ಮ ಕರ್ಮ'ದ ಕುರಿತು ಉಪನ್ಯಾಸ: ರೂಪಾ ಐಯ್ಯರ್ ಶ್ರೀವತ್ಸ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

ಧಾರ್ಮಿಕ ಪ್ರವಚನ: 'ಜಯತೀರ್ಥರ ವಿರಚಿತ ಪದ್ಯಮಾಲಾ' ಕುರಿತು: ಬಿ. ಜಗನ್ನಾಥಾಚಾರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 6.30

ಧಾರ್ಮಿಕ ಉಪನ್ಯಾಸ ಕಾರ್ಯಕ್ರಮ: 'ಮುಖ್ಯಪ್ರಾಣ ತತ್ವ'ದ ಕುರಿತು ಉಪನ್ಯಾಸ: ಸಿಂಧನೂರು ಕೃಷ್ಣಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 7

2013ರ ರಾಜಕಾರಣ ಮತ್ತೆ ಮುನ್ನೆಲೆಗೆ: ವರಿಷ್ಠರಿಗೂ ಅನಿವಾರ್ಯವೇ?

ಕುಗ್ಗಿದ ಸಂತೋಷ; ಬಿಎಸ್‌ವೈ ಮಂದಹಾಸ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ



ವಯಸ್ಸಿನ ಕಾರಣ ನೀಡಿ ವರಿಷ್ಠರು ಉರುಳಿಸಿದ ದಾಳದಿಂದ ಮುಖ್ಯಮಂತ್ರಿ ಪಟ್ಟ ಕಳೆದುಕೊಂಡು, ಬಿಜೆಪಿಯ 'ಹಿರಿಯರ' ಪಡಸಾಲೆ ಸೇರಿದ್ದ ಬಿ.ಎಸ್. ಯಡಿಯೂರಪ್ಪ, ಪಕ್ಷವನ್ನು ಮತ್ತೆ ಬಿಗಿ ಮುಷ್ಟಿಗೆ ತೆಗೆದುಕೊಳ್ಳುವತ್ತ ದಾಂಗುಡಿ ಇಟ್ಟಿದ್ದಾರೆ.

ವಿಧಾನಸಭೆ ಚುನಾವಣೆಗೆ ಮುನ್ನ ಹೆಣೆದ ಎಲ್ಲ ತಂತ್ರಗಾರಿಕೆಗಳು ವಿಫಲಗೊಂಡು, ಪ್ರಧಾನಿ ನರೇಂದ್ರ ಮೋದಿಯವರ ವರ್ಚಸ್ಸು ಕೈಹಿಡಿಯದೇ ಹೀನಾಯ ಸೋಲುಕಂಡ ಬಿಜೆಪಿ ನಿಸ್ತೇಜಗೊಂಡಿದೆ. ಈ ಹೊತ್ತಿನಲ್ಲಿ ಸರ್ಕಾರದ ವಿರುದ್ಧದ ಸಮರಕ್ಕೆ ಉಮೇದಿನಿಂದ ಅಣಿಯಾಗುತ್ತಿರುವ ಯಡಿಯೂರಪ್ಪನವರ ಆಸರೆ, ಪಕ್ಷದ ವರಿಷ್ಠರಿಗೂ ಬೇಕಾದಂತಿದೆ. 'ನಿಮ್ಮಿಂದ ಆಗುವುದಿಲ್ಲ' ಎಂದು ದೂರ ತಳ್ಳಿದವರೇ, ಲೋಕಸಭೆ ಚುನಾವಣೆಯ ಗೆಲುವಿಗೆ ಯಡಿಯೂರಪ್ಪನವರ ಕೈಹಿಡಿದು ಗೋಗರೆವ ಪರಿಸ್ಥಿತಿಗೆ ತಲುಪಿದ್ದಾರೆ.

ಅಲ್ಲಿಗೆ, ದಶಕದ ಹಿಂದಿನ ರಾಜಕೀಯದ ಸ್ಥಿತಿಗೆ ಕರ್ನಾಟಕ ಬಿಜೆಪಿ ಮರಳಿದಂತಾಗಿದೆ. ಹಿರಿಯರು, ಜನಸಮೂಹವನ್ನು ಸೆಳೆಯಬಲ್ಲ ನಾಯಕರನ್ನೆಲ್ಲ ಹೊರಗಿಟ್ಟು, ಪಕ್ಷವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಜೋಡಿ ನಡೆಸಿದ್ದ 'ಆಟ'ಕ್ಕೆ ತೆರೆಬಿದ್ದಂತಾಗಿದೆ. ಚುನಾವಣೆ ಸೋಲಿನ ಬಳಿಕ ತಮ್ಮ ಹಿತೈಷಿಗಳನ್ನು ಮುಂದೆ ಬಿಟ್ಟು, ತಮ್ಮ ವೈಫಲ್ಯವನ್ನು ಮುಚ್ಚಿಡಲು 'ಹೊಂದಾಣಿಕೆ ರಾಜಕಾರಣ'ದ ಕೂಗೆಬ್ಬಿಸಿದ್ದ ಸಂತೋಷ್ ಬಣ ದುರ್ಬಲಗೊಂಡಿರುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸಲು ಆರಂಭಿಸಿವೆ.

2011ರಲ್ಲಿ ಯಡಿಯೂರಪ್ಪ ಅವಧಿ ಪೂರೈಸದೇ ಮುಖ್ಯಮಂತ್ರಿ ಸ್ಥಾನದಿಂದ ಇಳಿದಿದ್ದರು. 2013 ಚುನಾವಣೆಗೆ ಮುನ್ನ ತಮ್ಮ ಪಟಾಲಂ ಜತೆಗೆ ಪಕ್ಷದಿಂದ ಹೊರಬಿದ್ದು, ಕೆಜೆಪಿ ಕಟ್ಟಿದ್ದರು. ನಿರೀಕ್ಷಿತ ಫಲಿತಾಂಶ ಸಿಕ್ಕಿರಲಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಆಗಲೂ ಅಧಿಕಾರಕ್ಕೆ ಬಂದಿತ್ತು. ವಿರೋಧ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಜಗದೀಶ ಶೆಟ್ಟರ್ ಇದ್ದರು. ಕೇವಲ ಆರು ಸ್ಥಾನಗಳನ್ನು ಹೊಂದಿದ್ದ ಕೆಜೆಪಿ ನಾಯಕ ಯಡಿಯೂರಪ್ಪ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಹೋರಾಟವನ್ನು ನಡೆಸುತ್ತಲೇ ಇದ್ದರು.

ಮುನ್ನೆಲೆಗೆ ಯಡಿಯೂರಪ್ಪ: ಯಡಿಯೂರಪ್ಪನವರನ್ನು ಹಿಂಬದಿಗೆ ತಳ್ಳುವಲ್ಲಿ ಪ್ರಮುಖ ಪಾತ್ರವನ್ನು ಕೆಲವರು ನಿರ್ವಹಿಸಿದ್ದರೂ ಅದರ ಪೂರ್ಣಭಾರ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲಬೇಕು. ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಬಳಿಕ, ಪಕ್ಷವನ್ನು ಪುನರ್ ಸಂಘಟಿಸಲು ರಾಜ್ಯ ಪ್ರವಾಸ ಮಾಡುವುದಾಗಿ ಪದೇ ಪದೇ ಅವರು ಹೇಳುತ್ತಿದ್ದರೂ ಅವಕಾಶವನ್ನೇ ಕೊಟ್ಟಿರಲಿಲ್ಲ. ವಿಧಾನಸಭೆ ಚುನಾವಣೆಗೆ ಸಿದ್ಧತೆ ಆರಂಭವಾದಾಗ ಪಕ್ಷದ ಸಂಸದೀಯ ಮಂಡಳಿಯಲ್ಲಿ ಸದಸ್ಯ ಸ್ಥಾನವನ್ನು ಕೊಟ್ಟರು. ಹಾಗಿದ್ದರೂ ಅವರು ಹೇಳಿದವರಿಗೆಲ್ಲ ಟಿಕೆಟ್ ಸಿಗಲಿಲ್ಲ.

ಯಡಿಯೂರಪ್ಪಗೆ ಮತ್ತೆ ಪಕ್ಷದಲ್ಲಿ ಆದ್ಯತೆ ಸಿಗಲಾರಂಭಿಸಿದೆ. ವಿರೋಧ ಪಕ್ಷ ನಾಯಕ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎಂಬ ವಿಚಾರಕ್ಕೆ ಜುಲೈ 2ರಂದು ಅಮಿತ್ ಶಾ, ಜೆ.ಪಿ. ನಡ್ಡಾ ನಡೆಸಿದ ಸಭೆಗೆ ಸಂತೋಷ್, ಪ್ರಲ್ಹಾದ ಜೋಶಿ, ಬಸವರಾಜ ಬೊಮ್ಮಾಯಿ, ಸಿ.ಟಿ. ರವಿ ಯಾರನ್ನೂ ಕರೆದಿರಲಿಲ್ಲ. ಆಮಂತ್ರಣವಿದ್ದುದು ಯಡಿಯೂರಪ್ಪ ಅವರಿಗೆ ಮಾತ್ರ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ, 'ಎಲ್ಲ ಗ್ಯಾರಂಟಿಗಳನ್ನು ಅವರು ಈಡೇರಿಸುತ್ತಾರೆ' ಎಂದು ಯಡಿಯೂರಪ್ಪ ಹೇಳಿದ್ದರು. ಪಕ್ಷ ತನ್ನ ಹಿಡಿತಕ್ಕೆ ಮರಳುತ್ತಿದೆ ಎಂಬುದು ಸ್ಪಷ್ಟವಾಗುತ್ತಿದ್ದಂತೆ ವರಸೆ ಬದಲಿಸಿ, 'ಅಕ್ಕಿಯಲ್ಲಿ ಒಂದು ಗ್ರಾಂ ಕಡಿಮೆಯಾದರೂ ಸಹಿಸುವುದಿಲ್ಲ. ಸದನದ ಒಳಗೂ–ಹೊರಗೂ ಹೋರಾಟ ನಡೆಸುತ್ತೇವೆ' ಎನ್ನುತ್ತಾ ಅಖಾಡಕ್ಕೆ ಧುಮುಕಿದ್ದಾರೆ. ಇದನ್ನು ನೋಡಿದರೆ, ಮತ್ತೆ ಯಡಿಯೂರಪ್ಪ ಪ್ರವರ್ಧಮಾನಕ್ಕೆ ಬಂದಂತೆ ತೋರುತ್ತದೆ.

ಶೋಭಾ ಕರಂದ್ಲಾಜೆಗೆ ರಾಜ್ಯಾಧ್ಯಕ್ಷೆ ಪಟ್ಟ?



ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ನೇಮಕವಾಗುವ ಸಾಧ್ಯತೆ ಇದೆ. ವಿರೋಧ ಪಕ್ಷದ ನಾಯಕ ಸ್ಥಾನ ಲಿಂಗಾಯತ ಸಮುದಾಯಕ್ಕೆ ಸಿಕ್ಕಿದರೆ, ಅಧ್ಯಕ್ಷ ಸ್ಥಾನ ಒಕ್ಕಲಿಗ ಸಮುದಾಯಕ್ಕೆ ನೀಡಬೇಕಾಗುತ್ತದೆ. ಆ ಹೊತ್ತಿನಲ್ಲಿ, ತಮ್ಮ ಆಯ್ಕೆ ಹಿಂದೊಮ್ಮೆ ನಿಕಟವರ್ತಿಯಾಗಿದ್ದ ಶೋಭಾ ಕರಂದ್ಲಾಜೆ ಎಂದು ಯಡಿಯೂರಪ್ಪ ಸೂಚಿಸಿದ್ದಾರೆ.

ಯಡಿಯೂರಪ್ಪ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶೋಭಾ ಅವರು ಸರ್ಕಾರದ ಮೇಲೆ ಹೆಚ್ಚಿನ ಹಿಡಿತ ಸಾಧಿಸಿದ್ದರು. ಅವರು ಎರಡನೇ ಬಾರಿ ಮುಖ್ಯಮಂತ್ರಿ ಆದಾಗ ಯಡಿಯೂರಪ್ಪ ಅವರ ಕುಟುಂಬದವರು ಮಧ್ಯ ಪ್ರವೇಶಿಸಿ, ಶೋಭಾ ಅವರನ್ನು ಸರ್ಕಾರದಿಂದ ದೂರ ಇರಿಸಿದ್ದರು.

ಇತ್ತೀಚೆಗೆ ಯಡಿಯೂರಪ್ಪ, ವಿಜಯೇಂದ್ರ ಮತ್ತು ಶೋಭಾ ಮಧ್ಯೆ ಸಂಧಾನ ನಡೆದಿದ್ದು, ಎಲ್ಲರೂ ಒಟ್ಟಾಗಿ ಹೋಗುವ ನಿರ್ಧಾರಕ್ಕೆ ಬರಲಾಗಿದೆ. ಸಂತೋಷ್ ಬಣ ನಿತ್ರಾಣಗೊಳ್ಳುತ್ತಿದ್ದಂತೆ ಯಡಿಯೂರಪ್ಪ ಸಕ್ರಿಯರಾಗಲು ಇದೂ ಒಂದು ಕಾರಣ ಎಂಬ ಚರ್ಚೆ ಪಕ್ಷದ ವಲಯದಲ್ಲಿ ನಡೆದಿದೆ.



ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ನಡೆದ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸತ್ಯಸಾಯಿ ಆಶ್ರಮದ ಮಧುಸೂದನ ಸಾಯಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಗೌರವಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಇದ್ದಾರೆ

ಸ್ತ್ರೀಯರ ಸಾಧನೆ: ರಾಷ್ಟ್ರಪತಿ ಮುರ್ಮು ಪ್ರಶಂಸೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಇದು ಟ್ರೇಲರ್ ಮಾತ್ರ, ಸಿನಿಮಾ ಇನ್ನೂ ಬಾಕಿ ಇದೆ...

ದೇಶದಲ್ಲಿಯ ಮಹಿಳಾ ಸಬಲೀಕರಣ ಮತ್ತು ಮಹಿಳೆಯರ ಸಾಧನೆ ಬಣ್ಣಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದ ಮಾತಿದು. ಅವರ ಈ ಮಾತುಗಳನ್ನು ಕೇಳಿ ಇಡೀ ಸಭಾಂಗಣದಲ್ಲಿ ನಗುವಿನ ಅಲೆ ಆವರಿಸಿತು.

ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿ ಸೋಮವಾರ ನಡೆದ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಹೆಣ್ಣು ಮಕ್ಕಳು ಉತ್ತಮ ಸಾಧನೆ ತೋರುತ್ತಿದ್ದಾರೆ. ದೇಶದ ಅಭಿವೃದ್ಧಿ ವಿಚಾರದಲ್ಲಿ ಮಹಿಳೆಯರು ದೊಡ್ಡ ಪಾತ್ರ ವಹಿಸುತ್ತಿದ್ದಾರೆ ಎಂದರು.

'ವಿವಿಧ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಸಾಧನೆ ಮಾಡುತ್ತಿದ್ದಾರೆ. ಈ ಘಟಿಕೋತ್ಸವದಲ್ಲಿ 17 ಪದಕಗಳ ಪೈಕಿ 11 ಪದಕಗಳನ್ನು ಹೆಣ್ಣು ಮಕ್ಕಳು ಪಡೆದಿದ್ದಾರೆ. ಇದು ಟ್ರೇಲರ್ ಮಾತ್ರ, ಸಿನಿಮಾ ಬಾಕಿ ಇದೆ' ಎಂದು ಹೆಣ್ಣು ಮಕ್ಕಳ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಗುರುಪೂರ್ಣಿಮೆಯ ದಿನ ಘಟಿಕೋತ್ಸವ ನಡೆಯುತ್ತಿದೆ. ಭಾರತೀಯ ಪರಂಪರೆಯಲ್ಲಿ ಗುರು ಪೂರ್ಣಿಮೆಗೆ ವಿಶೇಷ ಸ್ಥಾನವಿದೆ. ನಮ್ಮ ಜೀವನ ನಿರ್ಮಿಸಿದ್ದು ಗುರು. ಗುರುವಿಗೆ ದೇವರ ಸ್ಥಾನ ನೀಡಲಾಗಿದೆ. ಇದನ್ನು ನಾವು, ನೀವೆಲ್ಲರೂ ಉಳಿಸಿಕೊಂಡು ಹೋಗುವ ಕೆಲಸವಾಗಬೇಕಿದೆ' ಎಂದರು.

'ನಮ್ಮ ಗುರುಕುಲ ಶಿಕ್ಷಣ ಪದ್ಧತಿಯು ವಿಶ್ವಕ್ಕೆ ಮಾದರಿಯಾಗಿದೆ. ಸತ್ಯಸಾಯಿ ಗ್ರಾಮದಲ್ಲಿ ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆ ಒದಗಿಸಲಾಗುತ್ತಿದೆ. ಬಡವರಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ ಬೆಳೆಸುವ ಮೂಲಕ ಅವರಿಗೆ ಉತ್ತಮ ಶಿಕ್ಷಣ ನೀಡಲಾಗುತ್ತಿದೆ' ಎಂದು ಶ್ಲಾಘಿಸಿದರು.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸತ್ಯಸಾಯಿ ಆಶ್ರಮದ ಮಧುಸೂದನ ಸಾಯಿ, ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ಕುಲಪತಿ ಬಿ.ಎನ್. ನರಸಿಂಹಮೂರ್ತಿ ಇದ್ದರು.

ಐವರಿಗೆ ಗೌರವ ಡಾಕ್ಟರೇಟ್

ಪರಿಸರ ಪ್ರೇಮಿ ತುಳಸಿಗೌಡ, ಸಂಗೀತ ವಿದ್ವಾನ್ ಆರ್. ಕೆ.ಪದ್ಮನಾಭ, ರಾಷ್ಟ್ರೀಯ ಬ್ಯಾಡ್ಮಿಂಟನ್ ತಂಡದ ಮುಖ್ಯ ತರಬೇತುದಾರ ಪುಲ್ಲೇಲ ಗೋಪಿಚಂದ್, ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ, ವೇದ ವಿದ್ವಾಂಸ ಪ್ರೊ. ವಿಜಯ್ ಶಂಕರ್ ಶುಕ್ಲಾ ಅವರಿಗೆ ರಾಷ್ಟ್ರಪತಿಯವರು ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಭಾಗಮಂಡಲ: ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ಏರಿಕೆ

ರಾಜ್ಯದ ವಿವಿಧೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಮುಂಗಾರು ಚುರುಕುಗೊಂಡಿದ್ದು, ಹಲವೆಡೆ ಬಿರುಸಾದ ಮಳೆಯಾಗಿದೆ.

ಹೊಸಪೇಟೆ ಸಹಿತ ವಿಜಯನಗರ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಬಿರುಗಾಳಿಯ ಜೊತೆ ಬಿರುಸಿನ ಮಳೆ ಸುರಿಯಿತು. ಹೊಸಪೇಟೆಯ ಇಂದಿರಾನಗರ ಪ್ರದೇಶದಲ್ಲಿ ಆರು ಮನೆಗಳಿಗೆ ಮಳೆ ನೀರು ನುಗ್ಗಿತು. ಜಿಲ್ಲೆಯ ಕೊಟ್ಟೂರು, ಹರಪನಹಳ್ಳಿ, ಕೂಡ್ಲಿಗಿಯಲ್ಲೂ ಬಿರುಸಿನ ಮಳೆಯಾಗಿದೆ. ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಕಾನಹೊಸೂರುಗಳಲ್ಲಿ ಸಾಧಾರಣ ಮಳೆಯಾಗಿದೆ. ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲೂ ಉತ್ತಮ ಮಳೆಯಾಯಿತು.

ಧಾರವಾಡ, ಕಲಘಟಗಿ ಉಪ್ಪಿನಬೆಟಗೇರಿ ಭಾಗದಲ್ಲಿ ಬಾಗಲಕೋಟೆ, ಕೆರೂರ, ಶಿರೂರ ಸುತ್ತಮುತ್ತಲು, ಬೆಳಗಾವಿ ಜಿಲ್ಲೆಯ, ಸವದತ್ತಿ, ಗೋಕಾಕ, ರಾಯಬಾಗ, ಚನ್ನಮ್ಮನ ಕಿತ್ತೂರು, ಮೂಡಲಗಿ ತಾಲ್ಲೂಕಿನಲ್ಲಿ ಮಳೆಯಾಗಿದೆ.

ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಉತ್ತಮ ಮಳೆಯಾದರೆ, ಲಕ್ಷ್ಮೇಶ್ವರ, ಮುಂಡರಗಿ ತಾಲ್ಲೂಕಿನ ಡಂಬಳದಲ್ಲಿ ಜಿಟಿಜಿಟಿ ಮಳೆಯಾಯಿತು. ಉತ್ತರಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಜೊಯಿಡಾ, ದಾಂಡೇಲಿ, ಶಿರಸಿ, ಯಲ್ಲಾಪುರ, ಭಟ್ಕಳ, ಹೊನ್ನಾವರ, ಕುಮಟಾ, ಸಿದ್ದಾಪುರದಲ್ಲಿ ಮಳೆಯಾಯಿತು.

(ಕೊಪ್ಪಳ ವರದಿ): ಜಿಲ್ಲೆಯಲ್ಲಿ ಸೋಮವಾರ ಬೆಳಿಗ್ಗೆಯಿಂದಲೇ ಮೋಡದ ವಾತಾವಾರಣವಿತ್ತು. ಮಧ್ಯಾಹ್ನದ ವೇಳೆಗೆ ಜೋರಾಗಿ ಮಳೆ ಸುರಿಯಿತು. ಗುರುಪೂರ್ಣಿಮೆ ಹಿನ್ನೆಲೆಯಲ್ಲಿ ಇಲ್ಲಿನ ಗವಿಸಿದ್ದೇಶ್ವರ ಮಠ ಹಾಗೂ ಉತ್ತರ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ತಾಣ ಹುಲಿಗಿಗೆ ಭಕ್ತರು ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಬಂದಿದ್ದರು. ಬಹುತೇಕ ಭಕ್ತರು ಮಳೆಗೆ ಸಿಲುಕಿ ಪರದಾಡಿದರು. ಗಂಗಾವತಿ, ಮುನಿರಾಬಾದ್, ಯಲಬುರ್ಗಾ ಹಾಗೂ ತಾವರಗೇರಾದಲ್ಲಿ ಮಳೆಯಾಗಿದೆ.

(ಕೊಡಗು ವರದಿ): ಮಡಿಕೇರಿ ನಗರ ಮತ್ತು ತಾಲ್ಲೂಕಿನ ಭಾಗಮಂಡಲದಲ್ಲಿ ಸೋಮವಾರ ಬಿರುಸಿನ ಮಳೆಯಾಗಿದೆ. ಭಾಗಮಂಡಲದಲ್ಲಿ ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ಕೊಂಚ ಏರಿಕೆ ಕಂಡಿದೆ.

(ದಾವಣಗೆರೆ ವರದಿ): ನಗರ ಸೇರಿದಂತೆ ಜಿಲ್ಲೆಯಾದ್ಯಂತ ಸೋಮವಾರ ಉತ್ತಮ ಮಳೆ ಸುರಿಯಿತು. ನಗರದಲ್ಲಿ ಮಧ್ಯಾಹ್ನ 3.45ಕ್ಕೆ ಮತ್ತೆ ಆರಂಭವಾದ ಮಳೆ ಒಂದು ಗಂಟೆಗೂ ಹೆಚ್ಚು ಕಾಲ ಜೋರಾಗಿ ಸುರಿಯಿತು. ಹರಿಹರ, ಜಗಳೂರು, ಚನ್ನಗಿರಿ ತಾಲ್ಲೂಕಿನ ವಿವಿಧೆಡೆ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯವಿವಿಧೆಡೆ ತುಂತುರು ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಹೊಸನಗರ, ಸಾಗರ, ತೀರ್ಥಹಳ್ಳಿಯಲ್ಲಿ ಸೋಮವಾರ ಸಾಧಾರಣ ಮಳೆಯಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಒಟ್ಟು 56.4 ಮಿ.ಮೀ ಮಳೆಯಾಗಿದೆ. ಇದು ಪ್ರಸಕ್ತ ವರ್ಷ ದಾಖಲಾದ ಅತಿ ಹೆಚ್ಚಿನ ಮಳೆಯಾಗಿದೆ. ಮಂಗಳೂರು ನಗರದಲ್ಲಿ ಸೋಮವಾರ ಸರಾಸರಿ 10 ಸೆಂ.ಮೀ. ಮಳೆಯಾಗಿದೆ.



ಧಾನ್ಯಗಳ ಮೂಟೆಗಳನ್ನು ಹೇರಿಕೊಂಡು ಸುರಿವ ಮಳೆಯಲ್ಲೇ ಮನೆಯತ್ತ ಹೊರಟ ರೈತನೊಬ್ಬ ಕೊಪ್ಪಳದಲ್ಲಿ ಸೋಮವಾರ ಕಂಡದ್ದು ಹೀಗೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಕರಾವಳಿ, ಒಳನಾಡಿನಲ್ಲಿ ಮುಂಗಾರು ಬಿರುಸು ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡು ಭಾಗದಲ್ಲಿ ಮುಂದಿನ ನಾಲ್ಕು ದಿನ ಬಿರುಸಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ. ಹಲವು ಜಿಲ್ಲೆಗಳಿಗೆ ಭಾರಿ ಮಳೆಯ ಮುನ್ನೆಚ್ಚರಿಕೆ ನೀಡಿದೆ.



ಇದೇ 4ರಂದು ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಹಾಸನ, ದಾವಣಗೆರೆ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್', ಅದೇ ದಿನ ಹಾವೇರಿ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಇದೇ 5ರಂದು ಉತ್ತರ ಕನ್ನಡ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ದಕ್ಷಿಣ ಕನ್ನಡ, ಕೊಡಗು, ಮೈಸೂರಿಗೆ 'ಆರೆಂಜ್' ಹಾಗೂ ಅದೇ ದಿನ ಉಡುಪಿ, ಚಿಕ್ಕಮಗಳೂರು, ಹಾಸನ, ಕಲಬುರಗಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಇದೇ 7ರಂದು ಉಡುಪಿ, ದಕ್ಷಿಣ ಕನ್ನಡ, ಕೊಡಗಿಗೆ 'ಆರೆಂಜ್' ಹಾಗೂ ಬೆಳಗಾವಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕಲಬುರಗಿ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

24 ಗಂಟೆಯಲ್ಲಿ ಸುರಿದ ಮಳೆ ಪ್ರಮಾಣ (ಸೆಂ.ಮೀಗಳಲ್ಲಿ)

ವಡ್ಡರ್ಸೆ, ರೆಂಜಾಳ (ಉಡುಪಿ)	3.3	ಮಂಗಳೂರು ಮೂಡುಶೆಡ್ಡೆ (ದಕ್ಷಿಣ ಕನ್ನಡ)	10.3
ರೆಂಜಾಳ (ಉಡುಪಿ)	13.3	ಕದ್ರಿ, ಸುಳ್ಯ (ದಕ್ಷಿಣ ಕನ್ನಡ)	10.2
ಹಂದಾಡಿ (ಉಡುಪಿ)	12.6	ಬೊಳಿಯಾರು (ದಕ್ಷಿಣ ಕನ್ನಡ)	10.1
ವಾರಂಬಳ್ಳಿ, ಕೊಡಿಬೆಟ್ಟು, ತೆಂಕನಿಡಿಯೂರು (ಉಡುಪಿ)	2.3	ಕ್ಯಾಸಲ್‌ರಾಕ್, ಶಿರಾಲಿ, ಗೇರುಸೊಪ್ಪ (ಉತ್ತರಕನ್ನಡ)	10
ಉಪ್ಪೂರು, ಕಾಡೂರು (ಉಡುಪಿ)	12.2	ವಿಟ್ಲಪಡ್ನೂರು, ಪುದು (ದಕ್ಷಿಣ ಕನ್ನಡ)	9
ಕರ್ಜೆ (ಉಡುಪಿ)	12.1		
ಫಜೀರು (ದಕ್ಷಿಣ ಕನ್ನಡ)	11.7		
ಪಣಂಬೂರು (ದಕ್ಷಿಣ ಕನ್ನಡ)	11	ಕಾರ್ಕಳ (ಉಡುಪಿ)	9
ಕೋಟ (ಉಡುಪಿ)	11	ಭಾಗಮಂಡಲ (ಕೊಡಗು)	9
ಮಂಚಿ (ದಕ್ಷಿಣ ಕನ್ನಡ)	10.7	ನೀರುಮಾರ್ಗ (ದಕ್ಷಿಣ ಕನ್ನಡ)	8.7
ಇರಾ (ದಕ್ಷಿಣ ಕನ್ನಡ)	10.5	ಕೊಲ್ಲೂರು (ಉಡುಪಿ)	8

17, 18ರಂದು ವಿಪಕ್ಷಗಳ ಸಭೆ

ನವದೆಹಲಿ: ವಿರೋಧ ಪಕ್ಷಗಳ ಮುಂದಿನ ಸಭೆ ಬೆಂಗಳೂರಿನಲ್ಲಿ ಇದೇ 17 ಹಾಗೂ 18ರಂದು ನಡೆಯಲಿದೆ ಎಂದು ಕಾಂಗ್ರೆಸ್ ಸೋಮವಾರ ಪ್ರಕಟಿಸಿದೆ.

ಫ್ಯಾಸಿಸ್ಟ್ ಹಾಗೂ ಪ್ರಜಾಪ್ರಭುತ್ವ ವಿರೋಧಿ ಶಕ್ತಿಗಳನ್ನು ಸೋಲಿಸುವ ಸಂಕಲ್ಪದಲ್ಲಿ ನಾವು ಅಚಲರಾಗಿದ್ದೇವೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಟ್ವೀಟ್ ಮಾಡಿದ್ದಾರೆ.

ವಿರೋಧ ಪಕ್ಷಗಳ ಮೊದಲ ಸಭೆ ಬಿಹಾರದ ರಾಜಧಾನಿ ಪಟ್ನಾದಲ್ಲಿ ಜೂನ್ 23ರಂದು ನಡೆದಿತ್ತು. ಮುಂದಿನ ಸಭೆ ಇದೇ 12 ಹಾಗೂ 13ರಂದು ನಡೆಯಲಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಕಳೆದ ವಾರ ತಿಳಿಸಿದ್ದರು. ಈ ಸಮಯದಲ್ಲಿ ಬಿಹಾರ ಹಾಗೂ ಕರ್ನಾಟಕದ ವಿಧಾನಮಂಡಲದ ಅಧಿವೇಶನ ನಡೆಯಲಿದೆ. ಹೀಗಾಗಿ, ಸಭೆಯ ದಿನಾಂಕವನ್ನು ಮರು ನಿಗದಿ ಮಾಡಲಾಗಿದೆ.

ಬಿಟ್ ಕಾಯಿನ್: ಎಸ್‌ಐಟಿ ತನಿಖೆ

ಒಂದನೇ ಪುಟದಿಂದ

ಎಸ್‌ಐಟಿಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳುವ ಅಧಿಕಾರವನ್ನು ಮುಖ್ಯಸ್ಥರಿಗೆ ನೀಡಲಾಗಿದೆ.

'ಡಾರ್ಕ್‌ನೆಟ್, ಇತರೆ ಕಳ್ಳಮಾರ್ಗದಲ್ಲಿ ನಡೆದಿರುವ ಬಿಟ್ ಕಾಯಿನ್ ಪ್ರಕರಣದಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಜಾಲಗಳು ಭಾಗಿಯಾಗಿರುವ ಸಾಧ್ಯತೆ ಇದೆ. ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿಗಳು, ಸೈಬರ್ ವಿಷಯಗಳ ಪರಿಣಿತರು. ಹೀಗಾಗಿ, ಪ್ರಕರಣದ ಎಲ್ಲ ಮಾಹಿತಿಯನ್ನು ಪರಿಶೀಲಿಸಲು ಸಮಗ್ರ ತನಿಖೆ ಅಗತ್ಯವಿದೆ. ಇದಕ್ಕೆ ತಾಂತ್ರಿಕ ಪರಿಣಿತಿ ಇರುವ ವಿಶೇಷ ತನಿಖಾ ತಂಡದ ಅಗತ್ಯವಿದೆ. ಅದೇ ಕಾರಣಕ್ಕೆ ಸಿಐಡಿ ಅಡಿಯಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿರುವ ಬಿಟ್ ಕಾಯಿನ್ ಪ್ರಕರಣ ಹಾಗೂ ರಾಜ್ಯದ ಇತರೆ ಠಾಣೆಗಳಲ್ಲಿ ದಾಖಲಾಗಿರುವ ಇದೇ ಮಾದರಿ ಪ್ರಕರಣಗಳನ್ನೂ ಎಸ್‌ಐಟಿ ಪರಿಶೀಲಿಸಬೇಕು. ಸಿಐಡಿ ಡಿಜಿಪಿ ಅವರ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ತನಿಖಾ ತಂಡ ಕಾರ್ಯನಿರ್ವಹಿಸಬೇಕು' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಮೊದಲ ಸಭೆ: ಸರ್ಕಾರದಿಂದ ಆದೇಶ ಹೊರಬೀಳುತ್ತಿದ್ದಂತೆ ಸಿಐಡಿ ಡಿಜಿಪಿ ಎಂ.ಎ. ಸಲೀಂ ಹಾಗೂ ಎಸ್‌ಐಟಿ ಮುಖ್ಯಸ್ಥ ಮನೀಶ್ ಅವರು, ತಂಡದ ಸದಸ್ಯರ ಜೊತೆ ಸೋಮವಾರ ಮೊದಲ ಸಭೆ ನಡೆಸಿದರು.

ಪ್ರಕರಣದ ಪ್ರಾಥಮಿಕ ಸಂಗತಿಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಕಾಟನ್‌ಪೇಟೆ ಠಾಣೆ ಪ್ರಕರಣದ ಕಡತಗಳನ್ನು ಸುಪರ್ದಿಗೆ ಪಡೆಯುವ ಪ್ರಕ್ರಿಯೆ ಆರಂಭಿಸುವಂತೆ ಡಿಜಿಪಿ ಸೂಚಿಸಿದರು. ಜೊತೆಗೆ, ಪರಿಣಿತ ಸಿಬ್ಬಂದಿಯನ್ನು ತಂಡಕ್ಕೆ ಸೇರಿಸಿಕೊಂಡು ವೃತ್ತಿಪರತೆಯಿಂದ ತನಿಖೆ ನಡೆಸುವಂತೆ ನಿರ್ದೇಶನ ನೀಡಿದರು. ಇದರ ಬೆನ್ನಲ್ಲೇ, ಎಸ್‌ಐಟಿ ತಂಡ ಸಿಸಿಬಿ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದೆ.

ಸಿಐಡಿ ಎಸ್ಪಿಯಿಂದ ಬೆದರಿಕೆ: ಸಿಸಿಬಿ ತನಿಖಾಧಿಕಾರಿಯಿಂದ ಪತ್ರ

ಬಿಟ್ ಕಾಯಿನ್ ಪ್ರಕರಣದಲ್ಲಿ ಸಿಸಿಬಿ ಹಾಗೂ ಸಿಐಡಿ ನಡುವೆ ವೃತ್ತಿ ವೈಷಮ್ಯ ಬೆಳೆದಿರುವ ಆರೋಪಗಳು ಕೇಳಿಬಂದಿವೆ. ಇದರ ಬೆನ್ನಲ್ಲೇ, ಕಾಟನ್‌ಪೇಟೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖಾಧಿಕಾರಿ ಸಿಸಿಬಿಯ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ, ಸಿಐಡಿ ಡಿಜಿಪಿಗೆ ಬರೆದಿದ್ದ ಪತ್ರ ಎಲ್ಲೆಡೆ ಹರಿದಾಡುತ್ತಿದೆ.

'ಆರೋಪಿ ಶ್ರೀಕಿ ವಿರುದ್ಧ ಸಿಐಡಿಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಗೆ ಎಲ್ಲ ಸಹಕಾರ ನೀಡಲಾಗಿದೆ. ಈ ಸಂಬಂಧ ಪತ್ರ ವ್ಯವಹಾರವನ್ನೂ ನಡೆಸಲಾಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳಿವೆ. ಸಹಕಾರ ನೀಡಿಲ್ಲವೆಂದು ಹೇಳುತ್ತಿರುವ ಸಿಐಡಿ ಎಸ್ಪಿ ಶರತ್, 'ನಿಮ್ಮನ್ನು ನಾನು ನೋಡಿಕೊಳ್ಳುತ್ತೇನೆ. ನಿಮ್ಮನ್ನು ಸಿಐಡಿಗೆ ಕರೆಸಿಕೊಳ್ಳುತ್ತೇನೆ. ನೋಡ್ತಾ ಇರಿ' ಎಂದು ಬೆದರಿಕೆಯೊಡ್ಡಿದ್ದರು' ಎಂದು ಪತ್ರದಲ್ಲಿ ಬರೆಯಲಾಗಿದೆ.

'ಶ್ರೀಕಿ ಕಡೆಯಿಂದ ಜಪ್ತಿ ಮಾಡಿದ್ದ ಲ್ಯಾಪ್‌ಟಾಪ್ ಹಾಗೂ ಇತರೆ ದಾಖಲೆಗಳ ಮಿರರ್ ಇಮೇಜ್‌ಗಳನ್ನು ಸಿಐಡಿಗೆ ಒದಗಿಸಲಾಗಿದೆ' ಎಂದೂ ಪತ್ರದಲ್ಲಿ ತಿಳಿಸಲಾಗಿದೆ. ಇದೇ ಪತ್ರವನ್ನು ಉಲ್ಲೇಖಿಸಿ ಅಂದಿನ ಕಮಿಷನರ್ ಕಮಲ್ ಪಂತ್ ಸಹ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದರು.

ಲಂಚ: ತಹಶೀಲ್ದಾರ್‌ಗೆ ಜಾಮೀನು ನಿರಾಕರಣೆ

ಪಾಂಡವಪುರ: ಸ್ಥಳ ನಿಯೋಜನೆಗಾಗಿ ಗ್ರಾಮ ಲೆಕ್ಕಿಗ ಮರಿಸ್ವಾಮಿ ಅವರಿಂದ ₹40 ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದ ಇಲ್ಲಿನ ತಹಶೀಲ್ದಾರ್ ಕೆ.ಸಿ. ಸೌಮ್ಯ ಜಾಮೀನು ಅರ್ಜಿಯನ್ನು ಶ್ರೀರಂಗಪಟ್ಟಣದ 3ನೇ ಹೆಚ್ಚುವರಿ ನ್ಯಾಯಾಲಯ ತಿರಸ್ಕರಿಸಿದೆ.



ಕೆ.ಸಿ.ಸೌಮ್ಯ

ಲೋಕಾಯುಕ್ತ ಡಿವೈಎಸ್‌ಪಿ ಸುನೀಲ್ ಕುಮಾರ್ ಪ್ರಕರಣವನ್ನು ದಾಖಲಿಸಿದ್ದರು. ಬಳಿಕ ಸೌಮ್ಯ ಅವರನ್ನು ನ್ಯಾಯಾಂಗ ವಶಕ್ಕೆ ನೀಡಲಾಗಿತ್ತು. ಸೋಮವಾರ ವಿಚಾರಣೆ ನಡೆಸಿದ ನ್ಯಾಯಾಧೀಶ ಗೋಪಾಲಕೃಷ್ಣ ಅವರು ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದರು.

ಅಡೂರಿನ ಸರ್ಕಾರಿ ಶಾಲೆಯ ಕನ್ನಡ ಮಾಧ್ಯಮ ವಿಭಾಗಕ್ಕೆ ಮಲಯಾಳಿ ಶಿಕ್ಷಕಿ ನೇಮಕ ವಿವಾದ

ಮುಖ್ಯ ಶಿಕ್ಷಕರಿಗೆ ವರ್ಗಾವಣೆ 'ಶಿಕ್ಷೆ'

ಪ್ರಜಾವಾಣಿ ವಾರ್ತೆ

ಬದಿಯಡ್ಕ (ಕಾಸರಗೋಡು ಜಿಲ್ಲೆ): ಅಡೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕನ್ನಡ ವಿಭಾಗಕ್ಕೆ ವರ್ಗವಾಗಿರುವ ಕನ್ನಡ ಬಾರದ ಮಲಯಾಳಿ ಶಿಕ್ಷಕಿ ಬೇಡ, ಅವರ ಬದಲು ಕನ್ನಡ ಬರುವ ಶಿಕ್ಷಕರನ್ನು ನಿಯೋಜಿಸುವಂತೆ ಪಾಲಕರು ಪ್ರತಿಭಟನೆ ನಡೆಸುತ್ತಿದ್ದರೆ, ಇನ್ನೊಂದೆಡೆ ಈ ಶಾಲೆಯ ಮುಖ್ಯ ಶಿಕ್ಷಕರಿಗೇ ಕೇರಳ ಸರ್ಕಾರ 'ವರ್ಗಾವಣೆ ಶಿಕ್ಷೆ' ನೀಡಿದೆ.

ಈ ಶಿಕ್ಷಕಿಯನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ವಿಳಂಬ ಮಾಡಿದ ಹಾಗೂ ಪೋಷಕರು ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಈ ಶಿಕ್ಷಕಿಗೆ ಪೊಲೀಸ್ ಭದ್ರತೆಗೆ ವ್ಯವಸ್ಥೆ ಮಾಡದ ಆರೋಪದಲ್ಲಿ ಅಡೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರನ್ನು ವಯನಾಡ್‌ನ ಸರ್ಕಾರಿ ಪ್ರೌಢ ಶಾಲೆಗೆ ವರ್ಗ ಮಾಡಲಾಗಿದೆ. ಜೂನ್ 30ರಂದು ಅವರು ವಯನಾಡ್‌ನ ಶಾಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಆಗಿದ್ದೇನು?: ಅಡೂರಿನ ಈ ಶಾಲೆಯ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ಕಲಿಸಲು ಕನ್ನಡ ಬಾರದ ಶಿಕ್ಷಕಿಯನ್ನು ಕೇರಳ ಸರ್ಕಾರ ನೇಮಿಸಿದಾಗ ಕನ್ನಡಿಗ ವಿದ್ಯಾರ್ಥಿಗಳು ಜೂನ್ 3ರಂದು ಪ್ರತಿಭಟನೆ ನಡೆಸಿದ್ದರು. ಇದರಿಂದ ಕರ್ತವ್ಯಕ್ಕೆ ಹಾಜರಾಗದೇ ವಾಪಸಾಗಿದ್ದ ಶಿಕ್ಷಕಿ, ಪೊಲೀಸರನ್ನು ಕರೆದುಕೊಂಡು ಬಂದು ಕರ್ತವ್ಯಕ್ಕೆ ಹಾಜರಾಗಲು ಯತ್ನಿಸಿದ್ದರು. ಆದರೆ, ಮುಖ್ಯಶಿಕ್ಷಕರು ಅಸ್ವಸ್ಥರಾಗಿದ್ದ ಕಾರಣ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ನಂತರ, ಕನ್ನಡ ಬಾರದ ಶಿಕ್ಷಕಿಯ ನೇಮಕದಿಂದ ತಮ್ಮ ಮಕ್ಕಳ ಕಲಿಕೆಯ ಮೇಲೆ ಆಗುವ ದುಷ್ಪರಿಣಾಮದ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕನ್ನಡ ಶಾಲೆಯ ಪೋಷಕರು ಮನವರಿಕೆ ಮಾಡಿಕೊಟ್ಟಿದ್ದರು.

ಆದರೆ, ಆ ಶಿಕ್ಷಕಿ ಜೂನ್ 16ರಂದು ಶಾಲೆಗೆ ಹಾಜರಾಗಿ ಪಾಠ ಆರಂಭಿಸಿದರು. ಇದರಿಂದ ಕನ್ನಡ ಮಕ್ಕಳು ಮತ್ತು ಅವರ ಪೋಷಕರು ಪ್ರತಿಭಟನೆ ಆರಂಭಿಸಿದರು. ಮಲಯಾಳಿ ಶಿಕ್ಷಕಿ ತರಗತಿಗೆ ಬಂದಾಗ, ಅವರ ಪಾಠ ಅರ್ಥವಾಗುತ್ತಿಲ್ಲ ಎಂದು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಗತಿಯಿಂದ ಹೊರಹೋಗುತ್ತಿದ್ದಾರೆ. 15 ದಿನಗಳಿಂದ ನಿರಂತರವಾಗಿ ತರಗತಿ ಬಹಿಷ್ಕಾರ ನಡೆಯುತ್ತಿದೆ.

ಹೈಕೋರ್ಟ್‌ಗೆ ಮೊರೆ: ಇದೀಗ ಮಲಯಾಳಿ ಶಿಕ್ಷಕಿಯ ನೇಮಕಾತಿಯಿಂದಾಗಿ ಕನ್ನಡಿಗ ಮಕ್ಕಳು ಮಾತೃಭಾಷಾ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಅಡೂರಿನ ಕನ್ನಡಿಗ ಪೋಷಕರು ಕನ್ನಡ ಹೋರಾಟ ಕ್ರಿಯಾ ಸಮಿತಿಯನ್ನು ರಚಿಸಿಕೊಂಡು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ಕಾಸರಗೋಡು ಜಿಲ್ಲೆ ಅಡೂರು ಶಾಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಪಾಲಕರ ಹೋರಾಟ (ಸಂಗ್ರಹ ಚಿತ್ರ)

ಭಾಷಾ ಅಲ್ಪಸಂಖ್ಯಾತರ ಹಕ್ಕು ಸಂರಕ್ಷಣೆಗೆ ಕ್ರಮ

ಕಾಸರಗೋಡು: ಭಾಷಾ ಅಲ್ಪಸಂಖ್ಯಾತರ ಸಮಸ್ಯೆ ಪರಿಹಾರಕ್ಕೆ ಕ್ರಮಕೈಗೊಳ್ಳುವುದಾಗಿಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಭಾಷಾ ಅಲ್ಪಸಂಖ್ಯಾತರ ಸಮಿತಿ ಸಭೆಯಲ್ಲಿ ಸಂಸದ ರಾಜ್ ಮೋಹನ್ ಉಣ್ಣಿತ್ತಾನ್ ಮತ್ತು ಶಾಸಕರಾದ ಎನ್.ಎ.ನೆಲ್ಲಿಕುನ್ನು, ಎ.ಕೆ.ಎಂ.ಅಶ್ರಫ್ ಭರವಸೆ ನೀಡಿದರು.

ಸಂಸತ್ತು ಮತ್ತು ವಿಧಾನಸಭೆಯಲ್ಲಿ ಈ ವಿಚಾರದಲ್ಲಿ ಧ್ವನಿ ಎತ್ತುವುದಾಗಿ ಆಶ್ವಾಸನೆ ಕೊಟ್ಟರು.

ಭಾಷಾ ಅಲ್ಪಸಂಖ್ಯಾತರ ಹಕ್ಕು ಸಂರಕ್ಷಣೆಗಾಗಿ ವಿವಿಧ ಕ್ರಮಕೈಗೊಳ್ಳುವುದರ ಜೊತೆಗೆ ಈ ಬಗ್ಗೆ ರಾಜ್ಯ ಸರ್ಕಾರಕ್ಕೂ ಶಿಫಾರಸು ಮಾಡಲಾಗುವುದು. ಕಾಸರಗೋಡಿನಲ್ಲಿ ಶೀಘ್ರವೇ ಸರ್ಕಾರಿ ಕನ್ನಡ ಮುದ್ರಣಾಲಯ ಸ್ಥಾಪಿಸಲು, ಜಿಲ್ಲಾಧಿಕಾರಿ ಕಚೇರಿಯಲ್ಲಿ ಕನ್ನಡ ಭಾಷಾಂತರ ವಿಭಾಗ ತೆರೆಯಲು, ಜಿಲ್ಲಾ ವಾರ್ತಾ ಕಚೇರಿಯಲ್ಲಿ ಕನ್ನಡ ಭಾಷಾಂತರಕಾರ ಹುದ್ದೆಗಳ ನೇಮಕಾತಿಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಕೆ.ಇನ್ಬಶೇಖರನ್ ತಿಳಿಸಿದರು.

ಮಂಜೇಶ್ವರ, ಕಾಸರಗೋಡು ತಾಲ್ಲೂಕುಗಳಲ್ಲಿ ಸರ್ಕಾರಿ ಕಚೇರಿಗಳ ಫಲಕಗಳನ್ನು ಕನ್ನಡದಲ್ಲೂ ಅಳವಡಿಸುವುದು. ಕನ್ನಡ ಬಲ್ಲ ಕೆಳದರ್ಜೆ ಗುಮಾಸ್ತರನ್ನು ನೇಮಿಸುವ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ, ಎಲ್ಲ ಸರ್ಕಾರಿ ಆದೇಶಗಳು ಕನ್ನಡದಲ್ಲೂ ಸಿಗುವಂತೆ ಆಯಾ ಕಚೇರಿಗಳಿಗೆ ಆದೇಶ ನೀಡಿರುವುದಾಗಿ ಅವರು ತಿಳಿಸಿದರು.

ಜಿಲ್ಲೆಯ ಭಾಷಾ ಅಲ್ಪಸಂಖ್ಯಾತ ಪ್ರದೇಶಗಳಲ್ಲಿ ಸರ್ಕಾರಿ ಸಿಬ್ಬಂದಿಯಾಗಿ ಕನ್ನಡ, ತುಳು ಭಾಷೆಗಳಲ್ಲಿ ಪ್ರಾವೀಣ್ಯ ಹೊಂದಿದವರನ್ನೇ ನೇಮಿಸಬೇಕು ಎಂದು ಸಭೆಯಲ್ಲಿ ಸದಸ್ಯರು ಆಗ್ರಹಿಸಿದರು.

ಹಸಿದವರಿಗೆ ಅನ್ನ ನೀಡದ ಸರ್ಕಾರ ಅತ್ಯಂತ ಜನದ್ರೋಹಿ: ಜಂಟಿ ಅಧಿವೇಶನದಲ್ಲಿ ಥಾವರಚಂದ್ ಗೆಹಲೋತ್

ಭ್ರಷ್ಟಾಚಾರ ಸಾಂಸ್ಥೀಕರಣ: ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಭ್ರಷ್ಟಾಚಾರವು ಸಾಂಸ್ಥೀಕರಣಗೊಳ್ಳುವ ಮಟ್ಟಕ್ಕೆ ಬೆಳೆದುಬಿಟ್ಟಿದೆ. ಅದನ್ನು ನಿಗ್ರಹಿಸಲು ಸಹಕಾರ ನೀಡಿ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ವಿಧಾನಮಂಡಲದ ಸದಸ್ಯರಿಗೆ ಮನವಿ ಮಾಡಿದರು.

ವಿಧಾನಸಭೆಯ ಸಭಾಂಗಣದಲ್ಲಿ ಸೋಮವಾರ ನಡೆದ ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, 'ಸವಾಲನ್ನು ಎದುರಿಸಿ ಭ್ರಷ್ಟಾಚಾರವನ್ನು ಮೂಲೋಚ್ಛಾಟನೆ ಮಾಡಲು ನಾನು ನಿಮ್ಮೆಲ್ಲರ ಸಹಕಾರ ಕೋರುತ್ತೇನೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಆಡಳಿತಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳನ್ನು ಈ ಸರ್ಕಾರ ಕೈಗೊಳ್ಳಲಿದೆ' ಎಂದು ಹೇಳಿದರು.

ಸುಸ್ಥಿರವೂ, ಜನಸ್ನೇಹಿಯೂ ಆದ ಗ್ರಾಮ ಆಡಳಿತ ಮತ್ತು ನಗರಾಡಳಿತ ವ್ಯವಸ್ಥೆಯನ್ನು ರೂಪಿಸಲು ಪ್ರಾಮಾಣಿಕವಾದ ಎಲ್ಲ ಪ್ರಯತ್ನಗಳನ್ನು ಸರ್ಕಾರ ಮಾಡಲಿದೆ. ರಾಜ್ಯದ ಎಲ್ಲ ಗ್ರಾಮ ಮತ್ತು ನಗರಗಳನ್ನು ಜನರ ಸಹಭಾಗಿತ್ವದಲ್ಲಿ ಆರೋಗ್ಯಕರ ಅಭಿವೃದ್ಧಿಯತ್ತ ಮುನ್ನಡೆಸುವ ಗುರಿ ಅನುಷ್ಠಾನಕ್ಕೆ ತರಲಾಗುವುದು ಎಂದರು.

'ಅನ್ನ ನೀಡದಿದ್ದರೆ ಜನದ್ರೋಹ': 'ಹಸಿದವರಿಗೆ ಅನ್ನ ನೀಡದ ಸರ್ಕಾರ ಅತ್ಯಂತ ಜನದ್ರೋಹಿ ಎಂದು ಕರೆಸಿಕೊಳ್ಳುತ್ತದೆ. ಬಡವರು, ದುಡಿಯುವ ವರ್ಗದ ಜನರು, ವಲಸೆ ಕಾರ್ಮಿಕರು, ನಿರಾಶ್ರಿತರ ಹಸಿವು ತಣಿಸಲು ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಲಾಗಿತ್ತು. ಅವುಗಳನ್ನು ಮತ್ತಷ್ಟು ಸಮರ್ಥವಾಗಿ ನಡೆಸುತ್ತೇವೆ. ಅನ್ನ ಭಾಗ್ಯ ಮತ್ತು ಇಂದಿರಾ ಕ್ಯಾಂಟೀನ್‌ಗಳ ಮೂಲಕ ರಾಜ್ಯವನ್ನು ಹಸಿವಿನಿಂದ ಮುಕ್ತ ಮಾಡುತ್ತೇವೆ' ಎಂದು ರಾಜ್ಯಪಾಲರು ಹೇಳಿದರು.

ಆಹಾರ ಭದ್ರತಾ ಕಾಯ್ದೆ ಅಡಿಯಲ್ಲಿ ತಲಾ 5 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಅದರ ಜತೆಗೆ ತಮ್ಮ ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ ತಲಾ 5 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ವಿತರಿಸುವ ಯೋಜನೆಯನ್ನು ತಕ್ಷಣದಿಂದಲೇ ಪ್ರಾರಂಭಿಸುತ್ತಿದೆ. ಅಕ್ಕಿ ದೊರಕುವವರೆಗೂ ಪ್ರತಿ ಕೆ.ಜಿ.ಗೆ ₹ 34ರಂತೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪಾವತಿಸಲಾಗುವುದು ಎಂದರು.

ಹೊಸ ಶಾಸಕರಿಗೆ ಖಾದರ್ ಪಾಠ: 'ಹೊಸ ಶಾಸಕರು ಕಲಾಪಗಳಿಗೆ ತಪ್ಪದೇ ಹಾಜರಾಗಬೇಕು. ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಮತ್ತು ಚರ್ಚೆಗಳಲ್ಲಿ ತಪ್ಪದೇ ಪಾಲ್ಗೊಳ್ಳಬೇಕು. 15 ನಿಮಿಷ ಮುಂಚಿತವಾಗಿ ಕೋರಂ ಬೆಲ್ ಹಾಕುತ್ತೇವೆ. ತಕ್ಷಣವೇ ಬಂದು ಕೂರಬೇಕು' ಎಂದು ಸಭಾಧ್ಯಕ್ಷ ಖಾದರ್ ಹೇಳಿದರು.

ಶಾಸಕರನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ನಾಯಕತ್ವದ ತರಬೇತಿಗೆ ಕಳುಹಿಸಲಾಗುವುದು ಎಂದರು.

ಮಸೂದೆಗಳನ್ನು ಮಂಡಿಸಿದ ನಂತರ ಅದರ ಬಗ್ಗೆ ಮಾಹಿತಿ ನೀಡಲು ಪ್ರತ್ಯೇಕವಾಗಿ ಅಧಿಕಾರಿಯೊಬ್ಬರನ್ನು ನೇಮಿಸಲಾಗುವುದು. ಶಾಸಕರು ಅವರ ಬಳಿ ಹೋಗಿ ಮಸೂದೆ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಮಾರನೇ ದಿನ ಆ ಕುರಿತ ಚರ್ಚೆಯಲ್ಲಿ ಭಾಗವಹಿಸಬೇಕು ಎಂದರು.

ವಿಪಕ್ಷದ ನಾಯಕರ ಆಸನ ಖಾಲಿ: ಅಧಿಕೃತ ವಿರೋಧ ಪಕ್ಷ ಬಿಜೆಪಿ ಇನ್ನೂ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಯಾರನ್ನೂ ಆಯ್ಕೆ ಮಾಡದ ಕಾರಣ ವಿರೋಧ ಪಕ್ಷದ ನಾಯಕರು ಕೂರುವ ಆಸನ ಖಾಲಿಯೇ ಇತ್ತು. ಬಸವರಾಜ ಬೊಮ್ಮಾಯಿ ಅವರು ಅದರ ಪಕ್ಕದ ಆಸನದಲ್ಲಿ ಕುಳಿತಿದ್ದರು.

ಸಂವಿಧಾನ ಪ್ರಸ್ತಾವನೆ ಬೋಧನೆ

ಬೆಂಗಳೂರು: ವಿಧಾನಸಭೆಯಲ್ಲಿ ಸೋಮವಾರ ಸಂತಾಪಸೂಚಕ ಮೊದಲು ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಓದಿಸಲಾಯಿತು.


ರಾಜ್ಯದ ಎಲ್ಲ ಶಾಲಾ–ಕಾಲೇಜುಗಳಲ್ಲಿ ಸಂವಿಧಾನ ಪೀಠಿಕೆ ಓದುವುದನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸಲಾಗಿತ್ತು. ವಿಧಾನಸಭೆಯಲ್ಲಿ ಇದೇ ಮೊದಲ ಬಾರಿಗೆ ಎಲ್ಲ ಸದಸ್ಯರೂ ಎದ್ದು ನಿಂತು ಪ್ರಸ್ತಾವನೆಯನ್ನು ವಾಚಿಸಿದರು.

ಸಭೆಯಲ್ಲಿ ಸದಸ್ಯರಿಗೆ ವಿತರಿಸಿದ ಪ್ರಸ್ತಾವನೆ ಪ್ರತಿ ಮತ್ತು ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಬೋಧಿಸಿದ ಪ್ರತಿ ಪ್ರಣಾಳಿಕೆ ಬೇರೆಯಾಗಿದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ಷೇಪ ವ್ಯಕ್ತಪಡಿಸಿದರು.

ಸಂವಿಧಾನದ ಮೂಲ ಪೀಠಿಕೆಯಲ್ಲಿ ಏನಿದೆಯೋ ಅಷ್ಟು ಮಾತ್ರ ಓದಬೇಕು. ನೀವು ಇಲ್ಲಿ ಓದಿದ್ದೇ ಬೇರೆ. ನಮಗೆ ಕೊಟ್ಟಿದ್ದು ಬೇರೆ. ನಿಮಗೆ ತಿಳಿದ ಹಾಗೆ ವಿಸ್ತರಿಸಿಕೊಂಡು ಓದುವುದು ಸರಿಯಲ್ಲ. ಈ ರೀತಿ ಮಾಡುವುದು ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಅಪಚಾರ ಮಾಡಿದಂತೆ ಎಂದು ಯತ್ನಾಳ ಹೇಳಿದರು.

'ಇವತ್ತು ಮಾಡಿದ್ದು ಸರಿಯಲ್ಲ ನಾಳೆ ಮತ್ತೊಮ್ಮೆ ಸಂವಿಧಾನ ಪೀಠಿಕೆ ಹೇಗಿದೆಯೋ ಅದೇ ರೀತಿ ಓದಿಸಿ ಎಂದು ಸಭಾಧ್ಯಕ್ಷರನ್ನು ಆಗ್ರಹಿಸಿದರು. ಮುಂದಿನ ದಿನಗಳಲ್ಲಿ ಸಂಕ್ಷಿಪ್ತವಾಗಿ ಓದಿಸುತ್ತೇನೆ ಎಂದು ಖಾದರ್ ಭರವಸೆ ನೀಡಿದರು.

'ವರ್ಗಕ್ಕೆ ₹ 30 ಲಕ್ಷ ಲಂಚ'


ಕುಮಾರಸ್ವಾಮಿ

ರಾಜ್ಯ ಸರ್ಕಾರ 'ವರ್ಗಾವಣೆ ಸಿಂಡಿಕೇಟ್' ಮಾಡಿಕೊಂಡಿದ್ದು, ಮುಖ್ಯಮಂತ್ರಿ ಕಚೇರಿ ಭ್ರಷ್ಟಾಚಾರದ ಕೇಂದ್ರವಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.


ವಿಧಾನಸೌಧದಲ್ಲಿ ಸೋಮವಾರ ಸುದ್ದಿಗಾರರ ಜತೆ ಅವರು ಮಾತನಾಡಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಇಲಾಖಾವಾರು ವರ್ಗಾವಣೆ ದಂಧೆ ಆರಂಭಿಸಿದೆ. ಸಿದ್ದರಾಮಯ್ಯ ಸುತ್ತ ಸುಳಿದಾಡುವ ಶಾಸಕರ ಶಿಫಾರಸು ಪತ್ರ ತೆಗೆದುಕೊಂಡು ಹೋದರೂ, ಮುಖ್ಯಮಂತ್ರಿ ಕಚೇರಿಯಲ್ಲಿ ₹ 30 ಲಕ್ಷ ನಿರೀಕ್ಷಿಸುತ್ತಾರೆ. ಸಾರಿಗೆ, ಕಂದಾಯ, ವಾಣಿಜ್ಯ ತೆರಿಗೆ ಇಲಾಖೆಯ ವರ್ಗಾವಣೆಗೆ ಹೆಚ್ಚಿನ ಮೊತ್ತ ನಿಗದಿ ಮಾಡಲಾಗಿದೆ ಎಂದು ದೂರಿದರು.

ರಾಜ್ಯಪಾಲರ ಭಾಷಣದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ಪ್ರಸ್ತಾಪವಿದೆ. ವಾಸ್ತವದಲ್ಲಿ 'ಕಾಸಿಗಾಗಿ ಪೋಸ್ಟಿಂಗ್' ನಡೆಯುತ್ತಿದೆ. ಪ್ರತಿ ಹುದ್ದೆಗೂ ದರ ನಿಗದಿ ಮಾಡಲಾಗಿದೆ. ಹಣವಿಲ್ಲದೇ ಹುದ್ದೆ ಇಲ್ಲ ಎನ್ನುವುದು ಇವರ ನೀತಿ. ಆರೋಪಕ್ಕೆ ಸಾಕ್ಷಿ ಇದೆಯಾ ಎನ್ನುತ್ತಾರೆ. ದುಡ್ಡು ಕೊಟ್ಟವರು ಹುದ್ದೆ ಪಡೆದರೆ ಸಾಕು. ಸಾಕ್ಷಿ ಎಲ್ಲಿ ಕೊಡುತ್ತಾರೆ ಹೇಳಿ? ಈ ಸರ್ಕಾರ ಪರಿಸ್ಥಿತಿಯ ಲಾಭ ಪಡೆದು ಅಧಿಕಾರಿಗಳಿಂದ ಹಣ ಸುಲಿಯುತ್ತಿದೆ ಎಂದರು.

ಆರೋಪಕ್ಕೆ ದಾಖಲೆ ಕೇಳುವ ಕಾಂಗ್ರೆಸ್ಸಿಗರು ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ ಶೇ 40 ಲಂಚದ ಆರೋಪ ಮಾಡಿದ್ದಕ್ಕೆ ದಾಖಲೆ ಇಟ್ಟಿದ್ದಾರಾ? ಇಟ್ಟಿದ್ದರೆ ಇವರದೇ ಸರ್ಕಾರ ಬಂದಿದೆ. ಚುನಾವಣೆ ಸಮಯದಲ್ಲಿ ಹೇಳಿಕೊಂಡಂತೆ ದಾಖಲೆ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

'ದೊಡ್ಡ ಹುದ್ದೆಗಳಿಗೆ ಕೋಟಿ'


ಬೊಮ್ಮಾಯಿ

'ಮುಖ್ಯಮಂತ್ರಿ ಕಚೇರಿಯಲ್ಲಿ ಸಣ್ಣ ಹುದ್ದೆಗೆ ₹30 ಲಕ್ಷ ಕೇಳಿರಬಹುದು. ಆದರೆ, ದೊಡ್ಡ ಹುದ್ದೆಗಳಿಗೆ ಕೋಟ್ಯಂತರ ರೂಪಾಯಿ ಕೇಳುತ್ತಾರೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

'ಮುಖ್ಯಮಂತ್ರಿ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ' ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿರುವುದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ' ಎಂದರು. 'ವರ್ಗಾವಣೆ ರದ್ದು ಆಗುವುದು, ಮತ್ತೆ ಅಧಿಕಾರಿ ಬಂದು ವರ್ಗಾವಣೆ ಮಾಡಿಸಿಕೊಳ್ಳುವುದು ನಡೆಯುತ್ತಿದೆ. ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ಮಾತುಗಳೇ ಇದಕ್ಕೆ ಸ್ಪಷ್ಟವಾದ ಸಾಕ್ಷಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಾಮಾಣಿಕತೆ ಬಗ್ಗೆ ಮಾತನಾಡುತ್ತಾರೆ. ಆದರೆ, ಮುಖ್ಯಮಂತ್ರಿ ಕಚೇರಿ ನಡೆದುಕೊಳ್ಳುವ ರೀತಿ ನೋಡಿದರೆ ಭಯವಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

ಭೂ ಹಗರಣ: ತೇಜಸ್ವಿ, ಲಾಲು ವಿರುದ್ಧ ಸಿಬಿಐ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್, ಅವರ ತಂದೆ ಮಾಜಿ ರೈಲ್ವೆ ಸಚಿವ ಲಾಲು ಪ್ರಸಾದ್, ತಾಯಿ ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ವಿರುದ್ಧ ದಾಖಲಾಗಿರುವ ಉದ್ಯೋಗಕ್ಕಾಗಿ ಭೂ ಹಗರಣ (ಲ್ಯಾಂಡ್ ಫಾರ್ ಜಾಬ್) ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಎರಡನೇ ಚಾರ್ಜ್‌ಶೀಟ್ ಸಲ್ಲಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಈ ಚಾರ್ಜ್‌ಶೀಟ್‌ನಲ್ಲಿ ಒಟ್ಟು 14 ಜನರನ್ನು ಹೆಸರಿಸಲಾಗಿದೆ. ಮೊದಲ ಚಾರ್ಜ್‌ಶೀಟ್ ಸಲ್ಲಿಸಿದ ಬಳಿಕ ಸಂಗ್ರಹಿಸಲಾದ ದಾಖಲೆಗಳು ಮತ್ತು ಸಾಕ್ಷ್ಯಗಳನ್ನು ಆಧರಿಸಿ ಎರಡನೇ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಲಾಲು ಕುಟುಂಬದವರೇ ಅಲ್ಲದೆ, 'ಎಕೆ ಇನ್ಫೋಸಿಸ್ಟಮ್ಸ್' ಮತ್ತು ಕೆಲವು ಮಧ್ಯವರ್ತಿಗಳ ಹೆಸರನ್ನೂ ಉಲ್ಲೇಖಿಸಿರುವ ಸಿಬಿಐ, ಚಾರ್ಜ್‌ಶೀಟ್ ಅನ್ನು ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಲಾಲು ಪ್ರಸಾದ್ ಅವರು ರೈಲ್ವೆ ಸಚಿವರಾಗಿದ್ದ 2004–2009ರ ಅವಧಿಯಲ್ಲಿ, ರೈಲ್ವೆಯಲ್ಲಿ ಅವರಿಗೆ ನೆಚ್ಚಿನ ಅಭ್ಯರ್ಥಿಗಳ ನೇಮಕವಾಗಿದೆ. ಜಾಹೀರಾತು ನೀಡದೆ ಅಥವಾ ಸಾರ್ವಜನಿಕರ ಗಮನಕ್ಕೂ ತಾರದೆ ಈ ನೇಮಕಾತಿಗಳು ನಡೆದಿವೆ. ಈ ವೇಳೆ ನಿಯಮಾವಳಿ ಮತ್ತು ಕಾರ್ಯ ವಿಧಾನಗಳ ಉಲ್ಲಂಘನೆಯಾಗಿವೆ ಎಂದು ಸಿಬಿಐ ಆರೋಪಿಸಿದೆ.



ಈ ಅವಧಿಯಲ್ಲಿ ಮುಂಬೈ, ಜಬಲ್‌ಪುರ, ಕೋಲ್ಕತ್ತ, ಜೈಪುರ, ಹಾಜಿಪುರದ ರೈಲ್ವೆ ವಲಯಗಳಲ್ಲಿ ಪಟ್ನಾದವರೇ ಹೆಚ್ಚಾಗಿ ನೇಮಕವಾಗಿದ್ದಾರೆ ಎಂದು ಸಿಬಿಐ ದೂರಿದೆ.

ರಾಜಕೀಯ ಪಕ್ಷಗಳ ಹಣಕಾಸು ದಾಖಲೆಪತ್ರಕ್ಕೆ ಇ.ಸಿ ಪೋರ್ಟಲ್

ನವದೆಹಲಿ (ಪಿಟಿಐ): ನೋಂದಾಯಿತ ರಾಜಕೀಯ ಪಕ್ಷಗಳ ಹಣಕಾಸು ವ್ಯವಹಾರಗಳಲ್ಲಿ ಹೆಚ್ಚಿನ ಪಾರದರ್ಶಕತೆ ತರುವ ಪ್ರಯತ್ನವಾಗಿ ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ತಮ್ಮ ಹಣಕಾಸು ವ್ಯವಹಾರಗಳ ಲೆಕ್ಕಪತ್ರಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಸೋಮವಾರ ಪೋರ್ಟಲ್ ಪ್ರಾರಂಭಿಸಿದೆ.

ರಾಜಕೀಯ ಪಕ್ಷಗಳು ಸ್ವೀಕರಿಸುವ ದೇಣಿಗೆಯ ವಿವರಗಳು, ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳು, ಚುನಾವಣಾ ವೆಚ್ಚ ಸೇರಿದಂತೆ ತಮ್ಮ ಹಣಕಾಸು ವಹಿವಾಟುಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಲು ಈ ಪೋರ್ಟಲ್ ಅನುಕೂಲ ಕಲ್ಪಿಸಲಿದೆ.

ಆನ್‌ಲೈನ್ ವಿಧಾನದ ಮೂಲಕ ಹಣಕಾಸು ವರದಿ ಸಲ್ಲಿಸಲು ಇಚ್ಛಿಸದ ರಾಜಕೀಯ ಪಕ್ಷಗಳು ಅದಕ್ಕೆ ಕಾರಣಗಳನ್ನು ಬಹಿರಂಗಪಡಿಸಬೇಕು. ಸಿ.ಡಿ ಅಥವಾ ಪೆನ್‌ಡ್ರೈವ್ ಜೊತೆಗೆ ಹಾರ್ಡ್ ಕಾಪಿ ರೂಪದಲ್ಲಿ ವರದಿಗಳನ್ನು ಸಲ್ಲಿಸುವುದು ಮುಂದುವರಿಯಲಿದೆ. ಇದಕ್ಕೆ ಪ್ರತಿಯಾಗಿ ಆಯೋಗವು ಅಂತಹ ಎಲ್ಲ ವರದಿಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸುತ್ತದೆ. ಜೊತೆಗೆ ಯಾವುದೇ ಹಣಕಾಸಿನ ಹೇಳಿಕೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸದೆ, ಪಕ್ಷವು ಕಳುಹಿಸಿದ ಸಮರ್ಥನೆಯ ಪತ್ರವನ್ನು ಸಹ ಪ್ರಕಟಿಸಲಾಗುತ್ತದೆ ಎಂದು ಚುನಾವಣಾ ಆಯೋಗ ಹೇಳಿಕೆಯಲ್ಲಿ ತಿಳಿಸಿದೆ.

'ನುಡಿದಂತೆ ನಡೆಯಬೇಕೆಂಬ ಬಸವಣ್ಣನವರ ದೀಕ್ಷಾವಾಕ್ಯವೇ ಸರ್ಕಾರಕ್ಕೆ ದಾರಿದೀಪ'

ದೇಶಕ್ಕೆ ಕರ್ನಾಟಕದ ಹೊಸ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ ಕಲ್ಯಾಣ ಮತ್ತು ಆರ್ಥಿಕ ಸ್ಥಿತಿ ಎರಡನ್ನೂ ಸಮತೂಕದಲ್ಲಿ ನಿಭಾಯಿಸಿ ಕರ್ನಾಟಕದ್ದೇ ಆದ ಹೊಸ ಮಾದರಿಯೊಂದನ್ನು ತಮ್ಮ ಸರ್ಕಾರವು ದೇಶಕ್ಕೆ ಪರಿಚಯಿಸಲಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಭರವಸೆ ನೀಡಿದರು.

ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಸೋಮವಾರ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮುಂದಿನ ಐದು ವರ್ಷದಲ್ಲಿ ಏನೆಲ್ಲ ಮಾಡಲಿದೆ ಎಂಬ ದಿಕ್ಸೂಚಿಯೊಂದನ್ನು ತಮ್ಮ ಭಾಷಣದಲ್ಲಿ ಪ್ರಸ್ತಾವಿಸಿದರು.

'ಒಂದು ಕಾಲದಲ್ಲಿ ಇಡೀ ದೇಶದಲ್ಲಿ ಎಲೆ ಎತ್ತಿ ನಿಂತಿದ್ದ, ದೇಶದ ಬೊಕ್ಕಸಕ್ಕೆ ಅಪಾರ ಕೊಡುಗೆ ನೀಡುತ್ತಿರುವ ರಾಜ್ಯವು ಈಗ ಒಂದು ರೀತಿಯ ಸಂಕಟದ ಸ್ಥಿತಿಯಲ್ಲಿ ನಿಂತುಬಿಟ್ಟಿದೆ. ಈ ಆರ್ಥಿಕ ಸ್ಥಿತಿಯಿಂದ ರಾಜ್ಯವನ್ನು ಮೇಲೆತ್ತುವುದು ಸರ್ಕಾರದ ಆದ್ಯತೆಯಾಗಲಿದೆ' ಎಂದರು.

ಸಂತರು, ಸಮಾಜ ಸುಧಾರಕರು, ಸ್ವಾತಂತ್ರ್ಯ ಹೋರಾಟಗಾರರು, ಕವಿಗಳು ಮುಂತಾದವರಿಂದ ಪ್ರೇರಿತವಾಗಿ ಜನಕೇಂದ್ರಿತ ಆರ್ಥಿಕತೆ, ಜನಕೇಂದ್ರಿತ ಸಾಂಸ್ಕೃತಿಕತೆ ಮತ್ತು ಸಮಷ್ಟಿ ಕೇಂದ್ರಿತ ಅಭಿವೃದ್ಧಿ ಮಾದರಿಗಳನ್ನು ರೂಪಿಸಲು ಸರ್ಕಾರ ಉದ್ದೇಶಿಸಿದೆ. ಆ ಮೂಲಕ ದೇಶಕ್ಕೆ ಕರ್ನಾಟಕದ ಮಾದರಿಗಳನ್ನು ನಿರ್ಮಿಸಿ, ಸಾಬೀತುಮಾಡಲು ಅಗತ್ಯವಿರುವ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಬಡವರು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರ ಪರವಾಗಿ ಸರ್ಕಾರ ನಿಲ್ಲಲಿದೆ. ಎಲ್ಲ ಜಾತಿ, ಧರ್ಮ ಮತ್ತು ಪಂಗಡಗಳ ಜನರು ತಮ್ಮ ನ್ಯಾಯಯುತ ಪಾಲನ್ನು ಪಡೆಯುವಂತೆ ಮಾಡುವುದು ಈ ಸರ್ಕಾರದ ಗುರಿಯಾಗಿದೆ ಎಂದು ಹೇಳಿದರು.

ಜನಕೇಂದ್ರಿತ ಆರ್ಥಿಕತೆಗಾಗಿ ಕಡಿಮೆ ಜಾಗದಲ್ಲಿ ಹೆಚ್ಚು ಉದ್ಯೋಗಗಳನ್ನು ಸೃಜಿಸಬೇಕು. ಉತ್ಪಾದನೆ, ವಿತರಣೆ ಮತ್ತು ಮಾರುಕಟ್ಟೆ ವ್ಯವಸ್ಥೆಯಲ್ಲಿ ನೆರೆಯ ರಾಜ್ಯಗಳಷ್ಟೇ ಅಲ್ಲದೆ ದೂರದ ಚೀನಾ ದೇಶದ ಜತೆಗೂ ಸ್ಪರ್ಧೆಗೆ ಸಿದ್ಧವಾಗಬೇಕು. ಅದಕ್ಕೆ ಪೂರಕವಾದ ಯೋಜನೆ ರೂಪಿಸಲಾಗುವುದು ಎಂದರು.

ಜನಕೇಂದ್ರಿತ ಆರ್ಥಿಕತೆಗೆ ಪೂರಕವಾದ ಯೋಜನೆಗಳನ್ನು ರೂಪಿಸಿ, ಬೆಲೆ ಏರಿಕೆ ಮತ್ತು ಕಡಿಮೆ ಆದಾಯದಿಂದ ತತ್ತರಿಸಿರುವ ಜನರಿಗೆ ಘನತೆಯನ್ನು ತಂದುಕೊಡುವ ಪ್ರಯತ್ನ ಮಾಡಲಾಗುವುದು. ಆ ಮೂಲಕ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ತಗ್ಗಿಸುವ ಕೆಲಸ ಮಾಡಲಾಗುವುದು ಎಂದು ರಾಜ್ಯಪಾಲರು ತಿಳಿಸಿದರು.

ಕಳೆದ 34 ವರ್ಷಗಳಲ್ಲಿ ಯಾರಿಗೂ ನೀಡದಂತಹ ಬಹುಮತವನ್ನು ಜನರು ಈ ಸರ್ಕಾರಕ್ಕೆ ನೀಡಿದ್ದಾರೆ. ಜನರು ಮಹತ್ತರವಾದುದನ್ನು ನಿರೀಕ್ಷಿಸುತ್ತಿದ್ದಾರೆ ಎಂಬುದು ಈ ತೀರ್ಪಿನ ಹಿಂದಿದೆ. ಅವರ ನಿರೀಕ್ಷೆಯನ್ನು ಹುಸಿಗೊಳಿಸದಂತೆ ಬಸವಣ್ಣನವರ ದೀಕ್ಷಾ ವಾಕ್ಯವಾದ 'ನುಡಿದಂತೆ ನಡೆಯಬೇಕು' ಎಂಬುದನ್ನು ಈ ಸರ್ಕಾರ ಕರ್ತವ್ಯ ಗೀತೆಯಾಗಿ ಅಳವಡಿಸಿಕೊಂಡಿದೆ ಎಂದು ಹೇಳಿದರು.

ಶಿಕ್ಷಣದಲ್ಲಿ ಸುಧಾರಣೆ: ಶಿಕ್ಷಣದಲ್ಲಿ ಸಮಗ್ರ ಸುಧಾರಣೆ ತರುವ ಗುರಿಯನ್ನು ಸರ್ಕಾರ ಹೊಂದಿದೆ. ಕೈ, ಕಾಲುಗಳ ಮೂಲಕ ಕೌಶಲವನ್ನು, ಮಿದುಳು, ಹೃದಯದ ಮೂಲಕ ಬುದ್ಧಿ–ಕರುಣೆಗಳು ಸೇರಿದ ಸಮಗ್ರ ಶಿಕ್ಷಣವನ್ನು ರೂಪಿಸಲು ಬೇಕಾದ ವ್ಯವಸ್ಥೆಯನ್ನು ಮಾಡಲಾಗುವುದು. ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಾಮರಸ್ಯದ ವಾತಾವರಣದಲ್ಲಿ ಕಲಿಕೆಗೆ ಅವಕಾಶ ಕಲ್ಪಿಸಲಾಗುವುದು ಎಂದರು.

'ಗ್ಯಾರಂಟಿಗಳ ಮೂಲಕ ಕೈಲಾಸ': 'ಅನ್ನವನ್ನು ನೀಡುವುದು ನನ್ನಿಯನು ನುಡಿಯುವುದು ತನ್ನಂತೆ ಪರರ ಬಗೆದೊಡೆ ಕೈಲಾಸ ಭಿನ್ನಾಣವಕ್ಕು ಎಂದು ಕವಿ ಸರ್ವಜ್ಞ ಹೇಳಿದ್ದಾರೆ. ನಮ್ಮ ಸರ್ಕಾರವು ಗ್ಯಾರಂಟಿಗಳ ಮೂಲಕವೂ ಇದನ್ನೇ ಸಾಧಿಸಲು ಹೊರಟಿದೆ' ಎಂದು ಗೆಹಲೋತ್ ಹೇಳಿದರು.

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪ್ರಯತ್ನ ಮಾಡಲಾಗುವುದು. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಆರೋಗ್ಯ, ಶಿಕ್ಷಣ ಮತ್ತು ಅಗತ್ಯ ಸೇವೆಗಳನ್ನು ಒದಗಿಸಲು ವಿಶೇಷ ಯೋಜನೆ ಜಾರಿಗೊಳಿಸಲಾಗುವುದು ಎಂದು ಅವರು ಭರವಸೆ ನೀಡಿದರು.


ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣಮಾಡಲು ಆಗಮಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಬರ ಮಾಡಿಕೊಂಡ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಭಾಧ್ಯಕ್ಷ ಯು.ಟಿ ಖಾದರ್ ಫರೀದ್ ಅವರು ವಿಧಾನಸೌಧದೊಳಗೆ ಕರೆದೊಯ್ಯುತ್ತಿರುವುದು

'ದ್ವೇಷರಹಿತ, ಪ್ರೀತಿಯುಕ್ತ ಕರ್ನಾಟಕ'

'ಸಂಕುಚಿತವಾದಿ ಮನಸ್ಸುಗಳು ಗಂಡು– ಹೆಣ್ಣುಗಳ ಮಧ್ಯೆ ಹಾಗೂ ಸಮಾಜದ ವಿವಿಧ ಸಮುದಾಯಗಳ ಮಧ್ಯೆ ತಾರತಮ್ಯ, ಒಡಕು ಸೃಷ್ಟಿಸಿದ್ದವು. ದ್ವೇಷರಹಿತ, ಪ್ರೀತಿಯುಕ್ತ ಸಮಾಜ ನಿರ್ಮಾಣ ಮಾಡಲು ಈ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದು ರಾಜ್ಯಪಾಲ ಗೆಹಲೋತ್ ಹೇಳಿದರು.

'ಪರರ ವಿಚಾರ ಮತ್ತು ಪರ ಧರ್ಮವನ್ನು ಗೌರವಿಸುವುದೇ ಬಂಗಾರದ ಒಡವೆ ಇದ್ದಂತೆ ಕವಿ ಶ್ರೀವಿಜಯ ಕನ್ನಡದ ಮೊದಲ ಲಭ್ಯ ಕೃತಿ 'ಕವಿರಾಜಮಾರ್ಗ'ದಲ್ಲಿ ಹೇಳಿದ್ದರು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಕವಿ ಪಂಪ ಹೇಳಿದ್ದರು. ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ರಾಷ್ಟ್ರಕವಿ ಕುವೆಂಪು ಬಣ್ಣಿಸಿದ್ದರು. ರಾಜ್ಯದ ಜನರು ಅದಕ್ಕೆ ಪೂರಕವಾದ ಆಡಳಿತವನ್ನೇ ಈ ಸರ್ಕಾರದಿಂದ ಬಯಸಿದ್ದಾರೆ' ಎಂದರು.

'ನಾವು ಏನು ಮಾಡಬೇಕೆಂಬ ನೀಲಿನಕಾಶೆ ನಮ್ಮ ಮುಂದೆ ಇದೆ. ಇಚ್ಛಾಶಕ್ತಿಯೂ ಇದೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ನಿರ್ಮಿಸಲು ಬದ್ಧರಾಗಿದ್ದೇವೆ. ಯಾರನ್ನೂ ಹೊರಗೆ ಇಡದೆ ಎಲ್ಲರನ್ನೂ ಒಳಗೊಂಡು 'ಇವ ನಮ್ಮವ' ಎಂದು ಕೂಡಿ ಬಾಳುವ ನಮ್ಮ ಹಿರಿಯರ ಕನಸನ್ನು ನನಸು ಮಾಡಲು ಸರ್ಕಾರ ಬದ್ಧವಾಗಿದೆ' ಎಂದು ಹೇಳಿದರು.

ಹಿಂದಿಯಲ್ಲಿ ಅರ್ಧ ಗಂಟೆ ಭಾಷಣ

ಮಧ್ಯಾಹ್ನ 11.55ಕ್ಕೆ ವಿಧಾನಸಭೆಗೆ ಬಂದ ರಾಜ್ಯಪಾಲರನ್ನು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಸ್ವಾಗತಿಸಿದರು. 12 ಗಂಟೆಗೆ ಹಿಂದಿಯಲ್ಲಿ ತಮ್ಮ ಭಾಷಣ ಆರಂಭಿಸಿದ ರಾಜ್ಯಪಾಲರು 12.30ಕ್ಕೆ ಮುಗಿಸಿದರು.

ಜೀವಾಳವಿಲ್ಲದ ಸುಳ್ಳಿನ ಕಂತೆ: ಟೀಕೆ

'ರಾಜ್ಯಪಾಲರ ಭಾಷಣ ಸಪ್ಪೆಯಾಗಿದ್ದು, ಅದರಲ್ಲಿ ಜೀವಾಳವೇ ಇಲ್ಲ. ಬರೀ ಸುಳ್ಳಿನ ಕಂತೆ ಎಂಬುದು ಸಾಬೀತಾಗಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ಭಾಷಣದಲ್ಲಿ ಭರವಸೆ ಮೂಡಿಸುವ ಯಾವುದೇ ಅಂಶಗಳಿಲ್ಲ. ಹೊಸ ಸರ್ಕಾರ ಬಂದಾಗ, ಹೊಸ ಚೈತನ್ಯ, ಹೊಸ ದಿಕ್ಸೂಚಿ ಇರಬೇಕು. ಇಲ್ಲಿ ಅದನ್ನು ಕಾಣಲು ಸಾಧ್ಯವಿಲ್ಲ. ಸರ್ಕಾರ ಕವಲು ದಾರಿಯಲ್ಲಿದೆ' ಎಂದು ಅವರು ಪ್ರತಿಕ್ರಿಯಿಸಿದರು.

'ಪ್ರತಿಯೊಬ್ಬರಿಗೂ 10 ಕೆ.ಜಿ ಉಚಿತ ಅಕ್ಕಿ ಕೊಡುತ್ತೇವೆ ಎಂದು ಚುನಾವಣೆ ವೇಳೆ ಗ್ಯಾರಂಟಿ ಕಾರ್ಡ್‌ಗೆ ಸಹಿ ಮಾಡಿ ಜನರಿಗೆ ವಿತರಿಸಿದ್ದರು. ಕೇಂದ್ರ ಸರ್ಕಾರ 5 ಕೆ.ಜಿ ಉಚಿತ ಅಕ್ಕಿಯನ್ನು ಕೊಡುತ್ತಿದೆ ಎಂಬುದನ್ನು ಹೇಳಿಕೊಳ್ಳಲು ಇವರಿಗೆ ನಾಚಿಕೆ ಆಗುತ್ತಿದೆ. ಕೇಂದ್ರ ಸರ್ಕಾರ ಎಂದು ಹೇಳದೆ ಆಹಾರ ಭದ್ರತೆಯಡಿ ಕೊಡುತ್ತಿದ್ದೇವೆ ಎನ್ನುತ್ತಿದ್ದಾರೆ' ಎಂದು ಅವರು ವಾಗ್ದಾಳಿ ನಡೆಸಿದರು.

'ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್ ವಿದ್ಯುತ್ ಉಚಿತವಾಗಿ ಕೊಡುವುದಾಗಿ ಹೇಳಿದ್ದರು. ಆದರೆ, ಈಗ ರಾಜ್ಯಪಾಲರ ಮೂಲಕ ಸುಳ್ಳು ಹೇಳಿಸಿದ್ದಾರೆ. ಜನರನ್ನು ದಾರಿ ತಪ್ಪಿಸುವ ಕೆಲಸ ಮಾಡಿದ್ದಾರೆ. ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಸರ್ಕಾರವಿದು. ಅರ್ಥವಿಲ್ಲದೇ ಸುಮ್ಮನೇ ಬೊಗಳೆ ಭಾಷಣ ಮಾಡಿಸಿದ್ದಾರೆ. ಈ ಸರ್ಕಾರಕ್ಕೆ ಅಭಿವೃದ್ಧಿಯ ಚಿಂತನೆ ಇಲ್ಲ' ಎಂದು ದೂರಿದರು.

ರಾಜ್ಯದ ಆರ್ಥಿಕ ಸ್ಥಿತಿ ಐಸಿಯುನತ್ತ: ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆರ್ಥಿಕ ವ್ಯವಸ್ಥೆ ಶೀಘ್ರ ಐಸಿಯು (ತೀವ್ರ ನಿಗಾಘಟಕ) ಸೇರಲಿದೆ ಎನ್ನುವುದು ರಾಜ್ಯಪಾಲರ ಭಾಷಣ ಕೇಳಿದ ನಂತರ ಮನವರಿಕೆಯಾಗಿದೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ವಿಧಾನಸೌಧದಲ್ಲಿ ಸೋಮವಾರ ರಾಜ್ಯಪಾಲರ ಭಾಷಣ ಕುರಿತು ಅವರು ಪ್ರತಿಕ್ರಿಯಿಸಿದರು.

ರಾಜ್ಯದ ಬರಲಿರುವ ದಿನಗಳ ಸ್ಥಿತಿಯನ್ನು ರಾಜ್ಯಪಾಲರ ಭಾಷಣ ಅನಾವರಣಗೊಳಿಸಿದೆ. ಹಿಂದಿನ ಸಮ್ಮಿಶ್ರ ಸರ್ಕಾರಗಳಂತೆ ಈ ಸರ್ಕಾರವೂ ಐಸಿಯು, ವೆಂಟಿಲೇಟರ್ ಮೇಲೆ ನಡೆಯುವ ಸನ್ನಿವೇಶ ನಿರ್ಮಾಣ ಆಗಬಹುದು. ಆ ಸಮಯ ಹತ್ತಿರದಲ್ಲೇ ಇದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯ ಸತ್ಯ-ಸಂಗತಿಗಳನ್ನು ಸರ್ಕಾರ ಮರೆಮಾಚಿದೆ ಎಂದು ದೂರಿದರು.

ಚುನಾವಣೆ ವೇಳೆ ಕಾಂಗ್ರೆಸ್ ಜನರಿಗೆ ಕೊಟ್ಟ ಆಶ್ವಾಸನೆಯಂತೆ ನಡೆದುಕೊಳ್ಳುತ್ತಿಲ್ಲ. ಭಾಷಣದಲ್ಲಿ ಭವಿಷ್ಯದ ಕರ್ನಾಟಕದ ಒಳನೋಟ ಇಲ್ಲ. ಮುಂದಿನ ಐದು ವರ್ಷಗಳಿಗೆ ಏನು ಕೊಡಬೇಕು ಎನ್ನುವ ದೂರದೃಷ್ಟಿಯೂ ಇಲ್ಲ. ಭಾಷಣದಲ್ಲಿ ಬೆಳಕು ಕಾಣುತ್ತಿಲ್ಲ. ಬರೀ ಕತ್ತಲು ತುಂಬಿದೆ. 135 ಸ್ಥಾನ ಗೆದ್ದ ಸರ್ಕಾರದ ಭಾಷಣ ಎನಿಸುವುದೇ ಇಲ್ಲ. ರೈತರಿಂದ ಖರೀದಿಸುವ ಹಾಲಿನ ದರ ಕಡಿತ ಮಾಡಿದ್ದು ಏಕೆ ಎನ್ನುವುದಕ್ಕೂ ಉತ್ತರ ಸಿಗಲಿಲ್ಲ ಎಂದರು.

ಜಾಮೀನು ನಕಾರ

ನವದೆಹಲಿ(ಪಿಟಿಐ): ದೆಹಲಿ ಸರ್ಕಾರದ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಆಮ್ ಆದ್ಮಿ ಪಕ್ಷದ ನಾಯಕ ಮನೀಷ್ ಸಿಸೋಡಿಯಾ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಜಾಮೀನು ನಿರಾಕರಿಸಿದೆ.

ಸಿಸೋಡಿಯಾ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರು, ಈ ಹಿಂದೆ ವಿಶೇಷ ನ್ಯಾಯಾಲಯವು ಜಾಮೀನು ಅರ್ಜಿ ವಜಾಗೊಳಿಸಿರುವುದನ್ನು ಪರಿಗಣಿಸಲಾಗಿದೆ.

ಶಾಸಕ ಟಿ.ಬಿ. ಜಯಚಂದ್ರ ದೆಹಲಿ ವಿಶೇಷ ಪ್ರತಿನಿಧಿ

ಪ್ರಜಾವಾಣಿ ವಾರ್ತೆ


ಜಯಚಂದ್ರ


ಸಲೀಂ ಅಹಮದ್


ಅಶೋಕ ಪಟ್ಟಣ


ಭೋಸರಾಜು

ಬೆಂಗಳೂರು: ಕಾಂಗ್ರೆಸ್ ಶಾಸಕ ಟಿ.ಬಿ. ಜಯಚಂದ್ರ ಅವರನ್ನು ನವದೆಹಲಿಯಲ್ಲಿನ ಕರ್ನಾಟಕ ರಾಜ್ಯದ ವಿಶೇಷ ಪ್ರತಿನಿಧಿಯನ್ನಾಗಿ ನೇಮಿಸಲಾಗಿದೆ.

ಇವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ಎಲ್ಲ ಸೌಲಭ್ಯಗಳನ್ನು ನೀಡಿ ಆದೇಶ ಹೊರಡಿಸಲಾಗಿದೆ.

ಎನ್.ಭೋಸರಾಜು ಸಭಾನಾಯಕ: ವಿಧಾನ ಪರಿಷತ್‌ನ ಸಭಾನಾಯಕರನ್ನಾಗಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಸಚಿವ ಎನ್.ಭೋಸರಾಜು ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಚಿವ ಸ್ಥಾನ ಗಿಟ್ಟಿಸಿದ ಭೋಸರಾಜು ಅವರನ್ನು ಆ ಬಳಿಕ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಲಾಯಿತು. ವಿಧಾನಪರಿಷತ್ ಸಭಾನಾಯಕರನ್ನಾಗಿ ಬೇರೆ ಹಿರಿಯ ಸಚಿವರನ್ನು ಆಯ್ಕೆ ಮಾಡಬಹುದು ಎಂಬ ಚರ್ಚೆ ಕಾಂಗ್ರೆಸ್ ಪಕ್ಷದಲ್ಲಿ ನಡೆದಿತ್ತು. ಇದೀಗ ಆ ಜವಾಬ್ದಾರಿಯೂ ಬೋಸರಾಜ ಅವರ ಹೆಗಲೇರಿದೆ.

ವಿಧಾನಪರಿಷತ್ತಿನ ಮುಖ್ಯ ಸಚೇತಕರನ್ನಾಗಿ ಸಲೀಂ ಅಹಮದ್ ಮತ್ತು ವಿಧಾನಸಭೆ ಮುಖ್ಯ ಸಚೇತಕರನ್ನಾಗಿ ರಾಮದುರ್ಗ ಶಾಸಕ ಅಶೋಕ ಎಂ.ಪಟ್ಟಣ ಅವರನ್ನು ನೇಮಕ ಮಾಡಲಾಗಿದೆ. ಸಲೀಂ ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಎಚ್‌ಡಿಕೆ ಜೆಡಿಎಲ್‌ಪಿ ನಾಯಕ


ಶಾರದಾ ಪೂರ್ಯಾನಾಯ್ಕ

ಬೆಂಗಳೂರು: ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಎಚ್.ಡಿ.ಕುಮಾರಸ್ವಾಮಿ ಮತ್ತು ಉಪನಾಯಕರನ್ನಾಗಿ ಶಾರದಾ ಪೂರ್ಯಾನಾಯ್ಕ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಸಂಬಂಧ ಜೆಡಿಎಸ್‌ನ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ಪತ್ರ ಬರೆದಿದ್ದಾರೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ವಿಧಾನಸಭೆಯಲ್ಲಿ ಪ್ರಕಟಿಸಿದರು.

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಿಂದ 2013ರಲ್ಲಿ ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾಗಿದ್ದ ಅವರು, 2018ರಲ್ಲಿ ಸೋಲು ಕಂಡಿದ್ದರು. 2023ರಲ್ಲಿ ಮತ್ತೆ ಆಯ್ಕೆಯಾಗಿರುವ ಶಾರದಾ ಪೂರ್ಯಾನಾಯ್ಕ ಅವರು, ಬಂಜಾರ ಸಮುದಾಯದವರು. ಶಿವಮೊಗ್ಗ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿದ್ದರು.

ಹಾಲಿನ ರುಚಿ ನೋಡದ ಮಕ್ಕಳು, ಬಿಸಿಯೂಟ ತಯಾರಿಕೆಗೆ ಇಲ್ಲದ ಪ್ರತ್ಯೇಕ ಕೋಣೆ

ತಾಂಡಾ ಶಾಲೆಯ ಮಕ್ಕಳಿಗಿಲ್ಲ ಬಿಸಿಯೂಟ

• ಸಿದ್ದರಾಜ ಎಸ್. ಮಲ್ಕಂಡಿ

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ನಾಲವಾರ ಸಮೀಪದ ಸಕ್ಕುನಾಯಕ ತಾಂಡಾದ ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸರ್ಕಾರದ ಬಿಸಿಯೂಟ ಯೋಜನೆಯಿಂದ ವಂಚಿತರಾಗಿದ್ದಾರೆ.


ಶಾಲೆಗಳು ಆರಂಭಗೊಂಡು 35 ದಿನಗಳಾದರೂ ಇಲ್ಲಿನ 20ಕ್ಕೂ ಅಧಿಕ ವಿದ್ಯಾರ್ಥಿಗಳು ಬಿಸಿಯೂಟ ಹಾಗೂ ಹಾಲಿನಿಂದ ವಂಚಿತರಾಗಿದ್ದಾರೆ. ಅಡುಗೆ ಕೋಣೆ ಕೊರತೆ ನೆಪದಿಂದ ಬಿಸಿಯೂಟ ತಯಾರಿಸುವುದನ್ನು ಕೈಬಿಡಲಾಗಿದೆ. ಮಧ್ಯಾಹ್ನದ ಊಟಕ್ಕೆ ಮಕ್ಕಳು ಮನೆಗಳನ್ನೇ ಆಶ್ರಯಿಸುವಂತಾಗಿದೆ.

ಕಡಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಕ್ಕುನಾಯಕ ತಾಂಡಾದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 1ರಿಂದ 5ನೇ ತರಗತಿವರೆಗೆ ಇದೆ. ಸಕ್ಕುನಾಯಕ ಹಾಗೂ ರೇವುನಾಯಕ ತಾಂಡಾದ 20ಕ್ಕೂ ಅಧಿಕ ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ.

ಬಹುತೇಕ ವಲಸೆ ಕುಟುಂಬಗಳಿಗೆ ಸೇರಿದ ಈ ಬಡ ವಿದ್ಯಾರ್ಥಿಗಳಿಗೆ ಬಿಸಿಯೂಟ ಹಾಗೂ ಹಾಲು ದೊರಕುತ್ತಿಲ್ಲ. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸೋನಿಬಾಯಿ ಪವಾರ ಅವರೂ ಇದೇ ತಾಂಡಾದವರಾಗಿದ್ದಾರೆ. ಶಾಲೆಗೆ ಕೋಣೆ, ವಿದ್ಯುತ್, ಕುಡಿಯುವ ನೀರಿನ ಕೊರತೆಗಳಿವೆ.

ಕೋಣೆ ಕೊರತೆ, ಬಿಸಿಯೂಟ ಸ್ಥಗಿತ: ಶಾಲೆಯಲ್ಲಿ ಒಂದೇ ಕೋಣೆಯಿದ್ದು, ಪ್ರತ್ಯೇಕವಾಗಿ ಬಿಸಿಯೂಟದ ಕೋಣೆ ಇಲ್ಲದಿರುವುದರಿಂದ ಒಂದೇ ಕೊಠಡಿಯಲ್ಲಿ 5 ತರಗತಿಗಳು ಹಾಗೂ ಬಿಸಿಯೂಟವನ್ನು ತಯಾರಿಸಲಾಗುತ್ತಿತ್ತು. ಮುಖ್ಯಶಿಕ್ಷಕರು ಕೋಣೆಗಳ ಕೊರತೆ ಹಾಗೂ ಕುಡಿಯುವ ನೀರಿನ ಸಮಸ್ಯೆಯ ಕಾರಣ ಬಿಸಿಯೂಟ ಸ್ಥಗಿತಗೊಳಿಸಿದ್ದಾರೆ. ಇಲ್ಲಿನ ವಲಸೆ ಕಾರ್ಮಿಕರ ಮಕ್ಕಳಿಗೆ ಅಜ್ಜಿಯಂದಿರೇ ಆಸರೆಯಾಗಿದ್ದಾರೆ.

ಶಾಲೆಯ ಕೊಠಡಿಯ ಪಕ್ಕವೇ ಎರಡು ಕೋಣೆಗಳ ನಿರ್ಮಾಣ ಕೆಲಸ ಅರ್ಧಕ್ಕೆ ನಿಂತಿದೆ. ಶಾಲೆಗಾಗಿ ಕೊರೆಸಿರುವ ಕೊಳವೆಬಾವಿ ಕೆಟ್ಟು ನಿಂತಿದ್ದು, ಬಿಸಿಯೂಟ ತಯಾರಿಕೆಗೆ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಕೊಳವೆಬಾವಿ ದುರಸ್ತಿಗೆ ಸ್ಥಳೀಯ ಕಡಬೂರು ಗ್ರಾಮ ಪಂಚಾಯಿತಿ ಆಡಳಿತ ನಿರ್ಲಕ್ಷ್ಯ ವಹಿಸಿರುವುದರಿಂದ ಮಕ್ಕಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಬಿಸಿಯೂಟ ಹಾಗೂ ಹಾಲನ್ನು ಪೂರೈಕೆ ಮಾಡಬೇಕು ಎಂದು ಸ್ಥಳೀಯ ಮುಖಂಡ ಸುಮೀತ ರಾಠೋಡ ಒತ್ತಾಯಿಸಿದ್ದಾರೆ.


ವಾಡಿ ಸಮೀಪದ ಸಕ್ಕುನಾಯಕ ತಾಂಡಾದ ಮಕ್ಕಳಿಗೆ ಬಿಸಿಯೂಟ ದೊರೆಯುತ್ತಿಲ್ಲ

ಎಸ್‌ಡಿಎಂಸಿ ಸದಸ್ಯರ ಸಭೆಯ ನಿರ್ಣಯದಂತೆ ಬಿಸಿಯೂಟ ನಿಲ್ಲಿಸಲಾಗಿದೆ. ಬಿಸಿಯೂಟ ಬದಲು ಪಡಿತರ ಧಾನ್ಯ ನೀಡುವಂತೆ ಇಲಾಖೆಗೆ ಮನವಿ ಮಾಡಿಕೊಳ್ಳಲಾಗಿದೆ

ಗುರುನಾಥ ಚಿತ್ತಗಿ, ಮುಖ್ಯಶಿಕ್ಷಕ

ಬಿಸಿಯೂಟ ಯೋಜನೆಯನ್ನು ಯಾವುದೇ ಕಾರಣಕ್ಕೂ ಸ್ಥಗಿತಗೊಳಿಸುವಂತಿಲ್ಲ. ಶಾಲೆಗೆ ಭೇಟಿ ನೀಡಿ ಬಿಸಿಯೂಟ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು

ಪ್ರಕಾಶ ನಾಯ್ಕೋಡಿ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ಚಿತ್ತಾಪುರ

ದಿಲ್ಲಿಯತ್ತ ಬಿಜೆಪಿ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕನ ಆಯ್ಕೆ ಸಂಬಂಧ ಮಂಗಳವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯುವುದೇ ಅಥವಾ ಪಕ್ಷದ ವರಿಷ್ಠರೇ ನೇರವಾಗಿ ಹೆಸರನ್ನು ಪ್ರಕಟಿಸುವರೇ ಎಂಬುದು ಸೋಮವಾರ ರಾತ್ರಿವರೆಗೂ ಖಾತರಿಯಾಗದ ಕಾರಣ ಬಿಜೆಪಿ ನಾಯಕರು ಗೊಂದಲಕ್ಕೀಡಾಗಿದ್ದಾರೆ.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಪ್ರಕಾರ ವಿರೋಧ ಪಕ್ಷದ ನಾಯಕನ ಆಯ್ಕೆ ಸಂಬಂಧ ಇಬ್ಬರು ವೀಕ್ಷಕರು ಬರಬೇಕಿತ್ತು. ಆದರೆ, ಅವರಿಬ್ಬರು ಬರುವುದು ಸೋಮವಾರ ರಾತ್ರಿಯವರೆಗೆ ಖಚಿತವಾಗಿರಲಿಲ್ಲ. ಮಂಗಳವಾರ ಸಭೆ ನಡೆಯುತ್ತದೆಯೋ ಇಲ್ಲವೋ ಎಂಬ ಮಾಹಿತಿ ನಾಯಕರಿಗೆ ಇಲ್ಲ. ವಿಧಾನಸಭೆ ಅಧಿವೇಶನದ ಎರಡನೇ ದಿನವಾದ ಮಂಗಳವಾರವೂ ವಿರೋಧಪಕ್ಷ ನಾಯಕನ ಸ್ಥಾನಕ್ಕೆ ಆಯ್ಕೆ ಮಾಡದಿದ್ದರೆ, ಕಲಾಪದ ವೇಳೆ ಮುಜುಗರಕ್ಕೆ ಒಳಗಾಗಬೇಕಾಗುತ್ತದೆ ಎಂಬ ಆತಂಕ ಶಾಸಕರದ್ದಾಗಿದೆ.

ಒಂದು ಮೂಲದ ಪ್ರಕಾರ, 'ವೀಕ್ಷಕರಾದ ವಿನೋದ್ ತಾವಡೆ ಮತ್ತು ಮನ್‌ಸುಖ್ ಮಾಂಡವೀಯ ಅವರು ಸೋಮವಾರ ತಡ ರಾತ್ರಿ ಅಥವಾ ಮಂಗಳವಾರ ಬೆಳಿಗ್ಗೆ ಬರಬಹುದು. ಶಾಸಕರಿಂದ ಮಾಹಿತಿ ಪಡೆದು ಅಂತಿಮವಾಗಿ ಹೆಸರು ಪ್ರಕಟಿಸಬಹುದು. ಇಲ್ಲವಾದಲ್ಲಿ ನೇರವಾಗಿ ಹೆಸರನ್ನು ದೆಹಲಿಯಿಂದಲೇ ಪ್ರಕಟಿಸಬಹುದು'.

ಶಾಸಕರಾದ ಬಸವರಾಜ ಬೊಮ್ಮಾಯಿ, ಬಸನಗೌಡ ಪಾಟೀಲ ಯತ್ನಾಳ ಮತ್ತು ಸುನಿಲ್ ಕುಮಾರ್ ಅವರ ಹೆಸರು ಸ್ಥಾನಕ್ಕೆ ಕೇಳಿ ಬಂದಿದೆ. ಜಾತಿ ಲೆಕ್ಕಾಚಾರದಲ್ಲಿ ಲಿಂಗಾಯತ ಸಮುದಾಯದವರಿಗೆ ನೀಡುವುದಾದರೆ ಬೊಮ್ಮಾಯಿಗೆ ಅವಕಾಶ ಸಿಗಬಹುದು. ಒಬಿಸಿ ಪರಿಗಣಿಸಿದರೆ ಸುನಿಲ್‌ಕುಮಾರ್ ಅವರನ್ನು ಆಯ್ಕೆ ಮಾಡಬಹುದು ಎಂಬ ಚರ್ಚೆ ಬಿಜೆಪಿಯಲ್ಲಿ ನಡೆದಿದೆ.

ಈ ಮಧ್ಯೆ ಅರವಿಂದ ಬೆಲ್ಲದ ಅವರ ಹೆಸರೂ ಚಾಲ್ತಿಗೆ ಬಂದಿದ್ದು, ಸೋಮವಾರ ಸಂಜೆ ಅವರು ಯಡಿಯೂರಪ್ಪ ಅವರ ಜತೆ ಮಾತುಕತೆ ನಡೆಸಿದ್ದಾರೆ.

ಬಸವರಾಜ ಬೊಮ್ಮಾಯಿ ಅವರನ್ನು ವಿಪಕ್ಷ ನಾಯಕರನ್ನಾಗಿ ಆಯ್ಕೆ ಮಾಡುವ ಬಗ್ಗೆ ಮೂಲ ಬಿಜೆಪಿ ಶಾಸಕರು ಒಲವು ಹೊಂದಿಲ್ಲ. ಬೊಮ್ಮಾಯಿ ಅವರು ಸಿದ್ದರಾಮಯ್ಯ ಜತೆ ಉತ್ತಮ ಒಡನಾಟ ಹೊಂದಿರುವುದರಿಂದ ಪಕ್ಷಕ್ಕೆ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಅವರ ಬದಲಿಗೆ ಯತ್ನಾಳ್ ಅವರಿಗೆ ಅವಕಾಶ ನೀಡಬೇಕು, ರಾಜೀ ಮಾಡಿಕೊಳ್ಳದೇ ನೇರ ಹೋರಾಟಕ್ಕೆ ಇಳಿಯುತ್ತಾರೆ. ಈ ಸಂದರ್ಭದಲ್ಲಿ ಇಂತಹವರೇ ಸೂಕ್ತ ಎಂದು ವರಿಷ್ಠರ ಬಳಿ ತಮ್ಮ ಅಭಿಪ್ರಾಯ ಹೇಳಿದ್ದಾರೆ.

ಆದರೆ, ಯತ್ನಾಳ ಅವರನ್ನು ವಿರೋಧಪಕ್ಷದ ನಾಯಕರನ್ನಾಗಿ ಮಾಡಬಾರದು ಎಂದು ಬಿ.ಎಸ್. ಯಡಿಯೂರಪ್ಪ ಪರ ಇರುವ ಶಾಸಕರು ಒತ್ತಡ ಹೇರುತ್ತಿದ್ದಾರೆ. ಹಿಂದೆ ಯಡಿಯೂರಪ್ಪ ಅವರಿಗೆ ಹಲವು ಬಾರಿ ಮುಜುಗರ ಮಾಡಿದ್ದಾರೆ. ಆದ್ದರಿಂದ ಅವರಿಗೆ ಯಾವುದೇ ಕಾರಣಕ್ಕೂ ಕೊಡಬಾರದೆಂದೂ ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಯಾರನ್ನಾದರೂ ಮಾಡಿ. ಆದರೆ, ಶಾಸಕರ ಸಭೆ ಮಾಡಿ ಅಭಿಪ್ರಾಯ ಪಡೆದು ಬಳಿಕ ಹೆಸರು ಪ್ರಕಟಿಸುವುದು ಸೂಕ್ತ ಎಂದು ಬಸವರಾಜ ಬೊಮ್ಮಾಯಿ ಪಕ್ಷದ ವರಿಷ್ಠರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಜೀವನ: ಸುಖ ದುಃಖಗಳ ಯಾನ

> ಸುಖವು ಒಟ್ಟೊಟ್ಟಿಗೇ ಒದಗಿ ಬಂದಂತೆ, ದುಃಖವೂ ಒಟ್ಟೊಟ್ಟಿಗೇ ದಾಳಿಮಾಡಲಾರಂಭಿಸುತ್ತದೆ. 'ಸುಖದಂತೆ ದುಃಖವೂ ಅಶಾಶ್ವತ' ಎಂಬ ಸತ್ಯವನ್ನು ಅನುಭವದಲ್ಲಿ ಕಂಡುಕೊಂಡಿರುತ್ತೇವೆ. ಆದರೆ, ದುಃಖದ ತೀವ್ರತೆಯಲ್ಲಿ ಮರೆತುಬಿಡುತ್ತೇವೆ ಅಷ್ಟೇ.

ರಮ್ಯಾ ಶ್ರೀಹರಿ



ಕೆಲವೊಂದು ದಿನಗಳು ಹೀಗಿರುತ್ತವೆ: ರಾತ್ರಿಯೆಲ್ಲಾ ಮಳೆಯಾಗಿ ಬೆಳಿಗ್ಗೆ ಆಗಸ ಶುಭ್ರವಾಗಿ, ಎಳೆ ಬಿಸಿಲು ಮೂಡಿ, ಹೂವುಗಳು ಅರಳಿ ಕಂಗೊಳಿಸುತ್ತಾ ಮನವನ್ನು ಮುದಗೊಳಿಸುತ್ತದೆ. ನಮ್ಮ ಕನಸುಗಳೆಲ್ಲಾ ನಿಜವಾಗಿ ಬದುಕಿಗೆ ಹೊಸತನ ಮೂಡಬಹುದೆಂಬ ಆಸೆ ಚಿಗುರುತ್ತದೆ. ಕನ್ನಡಿಯಲ್ಲಿನ ನಮ್ಮ ಪ್ರತಿಬಿಂಬ ನಮಗೇ ಇಷ್ಟವಾಗತೊಡಗುತ್ತದೆ. ನಮ್ಮೆಲ್ಲಾ ಕೆಲಸಗಳು ಸುಗಮವಾಗಿ ಸಾಗಿ ತೃಪ್ತಿಯನ್ನು, ಜೊತೆಗಿರುವವರ ಮೆಚ್ಚುಗೆಯನ್ನು ತಂದುಕೊಡುತ್ತದೆ. ನಾವು ಕಷ್ಟವೆಂದು ಬಗೆದ ಕಗ್ಗಂಟೊಂದು ಸರಾಗವಾಗಿ ಬಿಡಿಸಿಕೊಂಡು ಸುಖಾಂತ್ಯ ಸಿಕ್ಕಿದಂತೆನಿಸಿ, ಬದುಕಿನ ಎಲ್ಲ ಅಭೀಪ್ಸೆಗಳೂ ಬಾಂಧವ್ಯಗಳೂ ಯೋಜನೆಗಳೂ - ಎಲ್ಲವೂ ಅದರದರ ಸ್ಥಾನವನ್ನು ಕಂಡುಕೊಂಡ ಸಮಾಧಾನ ದೊರಕಿ, ದಿನದ ಕೊನೆಗೆ ಹಾಡುತ್ತಾ, ನಲಿಯುತ್ತಾ, ಹಾರಾಡುತ್ತಾ ಇರುವಂತೆನಿಸುತ್ತದೆ.


'ಬದುಕು ಎಲ್ಲವನ್ನೂ ಅದರದೇ ರೀತಿಯಲ್ಲಿ ನೇರಗೊಳಿಸುತ್ತದೆ. ನಾವೇ ಅನವಶ್ಯಕವಾಗಿ ಎಲ್ಲವನ್ನೂ ಸಂಕೀರ್ಣಗೊಳಿಸಿಕೊಳ್ಳುತ್ತಿದ್ದೇವೆ' ಎನ್ನುವುದು ಅರ್ಥವಾಗಿ ನಿರಾಳವಾಗುತ್ತೇವೆ. ಮರುಕ್ಷಣವೇ ಬದುಕಿನ ಇನ್ನೊಂದು ಸತ್ಯ ಕಣ್ಮುಂದೆ ಕುಣಿಯುತ್ತದೆ. ನಮ್ಮ ಬದುಕಿನ ಸುಖ-ದುಃಖದ ಈ ವಿನ್ಯಾಸ ಪೂರ್ವಯೋಜಿತವೇನೋ, ಯಾವಾಗ ಸುಖವನ್ನು, ಯಾವಾಗ ದುಃಖವನ್ನು ಪಡೆಯುತ್ತೇವೆ ಎನ್ನುವುದೆಲ್ಲಾ ನಮ್ಮ ಅರಿವಿನ ಮಿತಿಯನ್ನು ಮೀರಿದ್ದೇನೋ ಎನ್ನುವ ಲಹರಿ ಮನದಲ್ಲೇಳುತ್ತಾ ನಮ್ಮ ಜೀವನವನ್ನು ಮತ್ತಷ್ಟು ನಿಗೂಢಗೊಳಿಸುತ್ತದೆ.

ಸುಖವು ಒಟ್ಟೊಟ್ಟಿಗೇ ಒದಗಿಬಂದಂತೆ, ದುಃಖವೂ ಒಟ್ಟೊಟ್ಟಿಗೇ ದಾಳಿಮಾಡಲಾರಂಭಿಸುತ್ತದೆ. ಒಮ್ಮೊಮ್ಮೆ ಕಾರಣವೇನೆಂದೇ ತಿಳಿಯದೆ ಕಪ್ಪುಮೋಡವೊಂದು ಮನದ ಬೆಳಕನ್ನು ಮಂದಗೊಳಿಸುತ್ತದೆ. ಕೆಲವೊಮ್ಮೆ ಬದುಕೇ ಕಷ್ಟದ ಹಾದಿಗೆ ನೂಕಿದರೆ, ಮತ್ತೆ ಕೆಲವೊಮ್ಮೆ ನಮ್ಮ ಮನಸ್ಸೇ ನಮ್ಮ ಶತ್ರುವಾಗಿ ದುಃಖದ ದುರ್ಗಮ ಕಾಡಿಗೆ ಸೆಳೆದುತರುತ್ತದೆ. ಸುಮ್ಮನೆ ಸಂತೋಷವಾಗೇ ಇರುತ್ತೇವೆ. ಅದೆಲ್ಲಿಂದಲೋ ಅತೃಪ್ತಿಯ ಸಂಕಟವೊಂದು ನಮ್ಮನ್ನೇ ಹುಡುಕಿಕೊಂಡು ಬರುತ್ತದೆ. ಹಳೆಯ ಸೋಲೊಂದು ಕಹಿನೆನಪಾಗಿ ಬಾಗಿಲ ಬಳಿ ಬಂದು ನಿಲ್ಲುತ್ತದೆ. ಎಂದೋ ಆದ ಗಾಯ ಇಂದೇಕೋ ಮತ್ತೆ ಹಸಿಯಾಗುತ್ತದೆ. ಮುಗಿದೇ ಹೋದ ಅಧ್ಯಾಯದ ಹೊಸ ವಿವರವೊಂದು ಕಾಣಿಸಿ ಕಸಿವಿಸಿಯಾಗುತ್ತದೆ. ಮಾಡಿ ಮುಗಿಸಲೇಬೇಕೆಂಬ ಸಂಕಲ್ಪದೊಂದಿಗೆ ಶುರುವಾದ ಕೆಲಸಕ್ಕೆ ಹಲವು ಅಡೆತಡೆಗಳು ಎದುರಾಗಿ ಹತಾಶೆಗೊಳಿಸುತ್ತದೆ. ಯಾರೋ ನಮ್ಮ ಮನಸ್ಸನ್ನು ತಿಳಿದೋ ತಿಳಿಯದೆಯೋ ರಾಡಿಗೊಳಿಸುತ್ತಾರೆ.

ಇಂತಹ ನಿರಾಸೆ, ನೋವು ತುಂಬಿದ ಕಣ್ಣುಗಳಿಂದ ಬದುಕನ್ನು ನೋಡಿದಾಗ ಎಲ್ಲರ ಜೀವನದಲ್ಲೂ ಇರಬಹುದಾದ, ಆಗಬಹುದಾದ ಸಾಮಾನ್ಯ ದುಃಖ-ಕಷ್ಟಗಳೂ ನಮ್ಮನ್ನು ನಾಶಗೊಳಿಸಲು ನಮಗೆಂದೇ ವಿಶೇಷವಾಗಿ ಒದಗಿಬಂದಂತಹ ದುರ್ವಿಧಿಯಾಗಿ ಕಾಣಿಸಲಾರಂಭಿಸುತ್ತದೆ. ಆಗ ಬದುಕಿನ ಸಾಮಾನ್ಯ ಸತ್ಯವೊಂದನ್ನು ನಾವು ನೆನಪಿಟ್ಟುಕೊಳ್ಳುತ್ತೇವೆಯೋ ಇಲ್ಲವೋ ಎನ್ನುವುದರ ಮೇಲೆಯೇ ಮುಂದಿನ ಹಾದಿ ನಿರ್ಧಾರವಾಗುತ್ತದೆ. 'ಸುಖದಂತೆ ದುಃಖವೂ ಅಶಾಶ್ವತ' ಎಂಬ ಸತ್ಯವನ್ನು ನಾವೆಲ್ಲರೂ ಅನುಭವದಲ್ಲಿ ಕಂಡುಕೊಂಡಿರುತ್ತೇವೆ. ಆದರೆ ದುಃಖದ ತೀವ್ರತೆಯಲ್ಲಿ ಅದನ್ನು ಮರೆತುಬಿಡುತ್ತೇವೆ ಅಷ್ಟೇ.

ಸರಿಯಾಗಿ ನೋಡಿದರೆ ಸುಖಕ್ಕೂ ದುಃಖಕ್ಕೂ ಅಂತಹ ವ್ಯತ್ಯಾಸವೇನಿಲ್ಲ. ಸುಖದಂತೆ ದುಃಖವೂ ಕ್ಷಣಿಕ. ಸುಖ-ದುಃಖಗಳೆರಡೂ ಆಗುವ ಘಟನೆಗಿಂತ ನೋಡುವ ನೋಟಕ್ಕೆ ಸಂಬಂಧಪಟ್ಟಿದ್ದು. ಎರಡೂ ಹಾಗೇ -ಅಭ್ಯಾಸವಾಗಿಬಿಟ್ಟಾಗ ಅದರ ತೀವ್ರತೆಯನ್ನು ಕಳೆದುಕೊಳ್ಳುವಂಥದ್ದು. ಸಾಪೇಕ್ಷವಾದವು ಮತ್ತು ವೈಯಕ್ತಿಕವಾಗಿ ತೆಗೆದುಕೊಂಡಾಗ ನಮ್ಮನ್ನು ಭ್ರಮೆಗೆ ತಳ್ಳುವಂಥದ್ದು. ಸುಖ ದುಃಖಗಳನ್ನು ಮೀರಿದ ಒಂದು ಸ್ಥಿತಿಯಿದೆ; ಅದೇ 'ಶಾಂತಿ', 'ಸಮಚಿತ್ತ', 'ನಿರ್ಲಿಪ್ತತೆ' ಎಂಬ ಸ್ಥಿತಿ. ದುಃಖ ಹೇಗೋ ಸುಖವೂ ಹಾಗೇ ನಮ್ಮ ಶಾಂತಿಯನ್ನು, ಸಮಚಿತ್ತವನ್ನು ಕೆಡಿಸುತ್ತದೆ. ಸುಖವನ್ನು ನಾವೆಷ್ಟು ತೀವ್ರವಾಗಿ ಅನುಭವಿಸಬಲ್ಲೆವೋ ಅಷ್ಟೇ ತೀವ್ರತೆಯಿಂದ ದುಃಖವನ್ನನುಭವಿಸಬಲ್ಲೆವು. ಸುಖ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ಮಾತಿನ ಅರ್ಥವೂ ಇದೇ; ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸಲು ಸಾಧ್ಯವಾಗಿಸುವಂತಹ 'ಶಾಂತಿ' ಎಂಬ ನೆಲದಲ್ಲಿ ನೆಲೆಯಾಗಿರುವುದು ಎಂದು.

ನಾವ್ಯಾಕೆ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸಬೇಕು? ದುಃಖವಾದಾಗ ಸಂಕಟಪಡುವುದು, ಸುಖದಲ್ಲಿ ನಲಿಯುವುದು ಸಹಜ; ಆ ಕ್ಷಣಕ್ಕೆ ಹಾಗೆ ಅದನ್ನು ಸಂಪೂರ್ಣವಾಗಿ ಅನುಭವಿಸುವುದೂ ಮುಖ್ಯವೇ ಹೌದು. ಆದರೆ ಅದನ್ನೇ ಮತ್ತೆ ಮತ್ತೆ ಅನುಭವಿಸುತ್ತಾ ಅದರಲ್ಲೇ ಕಳೆದುಹೋದಾಗ ಬದುಕಿನ ಚಲನಶೀಲತೆಗೆ ವಿಮುಖರಾಗುತ್ತೇವೆ. ಬದುಕನ್ನು ಸಮಗ್ರವಾಗಿ ನೋಡುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತೇವೆ. ಅತಿ ಸಂತೋಷವಾದಾಗಲೂ ಅತಿ ದುಃಖವಾದಾಗ ಆಗುವಂತೆಯೇ ಹಸಿವು, ನಿದ್ರೆಗಳು ದೂರವಾಗುತ್ತವೆ; ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದಿಲ್ಲ; ಅತಿ ಚಟುವಟಿಕೆಯಿಂದ ಅಥವಾ ನಿಷ್ಕ್ರಿಯತೆಯಿಂದ ಬಾಧಿತರಾಗುತ್ತೇವೆ. ಸುಖದಲ್ಲೂ ದುಃಖದಲ್ಲೂ ನಮ್ಮ ವಿವೇಚನಾಶಕ್ತಿ ಕುಂದುತ್ತದೆ; ಎರಡೂ ಸ್ಥಿತಿಗಳಲ್ಲೂ ನಮ್ಮ ಬದುಕನ್ನು ನಾವೊಂದು ಸೀಮಿತ ದೃಷ್ಟಿಕೋನದಿಂದ ನೋಡಿಕೊಳ್ಳುತ್ತಾ ಬದುಕಿನ ಸತ್ಯಕ್ಕೆ ಕುರುಡರಾಗಿರುತ್ತೇವೆ. ಸುಖವಾಗಲಿ, ದುಃಖವಾಗಲಿ ಬೀಸುವ ಗಾಳಿಯಿದ್ದಂತೆ; ಅದು ಬೀಸಿದಾಗೆಲ್ಲ ಬೀಸಿದ ದಿಕ್ಕಿಗೆ ಹೋಗಿ ಬೀಳುವ ತರಗೆಲೆಯಂತೆ ಆಗದೆ ಬದುಕು ಪ್ರತಿಕ್ಷಣವೂ ಮರಕ್ಕಂಟಿದ ಹಸಿರಾದ ಚಿಗುರೆಲೆಯಂತೆ ಹೊಳೆಯುತ್ತಿರಬೇಕಾದರೆ ಸುಖದಂತೆ ದುಃಖವೂ ಅಶಾಶ್ವತ, ಅನಿಶ್ಚಿತ, ಶಾಂತಿಗೆ ಮಾರಕ ಎನ್ನುವುದನ್ನು ಮರೆಯಬಾರದು.



ಸಮಚಿತ್ತ ಕಾಯ್ದುಕೊಳ್ಳಲು ಕೆಲವು ಸಲಹೆಗಳು

ಸಮಚಿತ್ತದಲ್ಲಿರುವ ನಿಟ್ಟಿನಲ್ಲಿ ಈ ಕೆಲವು ಅಂಶಗಳು ಸಹಾಯಕವಾಗಬಹುದು:

1. ದುಃಖವಾದಾಗ ಅಥವಾ ಸುಖದಲ್ಲಿರುವಾಗ ಅದು ಆ ಕ್ಷಣ ನಮ್ಮ ಅನುಭವಕ್ಕೆ ಬರುತ್ತಿರುವ ಸ್ಥಿತಿಯಷ್ಟೇ, ಅದು ತಾತ್ಕಾಲಿಕ, ಅದು ನಮ್ಮ ಒಟ್ಟು ಬದುಕಿನ ಸತ್ಯವನ್ನು ಪ್ರತಿಬಿಂಬಿಸುತ್ತಿಲ್ಲ ಎನ್ನುವುದನ್ನು ಗಮನಿಸಿದಾಗ ಮಾನಸಿಕ ಏರುಪೇರುಗಳಿಂದ ಸ್ವಲ್ಪ ದೂರದಲ್ಲಿ ನಿಂತು ನಮ್ಮನ್ನು ನಾವು ಕಂಡುಕೊಳ್ಳಬಹುದು.
2. ಕಾಲ ಹೇಗೆ ನಿರಂತರವಾಗಿ ಬದಲಾಗುತ್ತಿರುತ್ತದೆ; ಅದನ್ನು ನಾವು ನಮ್ಮ ಜೀವನದಲ್ಲಿ ಹೇಗೆ ಕಂಡು ಅರಿತಿದ್ದೇವೆ ಎನ್ನುವುದನ್ನು ಮನಸ್ಸಿಗೆ ತಂದುಕೊಂಡಾಗ ಸುಖ ದುಃಖಗಳಿಂದಾಗುವ ಉದ್ವೇಗವನ್ನು ಸಹಿಸಿಕೊಳ್ಳುವ ತಾಳ್ಮೆಯುಂಟಾಗುತ್ತದೆ.
3. ಸುಖ-ದುಃಖಗಳು ಸಹಜವಾದ ಬದುಕಿಗೆ ನಾವು ಕೊಟ್ಟುಕೊಳ್ಳುವ ವ್ಯಾಖ್ಯಾನಗಳು. ವ್ಯಾಖ್ಯಾನ ಬದಲಾದಾಗ ಬದುಕೂ ಬದಲಾಗುತ್ತದೆ. ಕಷ್ಟವೊಂದು ನಮ್ಮನ್ನು ನಾಶಮಾಡಲೆಂದೇ ಬಂದಿದೆ ಎಂದು ನೋಡಿದಾಗ ಎದೆಗುಂದುತ್ತೇವೆ; ಕಷ್ಟವು ನಮ್ಮ ಬದುಕಿಗೆ ಹೊಸ ತಿರುವು ನೀಡುತ್ತಿದೆ ಎನ್ನುವುದನ್ನು ಅರಿತಾಗ ಬದುಕಿನ ಬಗ್ಗೆ ಪ್ರೀತಿ ಹೆಚ್ಚಾಗುತ್ತದೆ.
4. ಶಾಂತಿ, ನೆಮ್ಮದಿಯೆಂದರೆ ಸದಾ ಸುಖದಲ್ಲಿ ನಲಿಯುವುದೂ ಅಲ್ಲ; ಸದಾ ಕಷ್ಟಗಳನ್ನೆದುರಿಸುತ್ತಾ ಪಾಠ ಕಲಿಯುತ್ತಿರುವುದೂ ಅಲ್ಲ. ಏರಿಳಿತಗಳು ಎಲ್ಲರ ಜೀವನದಲ್ಲೂ ಯಾವಾಗಲೂ ಇದ್ದೇ ಇರುತ್ತವೆ ಎಂದರಿತು ಅದರಿಂದ ವಿಚಲಿತರಾಗದಿರುವುದು. ಮಾನಸಿಕ ಸ್ಥೈರ್ಯ ಕೊಡುವಂತಹ ಧ್ಯಾನ, ಕಲೆ, ಪ್ರಕೃತಿಯೊಂದಿಗಿನ ಒಡನಾಟ ಮುಂತಾದ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು.

ಸ್ವಚ್ಛತೆಯಿದ್ದರೆ ಡೆಂಗಿ ದೂರ!

ಡಾ. ಕಿರಣ್ ವಿ. ಎಸ್.

ಕೋವಿಡ್ 19ರ ಹಾವಳಿಗೂ ಮುನ್ನ ಜನರ ಮನಸ್ಸಿನಲ್ಲಿ ಭೀತಿ ಹುಟ್ಟಿಸಿದ್ದ ವೈರಸ್ ಡೆಂಗಿ ಜ್ವರದ್ದು. ಕೋವಿಡ್ ಭೀತಿ ಕಳೆದರೂ ಡೆಂಗಿ ಜ್ವರದ ಅಪಾಯ ಮುಂದುವರಿದಿದೆ.


ಸೊಳ್ಳೆಗಳ ಮೂಲಕ ಹರಡುವ ಡೆಂಗಿ ವೈರಸ್ ತೀವ್ರ ಜ್ವರ, ಕೀಲುಗಳ ನೋವು, ಚರ್ಮ ಕೆಂಪಾಗುವುದು ಮೊದಲಾದ ಲಕ್ಷಣಗಳನ್ನು ತೋರುತ್ತದೆ. ಡೆಂಗಿ ಜ್ವರದ ಬಹುತೇಕ ರೋಗಿಗಳು ಪ್ರಾಥಮಿಕ ಚಿಕಿತ್ಸೆ, ಸಾಕಷ್ಟು ದ್ರವಾಹಾರ, ಮತ್ತು ವಿಶ್ರಾಂತಿಯಿಂದ ಚೇತರಿಸಿಕೊಳ್ಳುತ್ತಾರೆ. ಆದರೆ, ಕೆಲವರಲ್ಲಿ ಕಾಯಿಲೆ ತೀವ್ರ ಸ್ವರೂಪ ಪಡೆದು ರಕ್ತಸ್ರಾವ ಮತ್ತು ಅಂಗವೈಫಲ್ಯದಂಥ ಮಾರಣಾಂತಿಕ ಸಮಸ್ಯೆಗಳು ಉಂಟಾಗಬಹುದು. ಸಮಸ್ಯೆ ಯಾರಲ್ಲಿ ತೀವ್ರ ಸ್ವರೂಪ ಪಡೆಯುತ್ತದೆ ಎಂದು ಮೊದಲೇ ತಿಳಿಯಲು ಸಾಧ್ಯವಿಲ್ಲದ ಕಾರಣ ಪ್ರತಿಯೊಬ್ಬ ರೋಗಿಯ ವಿಷಯದಲ್ಲೂ ಎಚ್ಚರಿಕೆ ವಹಿಸುವುದು ಅಗತ್ಯ.

ಡೆಂಗಿ ಜ್ವರದ ರೋಗಿಗಳಾಗಲಿ, ಅವರ ಕುಟುಂಬಸ್ಥರಾಗಲಿ ಜತೆಗೆ ಚಿಕಿತ್ಸೆ ನೀಡುವ ವೈದ್ಯರಿಗೂ ಇಂತಹ ಎಚ್ಚರದ ಆವಶ್ಯಕತೆ ತಪ್ಪಿದ್ದಲ್ಲ. ಮಕ್ಕಳ ವಿಷಯದಲ್ಲಂತೂ ಪೋಷಕರು ಮೈಯೆಲ್ಲ ಕಣ್ಣಾಗಿರಬೇಕು. ಬ್ಯಾಕ್ಟೀರಿಯಾಗಳಿಂದ ಬರುವ ರೋಗಗಳನ್ನು ಆ್ಯಂಟಿಬಯಾಟಿಕ್ ಔಷಧಗಳ ಬಳಕೆಯಿಂದ ತಕ್ಕ ಮಟ್ಟಿಗೆ ನಿಗ್ರಹಿಸಬಹುದು. ಆದರೆ ಆ್ಯಂಟಿಬಯಾಟಿಕ್ ಔಷಧಗಳು ವೈರಸ್ ಕಾಯಿಲೆಗಳ ಮೇಲೆ ಕೆಲಸ ಮಾಡುವುದಿಲ್ಲ. ಬಹುತೇಕ ವೈರಸ್ ಕಾಯಿಲೆಗಳಿಗೆ ಪಕ್ಕಾ ಚಿಕಿತ್ಸೆ ಇಲ್ಲ. ಹೀಗಾಗಿ, ನಮ್ಮ ಶರೀರದ ರಕ್ಷಕ ವ್ಯವಸ್ಥೆಯೇ ವೈರಸ್ ವಿರುದ್ಧ ಹೊಡೆದಾಡಬೇಕು; ಈ ಕಾದಾಟಕ್ಕೆ ಪೂರಕವಾಗುವಂತೆ ನಾವು ಶರೀರವನ್ನು ನೋಡಿಕೊಳ್ಳಬೇಕು.

ವೈರಸ್ ಕಾಯಿಲೆಗಳು ಬಂದ ನಂತರ ಅವಕ್ಕೆ ಚಿಕಿತ್ಸೆ ನೀಡುವುದರ ಬದಲಿಗೆ, ಅವುಗಳು ಬಾರದಂತೆ ಕಾಪಾಡಿಕೊಳ್ಳುವುದು ಸೂಕ್ತ ನಡೆ. ಇದನ್ನು ಮಾಡಲು ರೋಗಗಳ ಬಗ್ಗೆ ಅರಿವು ಮೂಡುವುದು ಮುಖ್ಯ.

ಡೆಂಗಿ ಜ್ವರ ಒಂದು ಸಾಂಕ್ರಾಮಿಕ ಕಾಯಿಲೆ. ಅಂದರೆ, ಅದು ಒಬ್ಬ ರೋಗಿಯಿಂದ ಮತ್ತೊಬ್ಬ ಆರೋಗ್ಯವಂತ ವ್ಯಕ್ತಿಗೆ ಹರಡುತ್ತದೆ. ಅಧಿಕತರ ಸಾಂಕ್ರಾಮಿಕ ಕಾಯಿಲೆಗಳಲ್ಲಿ ಮೂರು ಅಂಶಗಳಿರುತ್ತವೆ - ರೋಗಕಾರಕ ಸೂಕ್ಷ್ಮಾಣುಜೀವಿ, ರೋಗವನ್ನು ಹರಡುವ ವಾಹಕ, ಮತ್ತು ಇವೆರಡರ ಬೆಳವಣಿಗೆಗೆ ಪೂರಕವಾಗುವ ವಾತಾವರಣ. ಈ ಮೂರನ್ನೂ ಕೂಡಿಸಿದರೆ 'ಸೋಂಕಿನ ತ್ರಿಕೋಣ'ವಾಗುತ್ತದೆ. ಕಾಯಿಲೆಯನ್ನು ಹರಡದಂತೆ ತಡೆಗಟ್ಟಬೇಕಾದರೆ ಸೋಂಕಿನ ತ್ರಿಕೋಣದ ಯಾವುದಾದರೂ ಒಂದು ಬಾಹುವನ್ನಾದರೂ ಮುರಿಯಬೇಕು.

ಡೆಂಗಿ ಔಷಧ, ಅಥವಾ ದೇಹದೊಳಗೆ ವೈರಸ್ ಬೆಳೆಯದಂತೆ ವಿರೋಧಿಸುವ ಲಸಿಕೆಯ ಲಭ್ಯತೆಯಿಲ್ಲ. ಆದ್ದರಿಂದ, ವೈರಸ್ ಮಟ್ಟದಲ್ಲಿ ಇದನ್ನು ನಿಗ್ರಹಿಸುವುದು ಕಷ್ಟ. ಡೆಂಗಿ ವೈರಸ್ ಹರಡುವುದು ಈಡಿಸ್ ಇಜಿಪ್ಟೈ ಎನ್ನುವ ಹೆಣ್ಣುಸೊಳ್ಳೆಗಳಿಂದ. ಈ ಪ್ರಭೇದದ ಸೊಳ್ಳೆಗಳನ್ನು ವಿಜ್ಞಾನಿಗಳು ಅಧ್ಯಯನ ಮಾಡಿದ್ದಾರೆ. ಇದು ನಿಂತ ನೀರಿನಲ್ಲಿ ಮೊಟ್ಟೆಯಿಟ್ಟು ಸಂತಾನವನ್ನು ಬೆಳೆಸುತ್ತದೆ. ಹಗಲಿನ ವೇಳೆ ಸಕ್ರಿಯವಾಗಿರುವ ಈ ಸೊಳ್ಳೆ ಸಂಜೆಯ ನಂತರ ತನ್ನ ಕೆಲಸವನ್ನು ಕಡಿಮೆ ಮಾಡುತ್ತದೆ. ಡೆಂಗಿ ಜ್ವರದ ರೋಗಿಯನ್ನು ಇಂತಹ ಸೊಳ್ಳೆಗಳು ಕಡಿದಾಗ ಅವುಗಳ ಒಳಗೆ ವೈರಸ್ ಸೇರಿಕೊಳ್ಳುತ್ತದೆ. ಅದೇ ಸೊಳ್ಳೆ ಮತ್ತೊಬ್ಬ ನಿರೋಗಿಯನ್ನು ಕಡಿದಾಗ ಡೆಂಗಿ ವೈರಸ್ ಆ ವ್ಯಕ್ತಿಯ ರಕ್ತವನ್ನು ಸೇರಿ ಕಾಯಿಲೆ ತರುತ್ತದೆ. ಡೆಂಗಿ ಜ್ವರ ಒಬ್ಬರಿಂದ ಮತ್ತೊಬ್ಬರಿಗೆ ನೇರವಾಗಿ ಹರಡುವುದಿಲ್ಲ. ಅದೇನಿದ್ದರೂ 'ಈಡಿಸ್ ಇಜಿಪ್ಟೈ' ಎಂಬ ಹೆಣ್ಣುಸೊಳ್ಳೆಯ ಕಡಿತದಿಂದ ಮಾತ್ರ ಹರಡಬಲ್ಲದು. ಅಂದರೆ, ಸೊಳ್ಳೆಗಳನ್ನು ನಿಗ್ರಹಿಸಿದರೆ ಡೆಂಗಿ ಜ್ವರದಿಂದ ರಕ್ಷಣೆ ಸಾಧ್ಯ.



ಈ ನಿಟ್ಟಿನಲ್ಲಿ ಕೆಲಸಕ್ಕೆ ಬರುವುದು ಪರಿಸರದ ಬಗೆಗಿನ ನಮ್ಮ ಅರಿವು. ಸೊಳ್ಳೆಗಳು ಬೆಳೆಯಲು ಪೂರಕವಾಗುವ ಗಲೀಜು ಪರಿಸರವನ್ನು ಚೊಕ್ಕಟಗೊಳಿಸುವುದು ನಮ್ಮ ಆದ್ಯತೆಯಾಗಬೇಕು. ನಿಂತ ನೀರಿನಲ್ಲಿ ಈಡಿಸ್ ಇಜಿಪ್ಟೈ ಸೊಳ್ಳೆಗಳು ಬೆಳೆಯುತ್ತವೆ ಎಂದು ತಿಳಿದಾಗ, ಎಲ್ಲೂ ನೀರು ನಿಲ್ಲದಂತೆ ನಿಗಾ ವಹಿಸುವುದು; ಹೀಗೆ ನಿಂತ ನೀರನ್ನು ಶುಚಿಗೊಳಿಸುವುದು ಮುಖ್ಯ. ಆದರೆ ಧಾವಂತದ ಆಧುನಿಕ ಬದುಕಿನಲ್ಲಿ ಈ ರೀತಿ ಗಮನಿಸುವುದು ಸುಲಭದ ಮಾತಲ್ಲ. ನಮ್ಮ ಅರಿವಿನ ಪರಿಧಿಗೆ ಬರದಂತಹ ಎಡೆಗಳಲ್ಲಿ ನೀರು ನಿಂತು ಸೊಳ್ಳೆಗಳ ಬೆಳವಣಿಗೆ ಆಗಬಹುದು.

ಆಲಂಕಾರಿಕವಾಗಿ ಮನೆಯೊಳಗೆ ಬೆಳೆಯುವ ಸಸ್ಯಗಳ ಕುಂಡಗಳು; ಮನೆಯ ಹಿತ್ತಲಲ್ಲಿ ಎಸೆದಿರುವ ಹಳೆಯ ಪಾತ್ರೆ, ಮಡಕೆ, ಟೈರು, ಆಟಿಕೆ, ಬಕೆಟ್ ಮೊದಲಾದವುಗಳಲ್ಲಿ ಸೇರಿರುವ ನೀರು ನಮ್ಮ ಕಣ್ಣಿಗೆ ಬಿದ್ದಿರುವುದಿಲ್ಲ. ನೀರು ಹೊತ್ತು ತರುವ ಅಥವಾ ಹೊರಹಾಕುವ ಪೈಪುಗಳಲ್ಲಿ ಎಂದೋ ಆಗಿರಬಹುದಾದ ಸಣ್ಣ ಬಿರುಕಿನಿಂದ ಹರಿದ ನೀರು ಮನೆಯ ಆಸುಪಾಸಿನ ಸ್ವಲ್ಪ ತಗ್ಗು ಪ್ರದೇಶದಲ್ಲಿ ಅನಾಯಾಸವಾಗಿ ನಿಲ್ಲುತ್ತದೆ. ಇವುಗಳಲ್ಲಿ ಸೊಳ್ಳೆಗಳು ಹುಲುಸಾಗಿ ಬೆಳೆಯುತ್ತವೆ. ನಮ್ಮ ಮನೆಯನ್ನು ನಾವು ಚೊಕ್ಕಟವಾಗಿ ಇಟ್ಟುಕೊಂಡರೂ, ನೆರೆಹೊರೆಯವರ ನಿರ್ಲಕ್ಷ್ಯದಿಂದ ನಿಲ್ಲುವ ನೀರಿನಲ್ಲಿ ಬೆಳೆಯುವ ಸೊಳ್ಳೆಗಳು ಆಯಾ ಪ್ರದೇಶದ ಪ್ರತಿಯೊಬ್ಬರಿಗೂ ಹಾನಿಮಾಡಬಲ್ಲವು. ಹೀಗಾಗಿ, ಈ ವಿಷಯದ ಬಗ್ಗೆ ಸಾಂಘಿಕ ಅರಿವು ಮೂಡಿಸಿ, ಕಾಯಿಲೆಯ ವಿರುದ್ಧದ ಹೋರಾಟದಲ್ಲಿ ಪ್ರತಿಯೊಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ.

ಗತ್ಯಂತರವಿಲ್ಲದೆ ನೀರನ್ನು ಹಿಡಿದಿಡಬೇಕಾದ ಸಂದರ್ಭದಲ್ಲಿ ಬಳಕೆಗೆ ಸಂಗ್ರಹಿಸಿರುವ ನೀರಿನಲ್ಲಿ ಸೊಳ್ಳೆಗಳ ಗೊದಮೊಟ್ಟೆಗಳನ್ನು ತಿನ್ನುವ ಮೀನುಗಳ ಪೋಷಣೆ; ನಿಂತ ನೀರಿನ ಮೇಲೆ ಬೇವಿನ ಎಣ್ಣೆಯ ಸಿಂಪಡಿಕೆ ಮೊದಲಾದ ಪರಿಸರಕ್ಕೆ ಹಾನಿ ಮಾಡದ ವಿಧಾನಗಳಿಂದ ಸೊಳ್ಳೆಗಳ ಬೆಳವಣಿಗೆ ತಪ್ಪಿಸುವಂತಹ ಕೆಲಸಗಳನ್ನು ಮಾಡಬಹುದು. ಮನೆಯೊಳಗೆ ಸೊಳ್ಳೆಗಳು ಬಾರದಂತೆ ಕಿಟಕಿ ಬಾಗಿಲುಗಳಿಗೆ ಜಾಲರಿಗಳ ಅಳವಡಿಕೆ, ಮನೆಯನ್ನು ಅನಗತ್ಯ ಕಸದಿಂದ ತುಂಬದೆ ಚೊಕ್ಕಟ ಮಾಡುವುದು, ಮನೆಯಿಂದ ಹೊರಹೋಗುವಾಗ ಮೈತುಂಬುವ ಬಟ್ಟೆಗಳ ಬಳಕೆ, ಸೊಳ್ಳೆನಿರೋಧಕ ಮುಲಾಮುಗಳನ್ನು ಹಚ್ಚುವಿಕೆ ಮೊದಲಾದವುಗಳಿಂದ ಮಕ್ಕಳಾದಿಯಾಗಿ ಎಲ್ಲರನ್ನೂ ಸೊಳ್ಳೆಗಳ ಕಡಿತದಿಂದ ಕಾಪಾಡಬಲ್ಲವು.

ಕಾಯಿಲೆಯ ಗಹನತೆಯನ್ನು ಅರಿಯಲಾಗದ ಮಕ್ಕಳನ್ನು ಮನೆಯ ಹಿರಿಯರು ಬಹಳ ಜತನದಿಂದ ನೋಡಿಕೊಂಡು ಅಪಾಯದಿಂದ ರಕ್ಷಿಸಬೇಕು. ಇಷ್ಟಾಗಿಯೂ ಡೆಂಗಿ ಜ್ವರ ಬಾರದಂತೆ ತಡೆಯುವುದು ಸಾಧ್ಯವಾಗದಿರಬಹುದು. ಕಾಯಿಲೆಯ ಪ್ರಾಥಮಿಕ ಲಕ್ಷಣಗಳು ಕಂಡಾಗ ಕೂಡಲೇ ಕುಟುಂಬವೈದ್ಯರನ್ನು ಕಾಣುವುದು ಒಳ್ಳೆಯದು; ಈ ವಿಷಯದಲ್ಲಿ ನಿರ್ಲಕ್ಷ್ಯ ಕೂಡದು.



ಉತ್ತಮ ಪೋಷಕರೆಂದರೆ...

ಲಾವಣ್ಯಗೌರಿ ವೆಂಕಟೇಶ್

ಪಾಲಕರಾಗಿ ಪ್ರತಿಯೊಬ್ಬ ತಂದೆ-ತಾಯಿಯೂ ತಮ್ಮ ಮಕ್ಕಳನ್ನು ಸಾಕಿ, ಸಲಹಿ, ಪೋಷಿಸಿ, ಕಾಳಜಿಯಿಂದ ಮಾರ್ಗದರ್ಶನ ನೀಡಿ, ಒಳ್ಳೆಯ ವ್ಯಕ್ತಿಯನ್ನಾಗಿಸಲು ಬಯಸುತ್ತಾರೆ. ಈ ನಿಟ್ಟಿನಲ್ಲಿ 'ಲೋಕೋ ಭಿನ್ನ ರುಚಿಃ' ಎಂಬಂತೆ ಒಬ್ಬಬ್ಬರದು ಒಂದೊಂದು ಬಗೆಯ ಪೋಷಕತ್ವ(ಪೇರೆಂಟಿಂಗ್). ಅನಿರ್ಬಂಧಿತ ಪೋಷಕತ್ವ, ಅಂದರೆ ಮಕ್ಕಳನ್ನು ಅವರಿಷ್ಟಕ್ಕೆ ತಕ್ಕಂತೆ ಸ್ವೇಚ್ಛೆಯಾಗಿ ಬೆಳೆಯಲು ಬಿಡುವುದು. ಮತ್ತೊಂದು ಸರ್ವಾಧಿಕಾರಿ ಪೋಷಕತ್ವ. ಅಂದರೆ, ಮಕ್ಕಳಿಗೆ ಯಾವ ಸ್ವಾತಂತ್ರ್ಯವನ್ನು ಕೊಡದೆ, ತಮ್ಮ ಅಧೀನದಲ್ಲೇ ಮಕ್ಕಳನ್ನು ಬೆಳೆಸುವುದು. ಇನ್ನೊಂದು ಅತ್ಯಾರೈಕೆಯ ಪೋಷಕರು. ಇವರು ಮಕ್ಕಳ ಬಗ್ಗೆ ಅತಿಯಾದ ಕಾಳಜಿಯನ್ನು ತೋರುತ್ತಾರೆ. ಯಾವ ಮಟ್ಟಿಗೆಂದರೆ, ಮಕ್ಕಳ ಸಣ್ಣ ಪುಟ್ಟ ನಿರ್ಧಾರಗಳನ್ನೂ ತಾವೇ ತೆಗೆದುಕೊಳ್ಳುತ್ತಾರೆ. ನೀವು ಯಾವ ರೀತಿಯ ಪೋಷಕರು ಎಂಬ ಗೊಂದಲವೇ? ಇದನ್ನು ತಿಳಿಯಲು ನಮ್ಮ ಸುತ್ತಮುತ್ತ ಕಣ್ಣಾಡಿಸಿದರೆ ಸಾಕು. ಎಲ್ಲಾ ರೀತಿಯ ಪೋಷಕ ವರ್ಗವೂ ನಮಗೆ ಗೋಚರಿಸುತ್ತವೆ. ಕಾಲ ಸರಿಯುತ್ತಿರುವಂತೆಯೇ ಮಕ್ಕಳನ್ನು ಒಳ್ಳೆಯ ಪ್ರಜೆಗಳನ್ನಾಗಿ ಮಾಡುವುದು ಪೋಷಕರಿಗೆ ಒಂದು ಸವಾಲೇ ಸರಿ.

ಮಕ್ಕಳ ಗುಣ ಹಾಗೂ ನಡತೆಯಿಂದ, ಪೋಷಕರ ಹಾಗೂ ಮಕ್ಕಳ ಸಂಬಂಧ ಹೇಗಿದೆಯೆಂದು ತಿಳಿಯುತ್ತದೆ. ಕಾರಣ ಮಕ್ಕಳು ನಾವು ಹೇಳಿಕೊಟ್ಟದ್ದನ್ನು ಕಲಿಯುವುದಕ್ಕಿಂತ ನಾವೇನು ಮಾಡುತ್ತೇವೋ ಅದನ್ನು ನೋಡಿ ಕಲಿಯುತ್ತಾರೆ. ಕೆಲವು ಪೋಷಕರು ಮಕ್ಕಳಿಗೆ ಯಾವುದೇ ರೀತಿಯ ಕಟ್ಟುಪಾಡುಗಳನ್ನೂ ಹಾಕದೆ ಸಲಹುತ್ತಾರೆ. ಇಂತಹವರಿಗೆ ತಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ ಎಂಬ ಅರಿವೇ ಇರುವುದಿಲ್ಲ. ಇವರಿಗೆ ಮಕ್ಕಳು ತಮ್ಮಷ್ಟಕ್ಕೆ ತಾವೇ ಬೆಳೆದು ನಿಲ್ಲುತ್ತಾರೆಂಬ ಅನಿಸಿಕೆ. ಇವರು ಮಕ್ಕಳೊಂದಿಗೆ ಹೆಚ್ಚಿನ ಸಮಯವನ್ನು ಕಳೆಯುವುದಿಲ್ಲ. ಕೆಲವರಂತೂ ಮಕ್ಕಳ ಮೂಲಸೌಕರ್ಯವನ್ನೂ ಒದಗಿಸುವಲ್ಲಿ ವಿಫಲರಾಗಿರುತ್ತಾರೆ. ಆದರೆ, ಇದು ಉದ್ದೇಶಪೂರ್ವಕವಲ್ಲ. ಬಹಳಷ್ಟು ಸಮಯದಲ್ಲಿ ಪೋಷಕತ್ವದಲ್ಲಿ ತಿಳಿವಳಿಕೆ ಇರುವುದಿಲ್ಲ. ಮತ್ತೆ ಕೆಲವರಿಗೆ ತಮ್ಮ ಮಕ್ಕಳು ತಾವು ನಿಗಾ ವಹಿಸದಿದ್ದರೂ ಉತ್ತಮ ಪ್ರಜೆಗಳಾಗುತ್ತಾರೆಂಬ ನಂಬಿಕೆ. ಇನ್ನೂ ಹೆಚ್ಚಿನ ಸಂದರ್ಭಗಳಲ್ಲಿ ಪೋಷಕರಿಗೆ ಅವರದೇ ಆದ ತೊಂದರೆಗಳಲ್ಲಿ ಸಿಲುಕಿ, ಮಕ್ಕಳ ಕಡೆ ಗಮನ ಹರಿಸಲು ಸಾಧ್ಯವಾಗಿರುವುದಿಲ್ಲ. ಅತಿಯಾದ ಸಿರಿತನ ಹಾಗೂ ಅತಿಯಾದ ಬಡತನ ಎರಡರಲ್ಲೂ ಈ ರೀತಿಯ ಅನಿರ್ಬಂಧಿತ ಪೋಷಕರಿರುತ್ತಾರೆ. ಈ ರೀತಿಯ ಪೋಷಕತ್ವದಲ್ಲಿ ಬೆಳೆದ ಮಕ್ಕಳು ಓದಿನಲ್ಲಿ ಹಿಂದೆ ಬೀಳುತ್ತಾರೆ. ಕೆಟ್ಟ ಚಟಗಳಿಗೆ ಬಲಿಯಾಗುವ ಸಾಧ್ಯತೆಗಳಿರುತ್ತವೆ.

ಮಕ್ಕಳ ಆತ್ಮವಿಶ್ವಾಸದಿಂದ ಹಿಡಿದು ದೈಹಿಕ ಆರೋಗ್ಯದವರೆಗೂ ಎಲ್ಲದರ ಮೇಲೂ ನಮ್ಮ ಪೋಷಕತ್ವದ ಶೈಲಿಯ ಪ್ರಭಾವವಿರುತ್ತದೆ. ಮತ್ತೊಂದು ಬಗೆಯ ಪೋಷಕತ್ವವೆಂದರೆ, ಕಟ್ಟುಪಾಡಿನ ಪಾಲನೆ. ಇದರಲ್ಲಿ ಪೋಷಕರಿಗೆ ಮಕ್ಕಳು ಯಾವಾಗಲೂ ತಮ್ಮ ಇಚ್ಛೆಯಂತೆಯೇ ನಡೆಯಬೇಕೆನ್ನುವ ಬಯಕೆ. ಇಲ್ಲಿ ಮಕ್ಕಳು, ಪಾಲಕರ ನಿಲುವಿನ ಬಗ್ಗೆ ಪ್ರಶ್ನೆ ಮಾಡುವಂತೆಯೇ ಇಲ್ಲ. ಮಾಡಿದರೂ ಅವರು ಅದರ ಬಗ್ಗೆ ಗಮನ ಹರಿಸುವುದಿಲ್ಲ. ಅವರ ಗುರಿ ಮಕ್ಕಳ ವಿಧೇಯತೆ ಕಡೆಗೆ. ಅತಿಯಾದ ಶಿಸ್ತಿನಲ್ಲಿ ಮಕ್ಕಳನ್ನು ಬೆಳೆಸಲು ಈ ಪೋಷಕರು ಬಳಸುವ ಸೂತ್ರ ಶಿಕ್ಷೆ. ಈ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಮಕ್ಕಳು ಸುಳ್ಳು ಹೇಳಲು ಶುರು ಮಾಡುತ್ತಾರೆ. ಈ ಪೋಷಕರು ಶಿಸ್ತಿನ ಹೆಸರಿನಲ್ಲಿ ಮಕ್ಕಳ ಭಾವನೆಗಳಿಗೂ ಬೆಲೆ ಕೊಡುವುದಿಲ್ಲ. ಹೀಗೆ ನಿಯಮ ಪಾಲನೆಯಲ್ಲೇ ಬೆಳೆದ ಮಕ್ಕಳು ದೊಡ್ಡವರಾದ ಮೇಲೂ ಹೆಚ್ಚಿನ ಸಮಯ ನಿಬಂಧನೆಗಳಿಗೆ ಅಂಟಿಕೊಂಡೇ ಇರುತ್ತಾರೆ. ಈ ಬಗೆಯ ಪೋಷಕತ್ವಕ್ಕೆ ಕಾರಣ ಅವರ ಜೀವನದಲ್ಲಿ ನಡೆದ ಅಥವಾ ಅವರು ನೋಡಿದ ಘಟನೆಗಳೂ ಕಾರಣವಾಗಿರುತ್ತವೆ. ಇದರಡಿಯಲ್ಲಿ ಬೆಳೆದ ಮಕ್ಕಳು ಆತ್ಮವಿಶ್ವಾಸವನ್ನು ಗಳಿಸುವಲ್ಲಿ ವಿಫಲರಾಗುತ್ತಾರೆ. ಕಾರಣ ಅವರ ಅಭಿಪ್ರಾಯಗಳಿಗೆ ಚಿಕ್ಕಂದಿನಿಂದಲೂ ಬೆಲೆಯೇ ಇರುವುದಿಲ್ಲ. ಈ ಮಕ್ಕಳು ದೊಡ್ಡವರಾದ ಮೇಲೂ ಹಗೆತನ ಹಾಗೂ ಜಿಗುಟುತನವನ್ನು ಮೈಗೂಡಿಸಿಕೊಂಡಿರುತ್ತಾರೆ. ಪೋಷಕರ ನಿರೀಕ್ಷೆಗೆ ತಕ್ಕಂತೆ ಬದುಕುತ್ತಿಲ್ಲವೆಂಬ ಕೀಳರಿಮೆ ಅವರನ್ನು ಕಾಡುತ್ತಿರುತ್ತದೆ.


ಉತ್ತಮ ಪೋಷಕರೆಂದರೆ; ಮಕ್ಕಳಿಗೆ ಒಳ್ಳೆಯ ಸುರಕ್ಷತೆ, ಮಾರ್ಗದರ್ಶನ ಹಾಗೂ ಸ್ಫೂರ್ತಿ ತುಂಬುವ ಕೆಲಸವನ್ನು ಮಾಡಬೇಕು. ಮಕ್ಕಳು ಮಾಡುವ ಎಲ್ಲಾ ಕೆಲಸವನ್ನೂ ಸಹಾಯದ ಹೆಸರಿನಲ್ಲಿ ತಾವೇ ಮಾಡುವುದಲ್ಲ. ಕೆಲವು ಪೋಷಕರು ಮಕ್ಕಳ ಬಗ್ಗೆ ಅತಿಯಾದ ಕಾಳಜಿ ಹೊಂದಿದವರಾಗಿರುತ್ತಾರೆ. ಇತ್ತೀಚಿನ ಬಹಳಷ್ಟು ಪೋಷಕರಿಗೆ ಕಲಿಕೆಯಲ್ಲಾಗಲೀ, ಕ್ರೀಡೆಗಳಲ್ಲಾಗಲೀ, ಕಲೆಗಳಲ್ಲಾಗಲೀ ತಮ್ಮ ಮಕ್ಕಳೇ ಮೊದಲಿಗರಾಗಬೇಕೆನ್ನುವ ಹಠ! ಬದುಕಿನ ಪ್ರತೀ ಹಂತದಲ್ಲೂ ತಮ್ಮ ಮಕ್ಕಳೇ ಗೆಲ್ಲಬೇಕೆನ್ನುವ ಛಲ. ಈ ಪ್ರಕ್ರಿಯೆಯಲ್ಲಿ ಮಕ್ಕಳ ಬಹಳಷ್ಟು ಕೆಲಸಗಳನ್ನು, ನಿರ್ಧಾರಗಳನ್ನು ಪೋಷಕರೇ ತೆಗೆದುಕೊಳ್ಳುತ್ತಾರೆ. ಮಕ್ಕಳ ಅಭಿವೃದ್ಧಿಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು ಪೋಷಕರ ಹಕ್ಕು ನಿಜ. ಆದರೆ ಅವರಿಗೆ ಏನನ್ನೂ ಆಯ್ಕೆ ಮಾಡಲು ಬಿಡದಿರುವುದು ಮಕ್ಕಳ ಸ್ವಾತಂತ್ರ್ಯಹರಣವಾಗುತ್ತದೆ. ಬಹುತೇಕ ಸಂದರ್ಭಗಳಲ್ಲಿ ತಮ್ಮ ನೆರವೇರದ ಅಭಿಲಾಷೆಗಳನ್ನು ಮಕ್ಕಳ ಮೂಲಕ ಈಡೇರಿಸಿಕೊಳ್ಳುವ ಪ್ರಯತ್ನದಲ್ಲಿ ಅತಿ ಕಾಳಜಿ ಇರುವ ಪೋಷಕರಾಗಿರುತ್ತಾರೆ. ಅತ್ಯಾರೈಕೆಯ ಪೋಷಕತ್ವದ ಮಕ್ಕಳು ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂದೇಟು ಹಾಕುತ್ತಾರೆ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಹೆದರುತ್ತಾರೆ. ತಮ್ಮ ಬೆನ್ನಿಗೆ ಪೋಷಕರಿರುತ್ತಾರೆ ಎಂಬ ಭ್ರಮೆಯಲ್ಲಿಯೇ ಇರುತ್ತಾರೆ.

ಹಾಗಾದರೆ ಯಾವ ರೀತಿಯ ಪೋಷಕತ್ವ ಸರಿ? ಯಾವುದೇ ಪೋಷಕತ್ವವೂ ಪರಿಪೂರ್ಣವಲ್ಲ. ಮೇಲಿನ ಯಾವುದೇ ಪೋಷಕ ವರ್ಗಕ್ಕೆ ನೀವು ಸೇರಿದ್ದರೂ ತಪ್ಪಿತಸ್ಥ ಮನೋಭಾವ ಬೇಡ. ಜೀವನದಲ್ಲಿ ಪೋಷಕತ್ವವೆನ್ನುವುದು ಒಂದು ಮಜಲು. ಪ್ರತಿಯೊಬ್ಬರೂ ಪೋಷಕರಾದ ನಂತರವೇ ತಿಳಿಯುವಂಥ ಹಂತ! ಅವರವರ ಬದುಕಿನ ಅನುಭವಗಳಿಂದ ಅವರವರ ಜೀವನದ ಮಾರ್ಪಾಟುಗಳಾಗಿರುತ್ತವೆ. ಮಕ್ಕಳಿಗೆ ಬದುಕಿನ ದಾರಿಯನ್ನು ತೋರಿಸುವ ಮಾರ್ಗದರ್ಶನ ನೀಡಿ. ಹಾಗಾದರೆ ಅವು ಯಾವುವೆಂದು ನೋಡೋಣ.

- ಮಕ್ಕಳೊಂದಿಗೆ ಮುಕ್ತವಾಗಿ ಮಾತನಾಡಿ.
- ಮಕ್ಕಳು ತಪ್ಪು ಮಾಡಿದಾಗ, ತಿದ್ದಿ ತಿಳಿ ಹೇಳಿ. ಓದಿನಲ್ಲಾಗಲೀ, ಆಟದಲ್ಲಾಗಲೀ ಹಿಂದುಳಿದರೆ, ತಪ್ಪು ಎಲ್ಲಿ ಆಗಿದೆಯೆಂದು ತೋರಿಸಿಕೊಡಿ. ಮೊದಲ ಸ್ಥಾನವೇ ಬೇಕೆಂಬ ಛಲ ತೊಡಬೇಡಿ. ತಪ್ಪುಗಳು ಕಲಿಸುವ ಪಾಠಕ್ಕಿಂತ ದೊಡ್ಡ ಪಾಠ ಜೀವನದಲ್ಲಿಲ್ಲ.
- ಅತಿಯಾದ ರಕ್ಷಣೆ ಬೇಡ. ಮಕ್ಕಳು ಬಿದ್ದಾಗ ಅವರನ್ನು ಹಿಡಿದುಕೊಳ್ಳಿ. ಬೀಳಲೇ ಬಾರದೆಂದು ಅವರ ಹಿಂದೆಯೇ ನಿಲ್ಲಬೇಡಿ. ಮನೆಯ ಸಣ್ಣ ಪುಟ್ಟ ಕೆಲಸಗಳಲ್ಲಿ ಮಕ್ಕಳನ್ನು ಸೇರಿಸಿಕೊಳ್ಳಿ. ಬದುಕಿನ ಬಹಳಷ್ಟು ಪಾಠಗಳನ್ನು ಮಕ್ಕಳು ಕಲಿಯುವುದು ಮನೆಯಿಂದಲೇ.
- ಜವಾಬ್ದಾರಿ. ಮಕ್ಕಳಿಗೆ ಅವರು ಮಾಡಿದ ಕೆಲಸಕ್ಕೆ ಅವರೇ ಹೊಣೆಗಾರರು ಎನ್ನುವುದನ್ನು ತಿಳಿಸಬೇಕು.
- ಮಕ್ಕಳು ಬಿದ್ದಾಗ, ಜಾಗ್ರತೆಯಿಂದಿರಲು ತಿಳಿಸಬೇಕೇ ಹೊರತು ಬಿದ್ದ ನೆಲವನ್ನು ಬೈಯ್ಯುವುದು ಸರಿಯಲ್ಲ. ಇದನ್ನು ಎಳವೆಯಿಂದಲೇ ಸರಿಪಡಿಸಿದರೆ, ಮಕ್ಕಳು ಬೇರೆಯವರ ಮೇಲೆ ತಪ್ಪು ಹೊರಿಸುವುದಿಲ್ಲ.
- ಬಲಹೀನತೆ ಶಾಪವಲ್ಲ. ಎಲ್ಲರೂ ಪರಿಪೂರ್ಣರಾಗಿರಲು ಸಾಧ್ಯವಿಲ್ಲ. ಆದರೆ ನಾವು ಮಕ್ಕಳ ಮುಂದೆ 'ಸೂಪರ್ ಮೊಮ್' ಅಥವಾ 'ಸೂಪರ್ ಡ್ಯಾಡ್'ಗಳಾಗಲು ಬಯಸುತ್ತೇವೆ. ಇದರಿಂದ ಮಕ್ಕಳಿಗೆ ಇನ್ನೊಂದು ಮಗ್ಗುಲಿನ ಪರಿಚಯವೇ ಆಗುವುದಿಲ್ಲ. ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ಕುಂದು ಕೊರತೆ ಇದ್ದೇ ಇರುತ್ತದೆ. ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿದರೆ ಅರ್ಥ ಮಾಡಿಕೊಳ್ಳುತ್ತಾರೆ. ಇದರಿಂದ ಮಕ್ಕಳಿಗೆ ಬದುಕಿನ ವಿವಿಧ ಮಜಲುಗಳ ಪರಿಚಯವಾಗುತ್ತದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ದ್ವೇಷಿಸುವುದು ಸುಲಭ ಮತ್ತು ಪ್ರೀತಿಸುವುದು ಕಷ್ಟ. ಅಂತೆಯೇ, ಒಳ್ಳೆಯ ವಿಷಯಗಳಲ್ಲಿ ಸಾಧನೆ ಕಷ್ಟ ಮತ್ತು ಕೆಟ್ಟ ವಿಷಯಗಳಲ್ಲಿ ಸುಲಭವಾಗಿ ಜಯ ಪಡೆಯುತ್ತೇವೆ.

–ಕನ್‌ಫ್ಯೂಷಿಯಸ್

ತತ್ವರಹಿತ ಪಕ್ಷಾಂತರದಿಂದ ಪ್ರಜಾಪ್ರಭುತ್ವ ದುರ್ಬಲ

ಮಹಾರಾಷ್ಟ್ರದಲ್ಲಿ ಭಾನುವಾರ ನಡೆದ ರಾಜಕೀಯ ಬೆಳವಣಿಗೆಯು ರಾಜ್ಯದ ಅಧಿಕಾರದ ಸಮೀಕರಣದಲ್ಲಿ ಮಾತ್ರ ಬದಲಾವಣೆ ಉಂಟು ಮಾಡಿಲ್ಲ, ರಾಜ್ಯದ ಆಚೆಗಿನ ರಾಜಕೀಯದ ಮೇಲೆಯೂ ಅದು ಪರಿಣಾಮ ಬೀರಲಿದೆ. ಉಪಮುಖ್ಯಮಂತ್ರಿಯಾಗಿ ಅಜಿತ್ ಪವಾರ್ ಮತ್ತು ಎನ್‌ಸಿಪಿಯ ಎಂಟು ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರಿಂದಾಗಿ ಏಕನಾಥ ಶಿಂದೆ ನೇತೃತ್ವದ ಬಿಜೆಪಿ-ಶಿವಸೇನಾ ಮೈತ್ರಿಕೂಟದ ಸರ್ಕಾರ ಇನ್ನಷ್ಟು ಗಟ್ಟಿಯಾಗಿದೆ. ಎನ್‌ಸಿಪಿ ವಿಭಜನೆಯಾಗಿದ್ದರಿಂದಾಗಿ ಶರದ್ ಪವಾರ್ ನೇತೃತ್ವದ ಪಕ್ಷಕ್ಕೆ ಭಾರಿ ಹೊಡೆತ ಬಿದ್ದಿದೆ. ಅಜಿತ್ ಪವಾರ್ ಅವರು ಪಕ್ಷವನ್ನು ಇಬ್ಭಾಗ ಮಾಡಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಬಿಜೆಪಿ ನೇತೃತ್ವದ ಮೈತ್ರಿಕೂಟವನ್ನು ಸೇರಬೇಕು ಎಂಬ ಕಾತರ ಅವರಲ್ಲಿ ಹಿಂದಿನಿಂದಲೂ ಇತ್ತು. 2019ರಲ್ಲಿಯೇ ಇಂತಹದೊಂದು ಪ್ರಯತ್ನವನ್ನು ಅವರು ಮಾಡಿದ್ದರು. ಆಗ ರಚನೆಯಾಗಿದ್ದ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಅವರು ಉಪಮುಖ್ಯಮಂತ್ರಿ ಆಗಿದ್ದರು. ಆದರೆ ಪಕ್ಷವನ್ನು ಇಬ್ಭಾಗ ಮಾಡಲು ಅಜಿತ್ ಪವಾರ್ ಅವರಿಗೆ ಸಾಧ್ಯವಾಗದ ಕಾರಣ ಆ ಸರ್ಕಾರ ಉರುಳಿತ್ತು. ಅದಾದ ಬಳಿಕವೂ ಅವರ ಒಲವು ಆ ಕಡೆಗೇ ಇತ್ತು. ಜಾರಿ ನಿರ್ದೇಶನಾಲಯದಲ್ಲಿ ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳು ಕೂಡ ಈ ಒಲವನ್ನು ನಿರ್ಧರಿಸುವಲ್ಲಿ ಪಾತ್ರ ವಹಿಸಿರಬಹುದು. ಅವರ ಜೊತೆಗೆ ಸಚಿವರಾಗಿ ಸೇರ್ಪಡೆ ಆದವರ ವಿಚಾರದಲ್ಲಿಯೂ ಇದು ನಿಜ. ಭ್ರಷ್ಟಾಚಾರ ಪ್ರಕರಣಗಳನ್ನು ಎದುರಿಸುತ್ತಿರುವವರು ಈಗ ಶುದ್ಧಹಸ್ತರಾಗಿ ಹೊರಹೊಮ್ಮಲಿದ್ದಾರೆ.



ತತ್ವ ಇಲ್ಲದ ಪಕ್ಷಾಂತರಗಳು, ಜನಪ್ರತಿನಿಧಿಗಳ ಖರೀದಿ ಮತ್ತು ಬ್ಲ್ಯಾಕ್‌ಮೇಲ್ ತಂತ್ರಗಳು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತವೆ

ಶಿಂದೆ-ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರವು ತನ್ನ ಬುಡವನ್ನು ಗಟ್ಟಿಗೊಳಿಸಿಕೊಂಡಿದೆ. ಶಿವಸೇನಾದ 16 ಶಾಸಕರ ಮೇಲೆ ಅನರ್ಹತೆಯ ತೂಗುಗತ್ತಿ ಈಗಲೂ ಇರುವುದರಿಂದ ಇಂತಹ ಬೆಂಬಲದ ಅಗತ್ಯವೂ ಮೈತ್ರಿಕೂಟಕ್ಕೆ ಇತ್ತು. ಎನ್‌ಸಿಪಿಯನ್ನು ಒಡೆದು ಬಂದಿರುವ ಶಾಸಕರಿಗೂ ಅನರ್ಹತೆಯ ಭೀತಿ ಇದೆ. ಆದರೆ, ಅದಕ್ಕೆ ಇನ್ನೂ ಸಮಯ ಇದೆ. ಎನ್‌ಸಿಪಿಯ ಹೆಚ್ಚಿನ ಶಾಸಕರ ಬೆಂಬಲ ಅಜಿತ್ ಪವಾರ್ ಅವರಿಗೆ ಇದೆ ಎಂದು ಹೇಳಲಾಗುತ್ತಿದೆ. ಹಾಗಾಗಿಯೇ ಇಡೀ ಪ್ರಹಸನದಲ್ಲಿ ಶರದ್ ಪವಾರ್ ಪಾತ್ರ ಏನು ಎಂಬ ಪ್ರಶ್ನೆಯೂ ಎದ್ದಿದೆ. ಶರದ್ ಪವಾರ್ ಅವರ ಅತ್ಯಂತ ನಿಷ್ಠಾವಂತರಲ್ಲಿ ಹಲವರು ಅಜಿತ್ ಪವಾರ್ ಅವರ ಜೊತೆಗೆ ಹೋಗಿದ್ದಾರೆ. ಶರದ್ ಅವರ ಅರಿವಿನೊಂದಿಗೆ ಅಥವಾ ಅವರ ಪರೋಕ್ಷ ಬೆಂಬಲದಿಂದಲೇ ಇದು ನಡೆದಿದೆ ಎಂಬ ಸಂದೇಹಕ್ಕೆ ಇದು ಕಾರಣವಾಗಿದೆ. ಆದರೆ ಪವಾರ್ ಅವರು ಇದನ್ನು ಬಲವಾಗಿ ಅಲ್ಲಗಳೆದಿದ್ದಾರೆ. ಆಡಳಿತಾರೂಢ ಹೊಸ ಮೈತ್ರಿಕೂಟದ ವಿರುದ್ಧ ಹೋರಾಡುವುದಾಗಿ ಶಪಥ ಮಾಡಿದ್ದಾರೆ. ಶರದ್ ಪವಾರ್ ಅವರ ಮಗಳು ಸುಪ್ರಿಯಾ ಸುಳೆ ಅವರನ್ನು ಪಕ್ಷದ ಕಾರ್ಯಾಧ್ಯಕ್ಷೆಯನ್ನಾಗಿ ನೇಮಕ ಮಾಡಿರುವುದರಿಂದ ಅಸಮಾಧಾನಗೊಂಡ ಹಿರಿಯ ಮುಖಂಡರು ಪಕ್ಷ ತೊರೆದಿದ್ದಾರೆ ಎಂದೂ ಹೇಳಲಾಗುತ್ತಿದೆ. ಅಜಿತ್ ಪವಾರ್ ನೇತೃತ್ವದಲ್ಲಿ ಎನ್‌ಸಿಪಿಯ ಒಂದಷ್ಟು ಶಾಸಕರು ರಾಜಕೀಯ ಲೆಕ್ಕಾಚಾರದ ಕಾರಣಕ್ಕೆ ಅಥವಾ ಜಾರಿ ನಿರ್ದೇಶನಾಲಯ ಮತ್ತು ಇತರ ಸಂಸ್ಥೆಗಳು ಸೃಷ್ಟಿಸಿದ ಒತ್ತಡದಿಂದಾಗಿ ಬಿಜೆಪಿ ಸೇರಿದ್ದಾರೆ. ಯಾವುದೇ ತತ್ವ ಇಲ್ಲದ ಪಕ್ಷಾಂತರಗಳು, ಪಕ್ಷದ ಜನಪ್ರತಿನಿಧಿಗಳಲ್ಲಿ ಹೆಚ್ಚಿನವರು ಸಾರಾಸಗಟಾಗಿ ಬೇರೆ ಪಕ್ಷಕ್ಕೆ ಹೋಗುವುದು, ಜನಪ್ರತಿನಿಧಿಗಳ ಖರೀದಿ ಮತ್ತು ಬ್ಲ್ಯಾಕ್‌ಮೇಲ್ ತಂತ್ರಗಳು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತವೆ ಎಂಬುದು ಸತ್ಯ. ಪ್ರಧಾನಿ ನರೇಂದ್ರ ಮೋದಿ ಅವರು, ಎನ್‌ಸಿಪಿಯಲ್ಲಿ ಇರುವವರು ಭ್ರಷ್ಟರು ಎಂದು ಕಳೆದ ವಾರವಷ್ಟೇ ಟೀಕಿಸಿದ್ದರು. ಅದಾಗಿ ಕೆಲವೇ ದಿನಗಳಲ್ಲಿ ಅದೇ 'ಭ್ರಷ್ಟ' ಮುಖಂಡರನ್ನು ತಮ್ಮ ಪಕ್ಷದ ನೇತೃತ್ವದ ಮೈತ್ರಿಕೂಟಕ್ಕೆ ಸೇರಿಸಿಕೊಂಡಿದ್ದಾರೆ.

ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿಯನ್ನು ವಿರೋಧಿಸುವ ಪಕ್ಷಗಳನ್ನು ಒಗ್ಗೂಡಿಸಲು ನಡೆದಿರುವ ಪ್ರಯತ್ನಗಳ ಮೇಲೆ ಮಹಾರಾಷ್ಟ್ರದ ಬೆಳವಣಿಗೆಯು ಪರಿಣಾಮ ಬೀರಬಹುದು. ಬಿಜೆಪಿಯನ್ನು ವಿರೋಧಿಸುವ ಪಕ್ಷಗಳು ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಿದ್ದ ಸಭೆಯು ಮುಂದೂಡಿಕೆಯಾಗಿದೆ. ಮಹಾರಾಷ್ಟ್ರದಲ್ಲಿ ಸೃಷ್ಟಿ ಆಗಿರುವ ಆಡಳಿತ ವಿರೋಧಿ ಅಲೆಯು ಎನ್‌ಸಿಪಿ ಶಾಸಕರು ಎನ್‌ಡಿಎ ಸೇರಿದ್ದರಿಂದಾಗಿ ಮರೆಯಾಗುವುದಿಲ್ಲ. ಹಾಗೆಯೇ ಬಿಜೆಪಿಯೇತರ ಪಕ್ಷಕ್ಕೆ ಇರುವ ಅವಕಾಶವು ಕೈತಪ್ಪಿ ಹೋಗಲಾರದು. ಕಾಂಗ್ರೆಸ್ ಅಥವಾ ಶರದ್ ಪವಾರ್ ಅವರ ಎನ್‌ಸಿಪಿ ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಿದೆಯೇ ಎಂಬ ಪ್ರಶ್ನೆ ಮಾತ್ರ ಇದೆ.

ಉದ್ಯೋಗ ಆಧಾರಿತ ಕಾರ್ಯಕ್ರಮಗಳು ಹೆಚ್ಚಿನ ಸಾಮಾಜಿಕ ಸುಭದ್ರತೆಯನ್ನು ಒದಗಿಸುತ್ತವೆ

ನಗರಕ್ಕೂ ಬೇಕು ಉದ್ಯೋಗ ಖಾತರಿ



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಇಂದು ನಮ್ಮನ್ನು ಕಾಡುತ್ತಿರುವ ಅತ್ಯಂತ ಗಂಭೀರವಾದ ಸಮಸ್ಯೆಗಳಲ್ಲಿ ನಿರುದ್ಯೋಗ ಒಂದು. ಲಕ್ಷಾಂತರ ಜನ ಕೆಲಸ ಕಳೆದುಕೊಂಡಿರುವುದನ್ನು ಕೆಲವು ಸಮೀಕ್ಷೆಗಳು ದಾಖಲಿಸಿವೆ. ಒಂದು ಅಂದಾಜಿನ ಪ್ರಕಾರ, ದೇಶದಲ್ಲಿ ಹಿಂದಿನ ಕೆಲವು ವರ್ಷಗಳಲ್ಲಿ ಎರಡು ಕೋಟಿಯಷ್ಟು ಮಂದಿ ಕೆಲಸ ಕಳೆದುಕೊಂಡಿದ್ದಾರೆ. ಇದು ಸಾಲದು ಎಂಬಂತೆ ಕೆಲವು ವರ್ಗಗಳ ಜನರ ವರಮಾನ ಕಡಿಮೆಯಾಗುತ್ತಿದೆ. ನಿರುದ್ಯೋಗ, ಬಡತನ, ಹಸಿವು ಇವೆಲ್ಲಾ ತೀವ್ರವಾಗಿರುವ ಸಂದರ್ಭದಲ್ಲಿ ದೇಶದ ಆರ್ಥಿಕತೆ ಸುಸ್ಥಿತಿಯಲ್ಲಿರುವುದು ಕಷ್ಟ.

ಮನರೇಗಾ (ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ) ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಉದ್ಯೋಗ ಕಲ್ಪಿಸಲು ನೆರವಾಗಿದೆ. ನಗರಗಳಲ್ಲಿರುವ ಕಾರ್ಮಿಕರು ಅತ್ಯಂತ ಅಭದ್ರತೆಯಲ್ಲಿ ಬದುಕುತ್ತಿದ್ದಾರೆ. ಉದ್ಯೋಗವನ್ನು ಒದಗಿಸುವ ಮೂಲಕ ಅವರಿಗೆ ರಕ್ಷಣೆಯನ್ನು ಕೊಡಬೇಕು. ನಗರ ಪ್ರದೇಶಗಳಲ್ಲೂ ಒಂದು ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೆ ತರುವ ಕುರಿತು ಚಿಂತಿಸಬೇಕಾಗಿದೆ. ಆದರೆ ಅದು ಮನರೇಗಾಕ್ಕಿಂತ ಭಿನ್ನವಾಗಿರಬೇಕು.

ಕೃಷಿ ಕ್ಷೇತ್ರದಲ್ಲಿ ವರ್ಷವಿಡೀ ಉತ್ಪಾದನೆ ಇರುವುದಿಲ್ಲ. ಅದು ಕೆಲವು ಕಾಲದಲ್ಲಿ ಮಾತ್ರ ನಡೆಯುವ ಕ್ರಿಯೆ. ಹಾಗಾಗಿ ಮನರೇಗಾವು ತಾತ್ಕಾಲಿಕವಾಗಿ ಕೆಲಸ ಕಳೆದುಕೊಂಡವರಿಗೆ, ಕ್ಷಾಮದ ಸಮಯದಲ್ಲಿ ಅಥವಾ ಕೃಷಿ ಕ್ಷೇತ್ರದಲ್ಲಿ ಕೆಲಸದ ಕೊರತೆಯಿದ್ದಾಗ ವಿಮೆಯಂತೆ ಬಳಕೆಯಾಗುತ್ತಿದೆ. ಆದರೆ ನಗರದ ಉತ್ಪಾದನೆ ಅರೆಕಾಲಿಕವಲ್ಲ. ಹಾಗಾಗಿ ನಗರಗಳಲ್ಲಿ ಅದನ್ನು ಒಂದು ತಾತ್ಕಾಲಿಕ ಪರಿಹಾರವಾಗಿ ಯೋಚಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿನ ನಿರುದ್ಯೋಗ ಹಾಗೂ ಆರ್ಥಿಕ ಬಿಕ್ಕಟ್ಟಿಗೆ ಒಂದು ಪರಿಹಾರವಾಗಿ ಯೋಚಿಸಬೇಕಾಗಿದೆ.

ಕೆಲವು ರಾಜ್ಯಗಳಲ್ಲಿ ಇಂತಹ ಪ್ರಯತ್ನಗಳು ನಡೆದಿವೆ. ಕೇರಳದಲ್ಲಿ ಅಯ್ಯಂಕಾಳಿ ನಗರ ಉದ್ಯೋಗ ಖಾತರಿ ಯೋಜನೆ ರೂಪಿಸಲಾಗಿತ್ತು. ಹಿಮಾಚಲ ಪ್ರದೇಶ, ಜಾರ್ಖಂಡ್, ಒಡಿಶಾ ಸೇರಿದಂತೆ ಕೆಲವು ರಾಜ್ಯಗಳ ನಗರ ಪ್ರದೇಶಗಳಲ್ಲಿ ಉದ್ಯೋಗ ಖಾತರಿ ನೀಡುವ ಪ್ರಯತ್ನಗಳು ನಡೆದಿವೆ. ಆದರೆ ಅನುದಾನದ ಕೊರತೆಯಿಂದ ಇವು ಬಹುಮಟ್ಟಿಗೆ ಸಾಂಕೇತಿಕ ಯೋಜನೆಗಳಾಗಿವೆ. ಈ ದಿಸೆಯಲ್ಲಿ ಅರ್ಥಶಾಸ್ತ್ರಜ್ಞ ಜಾನ್ ಡ್ರೇಜ್ ಅವರು ಡ್ಯುಯೆಟ್, ಅಂದರೆ ಡೀಸೆಂಟ್ರಲೈಸ್ಡ್ ಅರ್ಬನ್ ಎಂಪ್ಲಾಯ್‌ಮೆಂಟ್ ಆ್ಯಂಡ್ ಟ್ರೈನಿಂಗ್‌ನ (ವಿಕೇಂದ್ರೀಕೃತ ನಗರ ಉದ್ಯೋಗ ಹಾಗೂ ತರಬೇತಿ ಯೋಜನೆ) ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. ಅದು ಪ್ರಯೋಗಿಸಿ ನೋಡಲು ತಕ್ಕುದಾದ ಯೋಜನೆ. ಅದರ ವಿನ್ಯಾಸ ಕೂಡ ಸರಳ. ಅದು ಸ್ಥೂಲವಾಗಿ ಹೀಗಿದೆ:

ಸರ್ಕಾರವು ಉದ್ಯೋಗದ ಸ್ಟ್ಯಾಂಪುಗಳನ್ನು ಬಿಡುಗಡೆ ಮಾಡುತ್ತದೆ. ಅವುಗಳನ್ನು ಶಾಲೆಗಳು, ಕಾಲೇಜುಗಳು, ಹಾಸ್ಟೆಲ್‌ಗಳು, ವಸತಿಗೃಹಗಳು, ಬಂದೀಖಾನೆಗಳು, ಮ್ಯೂಸಿಯಂಗಳು, ಮುನಿಸಿಪಾಲಿಟಿಗಳು, ಸರ್ಕಾರಿ ಇಲಾಖೆಗಳು, ಆರೋಗ್ಯ ಕೇಂದ್ರಗಳು, ಸಾರಿಗೆ ನಿಗಮಗಳು, ನಗರದ ಸ್ಥಳೀಯ ಸಂಸ್ಥೆಗಳಂತಹ ಕೆಲವು ಅನುಮೋದಿತ ಸರ್ಕಾರಿ ಸಂಸ್ಥೆಗಳಿಗೆ ವಿತರಿಸುತ್ತದೆ. ಒಂದು ಉದ್ಯೋಗ ಸ್ಟ್ಯಾಂಪು ಅಂದರೆ ಒಬ್ಬ ವ್ಯಕ್ತಿಯ ಒಂದು ದಿನದ ಕೆಲಸ. ಕೆಲಸ ಬಯಸುವ ಜನ ಅದಕ್ಕಾಗಿ ನಿಗದಿಯಾದ ಸ್ವತಂತ್ರ ನೇಮಕಾತಿ ಏಜೆನ್ಸಿಗಳಲ್ಲಿ ನೋಂದಾಯಿಸಿಕೊಳ್ಳಬೇಕು. ಈ ನೋಂದಾಯಿತ ಪಟ್ಟಿಯಿಂದ ಅನುಮೋದಿತ ಸಂಸ್ಥೆಗಳಿಗೆ ಕೆಲಸಗಾರರನ್ನು ಅವರ ಅವಶ್ಯಕತೆಗೆ ತಕ್ಕಂತೆ ನೇಮಿಸಲಾಗುತ್ತದೆ. ಕೆಲಸದ ನಂತರ ಆ ಸಂಸ್ಥೆಗಳು ತಮ್ಮ ದೃಢೀಕರಣದೊಂದಿಗೆ ಸ್ಟ್ಯಾಂಪುಗಳನ್ನು ಕೆಲಸಗಾರರಿಗೆ ನೀಡುತ್ತವೆ. ಕೆಲಸಗಾರರು ಈ ದೃಢೀಕೃತ ದಾಖಲೆಗಳನ್ನು ಹಣದ ಪಾವತಿಗಾಗಿ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಸರ್ಕಾರ ಕೂಲಿಯನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತದೆ.

ಕೆಲವು ಉದ್ಯೋಗಗಳನ್ನು ಅರೆಕಾಲಿಕ ಉದ್ಯೋಗವನ್ನಾಗಿಯೂ ಯೋಚಿಸಬಹುದು. ಆಗ ಮಹಿಳೆಯರು ಪಾಲ್ಗೊಳ್ಳಲು ಅನುಕೂಲವಾಗುತ್ತದೆ. ಮಹಿಳೆಯರಿಗೆ ಆದ್ಯತೆ ಕೊಡುವ ದಿಸೆಯಲ್ಲೂ ಯೋಚಿಸಬಹುದು. ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಹೆಚ್ಚಾಗಿ ಪುರುಷರನ್ನು ಅವಲಂಬಿಸಿದ್ದಾರೆ. ಇಂತಲ್ಲಿ ಲಿಂಗ ಅಸಮಾನತೆ ಹಾಗೂ ಮಹಿಳೆಯರ ಶೋಷಣೆಯನ್ನು ಪರಿಹರಿಸಲು ಅನುಕೂಲವಾಗಬಹುದು.

ನಗರಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಎರಡು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಡ್ಯುಯೆಟ್ ಪ್ರಯತ್ನಿಸುತ್ತಿದೆ. ನಿರುದ್ಯೋಗ ಸಮಸ್ಯೆ ಮತ್ತು ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವ ಮೂಲ ಸೌಕರ್ಯಗಳು. ದೇಶದ ಸಾರ್ವಜನಿಕ ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳು (ಪಾರ್ಕುಗಳು, ಕೆರೆಗಳು, ಬಾವಿಗಳು, ಆಟದ ಮೈದಾನಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು ಮುಂತಾದವು) ಸರಿಯಾದ ಉಸ್ತುವಾರಿ ಇಲ್ಲದೆ ತುಂಬಾ ದುಃಸ್ಥಿತಿಯಲ್ಲಿವೆ. ನಗರದಲ್ಲಿ ಉದ್ಯೋಗ ಸೃಷ್ಟಿಸುವ ಕೆಲಸವನ್ನು ಇಲ್ಲಿಂದ ಪ್ರಾರಂಭಿಸಬಹುದು. ಸಾರ್ವಜನಿಕ ಸ್ಥಳಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳುವುದರ ಜೊತೆಗೆ ಸಾರ್ವಜನಿಕ ಆರೋಗ್ಯ, ಪರಿಸರ ಸುಧಾರಣೆ, ಗೃಹಕೃತ್ಯದ ಕೆಲಸಗಳೂ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಉತ್ಪಾದಕ ಕೆಲಸಗಳಿಗೆ ತುಂಬಾ ಅವಕಾಶಗಳಿವೆ. ಅನುಮೋದಿತ ಸಂಸ್ಥೆಗಳು ಸಕ್ರಿಯವಾದಷ್ಟೂ ಹೆಚ್ಚೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತವೆ. ಜೊತೆಗೆ ಅಂತಹ ಉದ್ಯೋಗಗಳು ಹೆಚ್ಚು ಉತ್ಪಾದಕವೂ ಆಗುತ್ತವೆ. ಜೊತೆಗೆ ಇದು ಸರ್ಕಾರದ ಯೋಜನೆಯಾಗುವುದರಿಂದ ಕಾರ್ಮಿಕರಿಗೆ ಕನಿಷ್ಠ ಕೂಲಿ ಹಾಗೂ ಇತರ ಸೌಲಭ್ಯಗಳು ಸಿಗುತ್ತವೆ.



ಈ ಯೋಜನೆಯ ಕುರಿತಂತೆ ಹಲವು ಆತಂಕಗಳು ವ್ಯಕ್ತವಾಗಿವೆ. ಉದಾಹರಣೆಗೆ, ಹಳ್ಳಿಗಳಿಂದ ನಗರದ ಕಡೆಗಿನ ವಲಸೆ ಹೆಚ್ಚುತ್ತದೆ. ನಗರದಲ್ಲಿನ ಬಡವರ ಬದುಕನ್ನು ಸುಧಾರಿಸುವ ದೃಷ್ಟಿಯಿಂದ ಏನೇ ಕ್ರಮ ತೆಗೆದುಕೊಂಡರೂ ಅದು ನಗರದ ಕಡೆಗೆ ವಲಸೆಯನ್ನು ಸ್ವಲ್ಪಮಟ್ಟಿಗೆ ಉತ್ತೇಜಿಸುತ್ತದೆ. ಆದರೆ ಆ ಕಾರಣಕ್ಕೆ ನಗರದ ಬಡವರಿಗೆ ಸೌಲಭ್ಯವನ್ನು ಒದಗಿಸುವ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ವಾದಿಸಲಾಗದು. ಒಬ್ಬ ವ್ಯಕ್ತಿಗೆ ವರ್ಷಕ್ಕೆ ನೂರೋ ನೂರೈವತ್ತೋ ದಿನಗಳ ಕೆಲಸವನ್ನು ನೀಡಲಾಗುತ್ತದೆ ಎಂದು ನಿರ್ಧರಿಸುವ ಮೂಲಕ ಯೋಜನೆಯ ಅಪಬಳಕೆಯನ್ನು ತಪ್ಪಿಸಬಹುದು.


ಮತ್ತೊಂದು ಆತಂಕವೆಂದರೆ, ಭ್ರಷ್ಟಾಚಾರದ ಸಾಧ್ಯತೆ. ಇಂತಹ ಸಾಧ್ಯತೆ ಎಲ್ಲ ಕಾರ್ಯಕ್ರಮಗಳಲ್ಲೂ ಇರುತ್ತದೆ. ಆದರೆ ಸ್ವತಂತ್ರ ನೇಮಕಾತಿ ಏಜೆನ್ಸಿಯು ಭ್ರಷ್ಟಾಚಾರಕ್ಕೆ ಒಂದು ತಡೆಯಾಗಿ ಕೆಲಸ ಮಾಡುತ್ತದೆ. ಅದು ಉದ್ಯೋಗದಾತ ಹಾಗೂ ಕೆಲಸಗಾರರು ಶಾಮೀಲಾಗುವುದನ್ನು ತಪ್ಪಿಸುವ ಸಾಧನವಾಗಬಹುದು. ಉದ್ಯಮಿ ತನಗೆ ಬೇಕಾದ ಕೆಲಸಗಾರರನ್ನು ನೇಮಕ ಮಾಡಿಕೊಳ್ಳಬೇಕಾದರೆ, ಬರೀ ಕೆಲಸಗಾರರನ್ನು ಮಾತ್ರವಲ್ಲದೆ ನೇಮಕಾತಿ ಏಜೆನ್ಸಿಯನ್ನೂ ಬುಟ್ಟಿಗೆ ಹಾಕಿಕೊಳ್ಳಬೇಕಾಗುತ್ತದೆ. ಅದು ಕಷ್ಟಸಾಧ್ಯ. ಜೊತೆಗೆ ಸ್ವತಂತ್ರ ಪರಿಶೀಲನೆ, ಸಾಮಾಜಿಕ ಪರಿಶೋಧನೆಯಂತಹ ಕ್ರಮಗಳ ಮೂಲಕ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು.

ಐರೋಪ್ಯ ದೇಶಗಳಲ್ಲಿ ಸೇವಾ ವೋಚರುಗಳ ಪದ್ಧತಿ ಇದೆ. ಅದು ತುಂಬಾ ಜನಪ್ರಿಯವಾಗಿದೆ. ಆದರೆ ಅಲ್ಲಿ ಅದನ್ನು ಸಾರ್ವಜನಿಕ ಸಂಸ್ಥೆಗಳು ಬಳಸುವುದಿಲ್ಲ, ಕುಟುಂಬಗಳು ಬಳಸುತ್ತವೆ. ಅಡುಗೆ ಮಾಡುವುದು, ಶುಚಿಗೊಳಿಸುವಂತಹ ಗೃಹಕೃತ್ಯಗಳಿಗೆ ಅದನ್ನು ಬಳಸಲಾಗುತ್ತಿದೆ. ಸೇವಾ ವೋಚರುಗಳು ಪುಕ್ಕಟೆಯಲ್ಲ. ಆದರೆ ಅದಕ್ಕೆ ದೊಡ್ಡ ಪ್ರಮಾಣದ ರಿಯಾಯಿತಿ ನೀಡಲಾಗಿರುತ್ತದೆ. ಹಾಗಾಗಿ ಅವನ್ನು ಬಳಸಿಕೊಂಡು ಮನೆಕೆಲಸ ಮಾಡಿಸಿಕೊಳ್ಳುವುದು ತುಂಬಾ ಅಗ್ಗ.

ಆದರೆ ಡ್ಯುಯೆಟ್ ಯೋಜನೆಯಲ್ಲಿ ಈ ಸ್ಟ್ಯಾಂಪುಗಳನ್ನು ಬಳಸುವುದು ಬರೀ ಸರ್ಕಾರಿ ಸಂಸ್ಥೆಗಳು. ಇದರ ಯಶಸ್ಸು ಸರ್ಕಾರಿ ಸಂಸ್ಥೆಗಳ ಬದ್ಧತೆಯ ಮನೋಭಾವವನ್ನು ಆಧರಿಸಿರುತ್ತದೆ. ಅದನ್ನು ಕೆಲವು ಕಡೆಯಾದರೂ ಪ್ರಯತ್ನಿಸಿ ನೋಡಿದರೆ ಮಾತ್ರ ಅದು ಎಷ್ಟರಮಟ್ಟಿಗೆ ಪರಿಣಾಮಕಾರಿ ಕಾರ್ಯಕ್ರಮ ಅನ್ನುವುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯ. ಪ್ರಾರಂಭದಲ್ಲಿ ಇದನ್ನು ಸಣ್ಣ ನಗರಗಳ ಮಟ್ಟದಲ್ಲಿ ಪ್ರಯತ್ನಿಸಿ ನೋಡಬಹುದು. ನಿರ್ವಹಣೆ ಸುಲಭವಾಗುತ್ತದೆ. ಸಾಮಾಜಿಕ ಸುಭದ್ರತೆಗೆ ಉದ್ಯೋಗಾಧಾರಿತ ಕಾರ್ಯಕ್ರಮಗಳು ಅನಿವಾರ್ಯ.

ಡ್ಯುಯೆಟ್ ಒಂದು ಉದ್ಯೋಗ ಖಾತರಿ ಯೋಜನೆಯಲ್ಲ. ಆದರೆ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸುವ ದಿಸೆಯಲ್ಲಿ ಒಂದು ಉಪಯುಕ್ತ ಹೆಜ್ಜೆ ಆಗಬಹುದು. ಕರ್ನಾಟಕ ಸರ್ಕಾರದ ಯುವನಿಧಿಯಂತಹ ಕಾರ್ಯಕ್ರಮಗಳ ಜೊತೆಗೆ ಇಂತಹ ಉದ್ಯೋಗ ಆಧಾರಿತ ಕಾರ್ಯಕ್ರಮಗಳು ಹೆಚ್ಚಿನ ಸಾಮಾಜಿಕ ಸುಭದ್ರತೆಯನ್ನು ಒದಗಿಸುತ್ತವೆ.

ಚುರುಮುರಿ



ಭ್ರಮೆಯ ಜಡ್ಡು

• ಲಿಂಗರಾಜು ಡಿ.ಎಸ್.

'ಕಮಲದ ಮನೇಲಿ ಮೂಲ, ವಲಸೆ ಜಗಳದೇಲಿ ಅವರವರೇ ಮದ್ದು ಅರಿತಾವ್ರಂತೆ ಸಾ! ಹೈಕಮಾಂಡಿಗೂ ಕ್ಯಾರೇ ಅನ್ನದೆ ಗೊಂದಲದ ದಂಗಲ್ ಮಾಡ್ತಾವ್ರೆ' ಅಂತ ಬ್ರೇಕಿಂಗ್ ನ್ಯೂಸ್ ವದರಿದೆ.

'ಇದು ಹಳೇ ಸುದ್ದಿ ತಗ. ಕಮಲದ ಮನೇರು ಅಧಿಕಾರಕ್ಕೆ ಬರೋ ಆತುರದೇಲಿ ಬೇಕಾಯ್ತವೆ ಅಂತ ಕಂಡ ಕಸವೆಲ್ಲಾ ತಂದು ತುಂಬಿಕ್ಯಂದಿದ್ದರ ಎಫೆಕ್ಟು ಇದು!' ಅಂತು ಯಂಟಪ್ಪಣ್ಣ.

'ಹ್ಲೂಂಕನೇಳಿ, ಬಣ ರಾಜಕೀಯ, ವೈಮನಸ್ಸು, ಕೊಂದಾಣಿಕೆ ಕಸ ಜಾಸ್ತಿಯಾಗ್ಯದೆ. ಪಕ್ಷದ ಎಂಟು ದಿಕ್ಕಿನಗೂ ಕಷ್ಟದಿಗ್ಗಜಗಳೇ ಕೂತವಂತೆ' ಅಂತಂದ ಚಂದ್ರು.

'ಈ ಜಡ್ಡು ಕೈ ಪಕ್ಷನೂ ಬುಟ್ಟಿಲ್ಲ. ಇಲ್ಲೂ ಕಷ್ಟಾವಧಾನಿಗಳು ಅನ್‌ಟೈಮಲ್ಲಿ ಗಂಟೆ ಹೊಡೀತಿರತರೆ. ತಿಂಗಳಾದ್ರೂ ಅಕ್ಕಿ ಹಾರಿಸದೇ ಮುಗಿದಿಲ್ಲ, ಇನ್ನು ಆಡಳಿತ ಮಾಡದ್ಯಾವಾಗ!' ಅಂತಂದೆ.

'ಅಧಿಕಾರ ಇವರ ಕೈಯ್ಯಲ್ಲಿದ್ದಾಗ ನಲವತ್ತು ಪರ್ಸೆಂಟ್ ಆರೋಪ ಯಾಕೆ ತನಿಖೆ ಮಾಡ್ತಿಲ್ಲ? ಪೊಲೀಸ್ ನೇಮಕಾತಿ ಹಗರಣ ಏನಾಯ್ತು? ಪೇಸಿಎಂ ಅಂತ ಚುಚ್ಚಿದ್ರಲ್ಲಾ ಆಮೇಲೇನಾತು? ಡ್ರಗ್ಸು ಕೇಸು ಮುಗೀತಾ? ಅಧಿಕಾರಿಗಳ ಭ್ರಷ್ಟಾಚಾರ ಯಾಕೆ ಜಾಸ್ತಿ ಆಯ್ತಾ ಅದೆ? ಟೆಂಡರ್ ಬ್ಲಂಡರ್ ಏನಾಯ್ತು?' ಯಂಟಪ್ಪಣ್ಣ ತೌಡು ಕುಟ್ಟಿತು.

'ಕಾಂಗ್ರೇಸಾಗಲಿ, ಬಿಜೆಪಿಯಾಗಲಿ ಜನಕ್ಕೆ ಒಳ್ಳೇದು ಮಾಡಬಕು ಕನಣ್ಣ. ಅದ ಮರೆತ್ಕಂದರೆ ಸೋತು ಮನೆಗೋಯ್ತರೆ' ಅಂದ ಚಂದ್ರು.

'ಮೋದಿ ನೋಡಿ ಮರುಳಾಗಿ ಜನ ತಮಗೇ ವೋಟಾಕ್ತರೆ ಅಂತ ಬಿಜೆಪಿಗಳು ಭ್ರಮೆಯೊಳಗಿದ್ದು ಜನಕ್ಕೆ ಮಕವ ತೋರಿಸದೇ ಸೋತ್ರು. ಈಗ ನಾಯಕನೇ ಇಲ್ಲದೆ ಪಕ್ಷ ಬೇಕಾರಾಗ್ಯದೆ' ಅಂದ್ರು ತುರೇಮಣೆ.

'ಇಂತೇ ರಾಜಕೀಯ ಭ್ರಮೆಯ ಎಡವಟ್ಟುಗಳು ಹಿಂದೆ ಯಾವತ್ತನ್ನಾ ಆಗಿದ್ವಾ ಸಾ?' ನನ್ನ ಅನುಮಾನ ಕೇಳಿದೆ.

'ಇಂದಿರಾ ಗಾಂಧಿನೇ ದೇಶದ ಭವಿಷ್ಯ ಅಂತ ಕಾಂಗ್ರೆಸ್ಸಿನೋರು ಒಂದು ಕಾಲದೇಲಿ ಹೇಳಿಕ್ಯಂದು ಮಣ್ಣುಪಾಲಾಗಿದ್ರು. ಈಗ ಬಿಜೆಪಿ ಸರದಿ. ಹಿಸ್ಟರಿ ರಿಪೀಟ್ಸ್' ತುರೇಮಣೆ ಸತ್ಯ ನುಡಿದರು.

ದಿನದ ಟ್ವೀಟ್

ಬೆಂಬಲಕ್ಕೆ ನಿದರ್ಶನ



ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರು ಸಂವಿಧಾನವನ್ನು ಮತ್ತೆ ಮತ್ತೆ ಉಲ್ಲಂಘಿಸಿದ್ದಾರೆ. ಸಚಿವರೊಬ್ಬರನ್ನು ವಜಾಗೊಳಿಸಿದ್ದು ಹಾಗೂ ನಂತರ ವಜಾ ಆದೇಶವನ್ನು ಅಮಾನತಿನಲ್ಲಿ ಇರಿಸಿದ್ದು ತೀರಾ ಈಚಿನ ಉದಾಹರಣೆ. ಅಕ್ರಮ ಹೆಜ್ಜೆಗಳನ್ನು ಇರಿಸಿದ ಅವರನ್ನು ಇನ್ನೂ ವಾಪಸ್ ಕರೆಸಿಕೊಂಡಿಲ್ಲ ಎಂಬುದೇ ಅವರಿಗೆ ದೇಶದ ಅತ್ಯುನ್ನತ ಸ್ಥಾನದಲ್ಲಿರುವವರ ಬೆಂಬಲ ಇದೆ ಎಂಬುದನ್ನು ಸೂಚಿಸುತ್ತಿದೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಒಂದು ಮಳೆ ಬಂದರೆ ಸಾಕು, ಮಂಗಳೂರಿನ ಪಂಪ್‌ವೆಲ್ ವೃತ್ತ ಜಲಾವೃತ! ನಮ್ಮ ಸ್ಮಾರ್ಟ್ ಮಂಗಳೂರಲ್ಲಿ ನೀರೆಲ್ಲ ರಸ್ತೆಯಲ್ಲೇ ಹರಿಯಬೇಕು, ಚರಂಡಿಯೊಳಗೆ ಹೋಗಲು ಸಾಧ್ಯವೇ ಇಲ್ಲ. ಯಾವುದೇ ಅರ್ಹತೆ ಇಲ್ಲದ ಎಂಜಿನಿಯರುಗಳು, ನಗರ ಯೋಜನೆಯವರು, ಯಾವುದೇ ಬದ್ಧತೆ ಇಲ್ಲದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇರುವಾಗ ರೋಡು ತೋಡಾಗದೆ ಬೇರೇನಾಗಲು ಸಾಧ್ಯ?

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಶನಿವಾರ, 4-7-1998

• **ಮಲೆನಾಡಿನಲ್ಲಿ ಮಳೆ: ತುಂಬಿದ ನದಿಗಳು– ನೆರೆ ಹಾವಳಿ ಭೀತಿ**

ಬೆಂಗಳೂರು, ಜುಲೈ 3– ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಬೀಳುತ್ತಿರುವ ಭಾರಿ ಮಳೆಯಿಂದಾಗಿ ಭದ್ರಾ ಮತ್ತು ತುಂಗಾ ನದಿಗಳು ತುಂಬಿ ಹರಿಯುತ್ತಿದ್ದು ನೆರೆ ಭೀತಿ ಉಂಟಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲೂ ಮಳೆ ಚುರುಕುಗೊಂಡಿದೆ. ಕೃಷ್ಣರಾಜ ಸಾಗರ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದೆ.

ಆದರೆ ಕೊಡಗು ಮತ್ತು ಕರಾವಳಿ ಪ್ರದೇಶಗಳಲ್ಲಿ ಇಂದು ಸ್ವಲ್ಪ ಮಟ್ಟಿಗೆ ಬಿಡುವು ಕೊಟ್ಟಿದ್ದು, ಇಲ್ಲಿನ ನದಿಗಳಲ್ಲಿ ಅಬ್ಬರವೂ ಕಡಿಮೆಯಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 4-7-1973

• **ರಾಜ್ಯದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಬಗ್ಗೆ ಹೈಕೋರ್ಟ್ ಆಜ್ಞೆಗೆ ತಡೆ**

ನವದೆಹಲಿ, ಜುಲೈ 3– ಮೈಸೂರು ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯನ್ನು ಪ್ರತಿಬಂಧಿಸುವ ರಾಜ್ಯದ ಹೈಕೋರ್ಟಿನ ಆಜ್ಞೆಗೆ ಸುಪ್ರೀಂ ಕೋರ್ಟ್ ಇಂದು ಏಕಪಕ್ಷೀಯ ತಡೆಯಾಜ್ಞೆ ನೀಡಿತು.

ಹತ್ತು ವರ್ಷಗಳಿಗಿಂತ ಹೆಚ್ಚುಕಾಲ ಒಂದು ತಾಲ್ಲೂಕಿನಲ್ಲಿರುವ ಶಿಕ್ಷಕರನ್ನು ವರ್ಗಾಯಿಸುವ ಹಾಗೂ ಹೊಸದಾಗಿ ನೇಮಕಗೊಂಡ ಶಿಕ್ಷಕರನ್ನು ಅವರ ಹುಟ್ಟಿದ ಊರು ಇರುವ ತಾಲ್ಲೂಕುಗಳಿಗೇ ವರ್ಗ ಮಾಡದೇ ಇರುವ ಸರ್ಕಾರದ ಅಧಿಕಾರವನ್ನು ಪ್ರಶ್ನಿಸಿ ಶಿವಲಿಂಗಪ್ಪ ಮತ್ತು ಇತರ ಇಪ್ಪತ್ತೊಮ್ಮರು ಪ್ರಾಥಮಿಕ ಶಾಲಾ ಶಿಕ್ಷಕರು ಅರ್ಜಿ ಸಲ್ಲಿಸಿದ್ದರು.

ಸರ್ಕಾರದ ಈ ಆಜ್ಞೆ ಸಂವಿಧಾನದ 14, 15, 16ನೇ ವಿಧಿಯ ಉಲ್ಲಂಘನೆಯಾಗಿದೆ ಹಾಗೂ ಅಲ್ಪ ವರಮಾನದ ಶಿಕ್ಷಕರಿಗೆ ವಸತಿ ಸೌಲಭ್ಯ ನೀಡದೆ ಬೇರೆಡೆ ವರ್ಗಾಯಿಸಬಾರದೆಂಬ ನೀತಿಗೆ ವಿರುದ್ಧವಾಗಿದೆಯೆಂಬುದು ಶಿಕ್ಷಕರ ವಾದ. ಹೈಕೋರ್ಟ್ ಶಿಕ್ಷಕರ ರಿಟ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿ, ವರ್ಗಾವಣೆ ಆಜ್ಞೆ ಪ್ರತಿಬಂಧಿಸಿ ತಡೆಯಾಜ್ಞೆ ನೀಡಿತ್ತು.

• **ಕನ್ನಡದಲ್ಲಿ ಆಡಳಿತ ಕುರಿತ ಅರಸು ಹೇಳಿಕೆ 'ತೂಕಡಿಸುವವರಿಗೆ ಹಾಸಿಗೆ ಹಾಕಿಕೊಟ್ಟಂತೆ'**

ಬೆಂಗಳೂರು, ಜುಲೈ 3– ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸುವ ಬಗ್ಗೆ ಈಚೆಗೆ ಧಾರವಾಡದಲ್ಲಿ ಮುಖ್ಯಮಂತ್ರಿಯವರು ಮಾಡಿದ ಭಾಷಣ 'ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣ ಅವರು ಇಂದು ಟೀಕಿಸಿದರು.

'ಇತ್ತೀಚೆಗೆ ಧಾರವಾಡದಲ್ಲಿ ನಡೆದ ಸಭೆಯೊಂದರಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಮಾತನಾಡುತ್ತಾ, ಕನ್ನಡವನ್ನು ಪರಿಣಾಮಕಾರಿಯಾಗಿ ಆಡಳಿತ ಭಾಷೆಯನ್ನಾಗಿ ಬಳಸಲು ಕೆಲವು ಲೋಪದೋಷ, ಕುಂದುಕೊರತೆಗಳಿಂದ ಅಡ್ಡಿಯಾಗಿದೆಯೆಂದೂ, ಕೆಲವು ಇಂಗ್ಲಿಷ್ ಪದಗಳಿಗೆ ಸಮಾನಾರ್ಥದ ಹಾಗೂ ಬಳಕೆಯಲ್ಲಿರುವ ಕನ್ನಡ ಪದಗಳ ಪಟ್ಟಿ ತಯಾರಾಗಬೇಕೆಂದೂ ಹೇಳಿದರು.

ಸಂಗತ

ಗ್ರಾಮ ನ್ಯಾಯಾಲಯ ಗ್ರಾಮ ತಲುಪೇ ಇಲ್ಲ!

ದೇಶದ ನ್ಯಾಯಾಂಗ ವ್ಯವಸ್ಥೆಗೆ ಗ್ರಾಮ ನ್ಯಾಯಾಲಯಗಳ ಅಗತ್ಯವಿದ್ದು, ಇದರಿಂದ ಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬಹುದು

• ಡಾ. ಎನ್.ಸತೀಶ್ ಗೌಡ

ಅಶಕ್ತರು ನ್ಯಾಯ ಪಡೆಯಲು ನ್ಯಾಯಾಲಯಗಳಿಗೆ ಹೋಗುವ ಬದಲು ಖುದ್ದು ನ್ಯಾಯಾಲಯಗಳೇ ಅವರ ಬಳಿಗೆ ಬರುವಂತೆ ಮಾಡುವ ಸದುದ್ದೇಶದಿಂದ ಹಾಗೂ ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಅನುಷ್ಠಾನ ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ಗ್ರಾಮ ನ್ಯಾಯಾಲಯ ಕಾಯ್ದೆ- 2008 ಅನ್ನು ಜಾರಿಗೆ ತಂದಿತು. ಪ್ರತಿಯೊಬ್ಬ ವ್ಯಕ್ತಿಗೂ ತ್ವರಿತ ಗತಿಯಲ್ಲಿ ಗುಣಮಟ್ಟದ ನ್ಯಾಯ ಸಿಗಬೇಕು ಎಂದು ಭಾರತ ಕಾನೂನು ಆಯೋಗ ನೀಡಿರುವ ಸಲಹೆಯ ಮೇರೆಗೆ ಈ ಕಾಯ್ದೆ ಅನುಷ್ಠಾನಗೊಂಡಿತು. ಅದರ ಪ್ರಕಾರ, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಬಹುದಾಗಿದೆ. ಆಯಾ ರಾಜ್ಯದ ಹೈಕೋರ್ಟ್‌ನೊಂದಿಗೆ ಸಮಾಲೋಚಿಸಿ ಈ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸುವ ಹೊಣೆ ರಾಜ್ಯ ಸರ್ಕಾರಗಳ ಮೇಲಿದೆ.

ರಾಜ್ಯ ಸರ್ಕಾರವು ಹೈಕೋರ್ಟ್ ಸಲಹೆ ಮೇರೆಗೆ ಗ್ರಾಮ ನ್ಯಾಯಾಲಯದ ಅಧ್ಯಕ್ಷರನ್ನಾಗಿ ನ್ಯಾಯಾಧಿಕಾರಿಯೊಬ್ಬರನ್ನು ನೇಮಕ ಮಾಡುತ್ತದೆ. ಇದು ಒಂದು ಬಗೆಯ ಸಂಚಾರಿ ನ್ಯಾಯಾಲಯವಾಗಿದ್ದು, ಕ್ರಿಮಿನಲ್ ಮತ್ತು ಸಿವಿಲ್ ನ್ಯಾಯಾಲಯಗಳ ಅಧಿಕಾರವನ್ನು ಚಲಾಯಿಸುತ್ತದೆ. ಸಿವಿಲ್ ವಿವಾದಗಳಾದ ಆಸ್ತಿ ಖರೀದಿ ಹಕ್ಕು, ನೀರಾವರಿ ಕಾಲುವೆಯಿಂದ ನೀರನ್ನು ತೆಗೆದುಕೊಳ್ಳುವುದು ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದ ವಿವಾದಗಳು, ವೇತನ ಪಾವತಿ ಕಾಯ್ದೆ ಹಾಗೂ ಕನಿಷ್ಠ ವೇತನ ಕಾಯ್ದೆ ಅಡಿ ಬರುವ ಹಕ್ಕುಗಳು, ವ್ಯಾಪಾರ ವಹಿವಾಟು ಅಥವಾ ಆ ಸಂಬಂಧದ ಸಾಲದಿಂದ ಉಂಟಾಗುವ ಹಣದ ದಾವೆಗಳು, ಭೂಮಿಯ ಸಾಗುವಳಿಯಲ್ಲಿ ಪಾಲುದಾರಿಕೆಯಿಂದ ಉಂಟಾಗುವ ವಿವಾದಗಳು ಹಾಗೂ ಎರಡು ವರ್ಷಗಳ ಶಿಕ್ಷೆ ಮೀರದ ಅಪರಾಧಗಳು, ಕಳ್ಳತನ, ಕಳವು ಮಾಲು ಹಾಗೂ ಸಣ್ಣಪುಟ್ಟ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರ ಇದಕ್ಕೆ ಇದೆ. ಗ್ರಾಮ ನ್ಯಾಯಾಲಯವು ಸಿವಿಲ್ ವ್ಯಾಜ್ಯದ ಸಂಬಂಧ ನೀಡುವ ತೀರ್ಪಿನ ವಿರುದ್ಧ ಜಿಲ್ಲಾ ನ್ಯಾಯಾಲಯದಲ್ಲಿ, ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬಹುದು.

ಗ್ರಾಮ ನ್ಯಾಯಾಲಯಗಳ ಸ್ಥಿತಿ ಸುಧಾರಣೆಗೆ ಕೇಂದ್ರ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಆರ್ಥಿಕ ನೆರವು ನೀಡುವ ಮೂಲಕ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ರಾಜ್ಯಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಆದರೆ, ಈ ಕಾರ್ಯಾಚರಣೆಯ ಸಂಪೂರ್ಣ ಯಶಸ್ಸು ಕ್ರಮಬದ್ಧವಾದ ಅನುಷ್ಠಾನವನ್ನು ಅವಲಂಬಿಸಿರುತ್ತದೆ. ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಕೇರಳದಲ್ಲಿ ಹೆಚ್ಚಿನ ಗ್ರಾಮ ನ್ಯಾಯಾಲಯಗಳು ಸ್ಥಾಪನೆಯಾಗಿವೆ. ಕರ್ನಾಟಕ ಈ ವಿಚಾರದಲ್ಲಿ ತುಂಬಾ ಹಿಂದೆ ಉಳಿದಿದೆ.

ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ತೆಗೆದುಕೊಳ್ಳುತ್ತಿರುವ ಕ್ರಮಗಳ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ಎಲ್ಲಾ ರಾಜ್ಯ ಸರ್ಕಾರಗಳು ಹಾಗೂ ಹೈಕೋರ್ಟ್‌ಗಳಿಂದ ಮಾಹಿತಿ ಕೇಳಿದೆ. ಈ ನ್ಯಾಯಾಲಯಗಳನ್ನು ಗ್ರಾಮ ಮಟ್ಟಕ್ಕೆ ಕೊಂಡೊಯ್ಯುವುದಕ್ಕೆ ಪೂರಕವಾಗಿ ಕೆಲವು ನಿರ್ದೇಶನಗಳನ್ನು ನೀಡಿದೆ. ಇತ್ತೀಚೆಗೆ ನಡೆದ ಅಖಿಲ ಭಾರತ ಕಾನೂನು ಸಚಿವರ ಸಭೆಯಲ್ಲಿ ಗ್ರಾಮ ನ್ಯಾಯಾಲಯಗಳ ಸ್ಥಾಪನೆ ಕುರಿತು ಚರ್ಚೆ ನಡೆದಿದೆ. ರಾಜ್ಯದಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯ ಇರುವೆಡೆ ಹಂತ ಹಂತವಾಗಿ ಗ್ರಾಮ ನ್ಯಾಯಾಲಯಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಯೋಜಿಸುತ್ತಿದೆ ಎಂದು ಹಿಂದಿನ ಕಾನೂನು ಸಚಿವರು ತಿಳಿಸಿದ್ದರು. ದುರದೃಷ್ಟದ ಸಂಗತಿಯೆಂದರೆ, ರಾಜ್ಯದಲ್ಲಿ ಒಂದೇ ಒಂದು ಗ್ರಾಮ ನ್ಯಾಯಾಲಯವೂ ಕಾರ್ಯ ನಿರ್ವಹಿಸುತ್ತಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯ ಹೊಸೂರು ಹಾಗೂ ಮಂಡಿಕಲ್ ಹೋಬಳಿಗಳಲ್ಲಿ ಎರಡು ಗ್ರಾಮ ನ್ಯಾಯಾಲಯಗಳ ಸ್ಥಾಪನೆಗೆ ಅಧಿಸೂಚನೆ ಹೊರಡಿಸಲಾಗಿದೆ. ಆದರೆ ಇವೆರಡೂ ಕಾರ್ಯ ನಿರ್ವಹಿಸುತ್ತಿಲ್ಲ.

ಕೋರ್ಟ್‌ಗಳಲ್ಲಿ ಹೆಚ್ಚು ಪ್ರಕರಣಗಳು ಬಾಕಿ ಇರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಒಂದು ಕೋಟಿಗೂ ಹೆಚ್ಚು ಸಿವಿಲ್ ಪ್ರಕರಣಗಳು ಮತ್ತು ಮೂರು ಕೋಟಿಗೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ ಎಂದು ರಾಷ್ಟ್ರೀಯ ನ್ಯಾಯಾಂಗ ದತ್ತಾಂಶ ಗ್ರಿಡ್‌ನ ಅಂಕಿಅಂಶಗಳು ತಿಳಿಸುತ್ತವೆ. ಹಾಗಾಗಿ, ದೇಶದ ನ್ಯಾಯಾಂಗ ವ್ಯವಸ್ಥೆಗೆ ಗ್ರಾಮ ನ್ಯಾಯಾಲಯಗಳ ಅಗತ್ಯವಿದ್ದು, ಇದರಿಂದ ಕೋರ್ಟ್‌ಗಳಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬಹುದು.



ಗ್ರಾಮ ನ್ಯಾಯಾಲಯ ಸ್ಥಾಪನೆ ಯೋಜನೆಯನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡುವುದರ ಜೊತೆಗೆ, ಸೂಕ್ತ ಮೂಲ ಸೌಕರ್ಯಗಳ ನಿರ್ವಹಣೆಗಾಗಿ ಹಣವನ್ನು ಸರಿಯಾಗಿ ವಿನಿಯೋಗಿಸಬೇಕು. ಗ್ರಾಮ ನ್ಯಾಯಾಲಯದ ಪ್ರಯೋಜನಗಳ ಬಗ್ಗೆ ಗ್ರಾಮೀಣ ಪ್ರದೇಶಗಳಲ್ಲಿ ಅರಿವು ಮೂಡಿಸುವುದು ಬಹು ಮುಖ್ಯವಾದ ಕೆಲಸವಾಗಿದೆ.

ಗ್ರಾಮ ನ್ಯಾಯಾಲಯ ಕಾಯ್ದೆಯನ್ನು 2008ರಲ್ಲಿ ಕೇಂದ್ರದಲ್ಲಿ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೊಳಿಸಿತು. ಈಗ, ರಾಜ್ಯ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ನ್ಯಾಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವ ಮೂಲಕ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಅಶಕ್ತರಿಗೆ ಗುಣಮಟ್ಟದ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ.

ಲೇಖಕ: ಸಹಪ್ರಾಧ್ಯಾಪಕ, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಕಾನೂನು ಅಧ್ಯಯನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ

ವಾಚಕರ ವಾಣಿ

ಹಲ್ಲಿಯ ಮೇಲೇಕೆ ಗೂಬೆ?

'ಹಲ್ಲಿ ಬಿದ್ದ ಉಪ್ಪಿಟ್ಟು ಸೇವಿಸಿ' ರಾಯಚೂರಿನ ಅಪ್ಪನದೊಡ್ಡಿ ಶಾಲೆಯ 70 ಮಕ್ಕಳು ಅಸ್ವಸ್ಥ ಎಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ (ಪ್ರ.ವಾ., ಜುಲೈ 2). ಹಲ್ಲಿ ವಿಷಕಾರಿ ಪ್ರಾಣಿಯಲ್ಲ. ಅನಾದಿಕಾಲದಿಂದ ನಮ್ಮ ಜೊತೆಗೇ ವಾಸಿಸುತ್ತಿರುವ ಅವು ನಿಜಕ್ಕೂ ವಿಷಕಾರಿ ಆಗಿದ್ದಿದ್ದರೆ ಇಂದು ಮನುಷ್ಯ ಇರುತ್ತಿರಲಿಲ್ಲ, ಇಲ್ಲವೆ ಹಲ್ಲಿ ಇರುತ್ತಿರಲಿಲ್ಲ. ಉಪ್ಪಿಟ್ಟು, ಅನ್ನ, ಸಾಂಬಾರಿನ ಪಾತ್ರೆಯನ್ನು ಚೆನ್ನಾಗಿ ತೊಳೆಯದಿದ್ದರೆ ಅಲ್ಲಿ ಸಾಲ್ಮೊನೆಲ್ಲಾದಂಥ ವಿಷಕಾರಿ ಏಕಾಣುಜೀವಿಗಳು ಬೆಳೆಯುತ್ತವೆ. ಬೂಷ್ಟು ಹಿಡಿದ, ಹಳಸಿದ ಪದಾರ್ಥಗಳನ್ನು ಅಥವಾ ಕೊಳೆನೀರನ್ನು ಬಿಸಿಯೂಟದ ಅಡುಗೆಗೆ ಬಳಸಿದ್ದರೆ ಸೂಕ್ಷ್ಮಾಣುಗಳು ಆಹಾರಕ್ಕೆ ಸೇರಿರುವ ಸಾಧ್ಯತೆ ಇರುತ್ತದೆ. ಅಡುಗೆಯವರು ಮತ್ತು ಶಾಲೆಯವರು ತಮ್ಮ ತಪ್ಪನ್ನು ಬಡಪಾಯಿ ಹಲ್ಲಿಯ ಮೇಲೆ ಹೊರಿಸಿ ಕೈತೊಳೆದುಕೊಳ್ಳುತ್ತಾರೆ. ಅವರು ಹೇಳಿದ್ದನ್ನೇ ವರದಿಗಾರರು ಸುದ್ದಿಯೆಂದು ಬರೆದು ಕೈತೊಳೆದುಕೊಂಡರೆ 'ಹಲ್ಲಿ ವಿಷ' ಎಂಬ ತಪ್ಪು ಸಂಗತಿ ಜನಜನಿತವಾಗುತ್ತದೆ. ಹಲ್ಲಿಗಳ ನಾಶಕ್ಕೆಂದೇ ವಿಷದ್ರವ್ಯಗಳನ್ನು ಖರೀದಿಸಲು ಶಿಕ್ಷಣ ಇಲಾಖೆ ಮುಂದಾಗಬಹುದು.

ಆಹಾರಕ್ಕೆ ವಿಷ ಬೇರೆ ಕಾರಣಗಳಿಂದಲೂ ಸೇರಬಹುದು. ಸಸ್ಯಗಳಿಗೆ ಸುರಿಯುವ ಮೊನೊಕ್ರೊಟೊಫಾಸ್ ಎಂಬ ಪೀಡೆನಾಶಕ ವಿಷವನ್ನು ಇಟ್ಟಿದ್ದ ಹಳೇ ಡಬ್ಬಿಯಲ್ಲೇ ಖಾದ್ಯತೈಲವನ್ನು ತಂದ ಪರಿಣಾಮವಾಗಿ ಬಿಹಾರದಲ್ಲಿ 22 ಮಕ್ಕಳು ಸಾವಪ್ಪಿದ್ದರು. ನಮ್ಮಲ್ಲೂ ಚಾಮರಾಜನಗರ ಜಿಲ್ಲೆಯ ದೇವಸ್ಥಾನದ ಪ್ರಸಾದಕ್ಕೆ ಕೇಡಿಯೊಬ್ಬ ಅದೇ ವಿಷವನ್ನು ಸುರಿದಿದ್ದರಿಂದ 17 ಭಕ್ತರು ಜೀವ ತೆತ್ತಿದ್ದರು. ರಾಯಚೂರು ಜಿಲ್ಲೆಯಲ್ಲಿ ಕೊಳಕು ನೀರಿನಿಂದಾಗಿ ಕಾಯಿಲೆ ಬಿದ್ದವರ ಮತ್ತು ಸಾವಿನ ಸುದ್ದಿಗಳು ಈಚೆಗೆ ಪದೇ ಪದೇ ಬಂದಿವೆ. ವಿಶೇಷವಾಗಿ ಮಳೆಗಾಲದಲ್ಲಿ ಬಿಸಿಯೂಟ ತಯಾರಿಸುವ ಎಲ್ಲ ಶಾಲೆಗಳಲ್ಲೂ ಹೆಚ್ಚಿನ ಎಚ್ಚರಿಕೆ ಬೇಕು.

ನಾಗೇಶ ಹೆಗಡೆ, ಕೆಂಗೇರಿ

ಅತಿ ವೇಗಕ್ಕೆ ಹಾಕಲೇಬೇಕಿದೆ ಕಡಿವಾಣ

ಮಹಾರಾಷ್ಟ್ರದ ಬಸ್ಸೊಂದರಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ 26 ಮಂದಿ ಸಜೀವ ದಹನವಾಗಿದ್ದು ಸಮಾಜವನ್ನು ಬೆಚ್ಚಿ ಬೀಳಿಸಿದೆ. ಎಕ್ಸ್‌ಪ್ರೆಸ್‌ವೇನಲ್ಲೇ ಹೆಚ್ಚು ಅಪಘಾತಗಳು ಉಂಟಾಗುತ್ತಿವೆ. ಸಾವು ನೋವಿನ ಸಂಖ್ಯೆಯೂ ಹೆಚ್ಚುತ್ತಿದೆ. ರಾತ್ರಿ ವೇಳೆ ಕೆಲವರು ಅತಿ ವೇಗವಾಗಿ ವಾಹನ ಚಲಾಯಿಸುತ್ತಾರೆ. ಇಡೀ ರಾತ್ರಿ ವಾಹನ ಓಡಿಸಬೇಕಾದ ಅಗತ್ಯವಿದ್ದರೂ ಬದಲಿ ವ್ಯವಸ್ಥೆ ಇರುವುದಿಲ್ಲ, ಒಬ್ಬರೇ ಚಾಲಕ ಇರುತ್ತಾರೆ. ಶರೀರ ಹಾಗೂ ಕಣ್ಣಿಗೆ ಆಯಾಸವಾಗಿ ಸ್ವಲ್ಪ ಕಣ್ಣು ಮುಚ್ಚಿದರೂ ಸಾಕು, ವೇಗವಾಗಿ ಚಲಿಸುತ್ತಿರುವ ವಾಹನ ತನ್ನ ಪಥ ಬಿಟ್ಟು ಅಪಘಾತ ಸಂಭವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇದರಿಂದ ಅಮಾಯಕರು ಬಲಿಯಾಗುತ್ತಿದ್ದಾರೆ.

ವಾಹನಗಳ ಅತಿ ವೇಗಕ್ಕೆ ಕಡಿವಾಣ ಹಾಕದಿದ್ದರೆ ದಿನನಿತ್ಯ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಲೇ ಹೋಗುತ್ತದೆ.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

ಇಂತಹವರಿಂದ ಕಿರುಕುಳಮುಕ್ತಿ ಹೇಗೆ?

ಲಿಂಗತ್ವ ಅಲ್ಪಸಂಖ್ಯಾತರು ಶುಭ ಸಮಾರಂಭಗಳಲ್ಲಿ, ರೈಲು, ಬಸ್ಸಿನಲ್ಲಿ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ಟೋಲ್‌ಗಳಲ್ಲಿ ನೀಡುವ ಕಿರುಕುಳವನ್ನು ಎಲ್ಲರೂ ಅನುಭವಿಸುತ್ತಿದ್ದಾರೆ. ಹಣ ನೀಡದಿದ್ದರೆ ಬೈಯ್ಯುವುದು, ಹೊಡೆಯುವುದನ್ನು ಮಾಡುತ್ತಾರೆ. ಇವರು ಹೀಗೇ ತೊಂದರೆ ನೀಡುತ್ತಿದ್ದರೆ ಏನು ಮಾಡಬೇಕು ಎಂಬುದನ್ನು ಪೊಲೀಸ್ ಇಲಾಖೆ ತಿಳಿಸಲಿ. ಭಿಕ್ಷಾಟನೆ ನಿರ್ಮೂಲನ ಕೇಂದ್ರದವರು ಇವರನ್ನು ಬಂಧಿಸಿ, ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಬೆಗ್ಗರ್ಸ್ ಕಾಲೊನಿಯಲ್ಲಿ ಕೆಲಸ ನೀಡಬೇಕು. ಲಿಂಗತ್ವ ಅಲ್ಪಸಂಖ್ಯಾತರನ್ನು ಭಿಕ್ಷಾಟನೆಯಿಂದ ಮುಕ್ತಗೊಳಿಸಿ, ಕೌಶಲ ತರಬೇತಿ ಆಯೋಜಿಸಿ, ಉದ್ಯೋಗ ನೀಡಬೇಕು.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ತಾರತಮ್ಯವೆಂಬ ಸಾಂಕ್ರಾಮಿಕ ರೋಗ...

ಬ್ರಿಟನ್ ಪ್ರಧಾನಿ ರಿಷಿ ಸುನಕ್ ತಮಗೂ ಜನಾಂಗೀಯ ದ್ವೇಷದ ಅನುಭವ ಆಗಿದ್ದಾಗಿ ಮಾಧ್ಯಮವೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಇವರ ಈ ಮಾತು, ಪ್ರಪಂಚದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತಾರತಮ್ಯ ನಡೆಯುತ್ತಲೇ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಅದು ಭಾಷೆ, ಲಿಂಗ, ಜನಾಂಗ, ಧರ್ಮ, ಜಾತಿ ಎಂಬ ಹಲವು ರೀತಿಯಲ್ಲಿ ಸಾಂಕ್ರಾಮಿಕ ರೋಗದಂತೆ ಹರಡಿಕೊಂಡಿದೆ.

ಆರ್ಥಿಕವಾಗಿ ಎಷ್ಟೇ ಮುಂದುವರಿದರೂ ಸಾಮಾಜಿಕವಾಗಿ ಸಮಾನತೆಯನ್ನು ಕಾಣದಿದ್ದರೆ ಅದು ನೈಜ ಬೆಳವಣಿಗೆ ಅಲ್ಲ ಎಂಬುದನ್ನು ನಾವೆಲ್ಲರೂ ಮನದಟ್ಟು ಮಾಡಿಕೊಳ್ಳಬೇಕು. ಮುಂದಿನ ಪೀಳಿಗೆಯಾದರೂ ಯಾವುದೇ ರೀತಿಯ ತಾರತಮ್ಯವಿಲ್ಲದ ಸಮಾನತೆಯ ವಿಶ್ವವನ್ನು ಕಾಣಬೇಕು. ಕಂಡು ಅನುಭವಿಸಬೇಕು.

ಆರಿಫ ಜಿ.ಎಂ., ಮಂಗಳೂರು

ಕೆರೆ ನಿರ್ವಹಣೆ: ಯುವಕರು ಉತ್ಸಾಹ ತೋರಲಿ

ನಮ್ಮ ಗ್ರಾಮೀಣ ಪ್ರದೇಶದ ಕೆರೆಗಳು ಸೂಕ್ತ ನಿರ್ವಹಣೆ ಇಲ್ಲದೆ ಸೊರಗಿವೆ. ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ, ನಾನಾ ಬಗೆಯ ಕಸ-ಕಡ್ಡಿಗಳು ಶೇಖರಣೆಯಾಗಿವೆ. ಊರಿಗೆ ಮುಕುಟಪ್ರಾಯವೆಂಬಂತಿರುವ, ನೂರಾರು ಎಕರೆ ಜಮೀನಿಗೆ ನೀರುಣಿಸುವ ಕೆರೆಗಳು ಈ ರೀತಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಸರಿಯಲ್ಲ. ಸರ್ಕಾರ ಈ ದಿಸೆಯಲ್ಲಿ ಗಮನಹರಿಸಬೇಕು. ಸರ್ಕಾರ ಸ್ಪಂದಿಸದೇ ಹೋದರೆ ಗ್ರಾಮಸ್ಥರೇ ಮುಂದೆ ನಿಂತು ಕೆರೆಗಳನ್ನು ಸ್ವಚ್ಛಗೊಳಿಸುವ ಸಂಕಲ್ಪ ಮಾಡಬೇಕು. ಕೆರೆ ಕಾಯಕಲ್ಪಕ್ಕೆ ಗ್ರಾಮದ ಯುವಕರು ಹೆಚ್ಚಿನ ಆಸಕ್ತಿ ವಹಿಸಬೇಕು.

ಇಂದಿರಾ ಶ್ರೀಧರ್, ಮಳಲಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಡವರೂ ತೆರಿಗೆ ಕಟ್ಟುವರು

● ಜಯಸಿಂಹ ಆರ್.

ಸರ್ಕಾರವು ನೀಡುವ ವಿವಿಧ ಕಲ್ಯಾಣ ಯೋಜನೆಗಳು ಮತ್ತು ಉಚಿತ ಯೋಜನೆಗಳ ಫಲಾನುಭವಿಗಳು ಯಾವುದೇ ತೆರಿಗೆ ಕಟ್ಟುವುದಿಲ್ಲ ಎಂಬ ವಾದ ಈಚೆಗೆ ಭಾರಿ ಚರ್ಚೆಗೆ ಕಾರಣವಾಗಿತ್ತು. ಜನ ಸಾಮಾನ್ಯರು ತೆರಿಗೆ ಕಟ್ಟುವುದಿಲ್ಲ. ಆದರೆ, ಅವರಿಗೇ ಎಲ್ಲಾ ಉಚಿತ ಯೋಜನೆಗಳನ್ನು ನೀಡಲಾಗುತ್ತದೆ ಎಂಬುದೂ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾದ ಮತ್ತೊಂದು ಅಂಶ.

ಈ ಚರ್ಚೆ ಎಲ್ಲಿಯವರೆಗೆ ಮುಟ್ಟಿತ್ತು ಎಂದರೆ, 'ನಮ್ಮ ತೆರಿಗೆ ಹಣ ಫ್ರೀಬೀಗಳಿಗಲ್ಲ' ಎಂಬ ಅಭಿಯಾನವನ್ನು ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಪ್ರಮಾಣದಲ್ಲೇ ನಡೆಸಲಾಯಿತು. ಈ ಘೋಷಣೆ ಇದ್ದ ಪೋಸ್ಟರ್‌ಗಳನ್ನು ಸಾಮಾಜಿಕ ಜಾಲತಾಣಗಳ ಪ್ರೊಫೈಲ್ ಚಿತ್ರ, ಡಿಸ್‌ಪ್ಲೇ ಚಿತ್ರಗಳಲ್ಲಿ ಹಂಚಿಕೊಳ್ಳಲಾಯಿತು. ಇಂತಹ ಅಭಿಯಾನದಲ್ಲಿ ಭಾಗಿಯಾದವರಲ್ಲಿ ಬಹುತೇಕ ಮಂದಿ ತಾವು ಆದಾಯ ತೆರಿಗೆ ಪಾವತಿದಾರರು ಎಂದು ಘೋಷಿಸಿಕೊಂಡಿದ್ದರು. ಆದರೆ, ಆದಾಯ ತೆರಿಗೆ ಒಂದೇ, ತೆರಿಗೆ ಅಲ್ಲ ಮತ್ತು ಅದು ದೇಶದ ತೆರಿಗೆ ಆದಾಯದಲ್ಲಿ ಅದರದ್ದೇ ಸಿಂಹಪಾಲೂ ಅಲ್ಲ. ಜಿಎಸ್‌ಟಿ, ಅಬಕಾರಿ, ಎಕ್ಸೈಸ್ ಸುಂಕಗಳೂ ದೊಡ್ಡ ಪ್ರಮಾಣದಲ್ಲೇ ಸಂಗ್ರಹವಾಗುತ್ತವೆ. ದೇಶದ ಪ್ರತಿಯೊಬ್ಬ ನಾಗರಿಕನು ಬಳಸುವ ಬಹುತೇಕ ಸರಕು ಮತ್ತು ಸೇವೆಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಟ್ಟಲೇಬೇಕು. ಹೀಗಾಗಿ ಪ್ರತಿಯೊಬ್ಬರೂ ತೆರಿಗೆದಾರರೇ.

₹16.50 ಲಕ್ಷ ಕೋಟಿ 2022–23ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಆದಾಯ ತೆರಿಗೆ ಮೂಲಕ ಸಂಗ್ರಹಿಸಿದ ಮೊತ್ತ

₹18.10 ಲಕ್ಷ ಕೋಟಿ 2022–23ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಜಿಎಸ್‌ಟಿ ಮೂಲಕ ಸಂಗ್ರಹಿಸಿದ ಮೊತ್ತ

ದೇಶದ ಬಡವ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬವೂ ಪ್ರತಿದಿನ ತಾನು ಬಳಸುವ ಸರಕು ಮತ್ತು ಸೇವೆಗಳ ಮೇಲೆ ದೊಡ್ಡ ಪ್ರಮಾಣದ ತೆರಿಗೆ ಕಟ್ಟುತ್ತದೆ. ಈ ತೆರಿಗೆ ಪರೋಕ್ಷ ಸ್ವರೂಪದ್ದು, ಹೀಗಾಗಿ ತೆರಿಗೆ ಕಟ್ಟಿದ್ದು ಗೊತ್ತಾಗುವುದಿಲ್ಲ. ಆದರೆ, ದಿನಸಿ ಮತ್ತು ಅತ್ಯಗತ್ಯದ ವಸ್ತುಗಳ ಖರೀದಿಯ ಬಿಲ್ ಗಮನಿಸಿದರೆ ಎಷ್ಟು ತೆರಿಗೆ (ಜಿಎಸ್‌ಟಿ) ಕಟ್ಟಲಾಗುತ್ತಿದೆ ಎಂಬುದು ತಿಳಿಯುತ್ತದೆ.

ಯಾವುದೇ ಕುಟುಂಬವೊಂದು ತಾನು ಪ್ರತಿದಿನ ಬಳಸುವ ಹಲವು ಸರಕುಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ಕಟ್ಟುತ್ತದೆ. ಅದು ಅಕ್ಕಿ ಇರಬಹುದು, ಗೋಧಿ ಇರಬಹುದು ಅಥವಾ ಹಾಲು ಇರಬಹುದು. ಅದಕ್ಕೆ ಪಾವತಿಸುವ ಮೊತ್ತದಲ್ಲಿ ಜಿಎಸ್‌ಟಿ ಇದ್ದೇ ಇರುತ್ತದೆ. ಜಿಎಸ್‌ಟಿ ಅನ್ವಯವಾಗವ ಸರಕುಗಳ ಪಟ್ಟಿ ಇಲ್ಲಿಗೇ ಮುಗಿಯುವುದಿಲ್ಲ. ಸಾಮಾನ್ಯ ಕುಟುಂಬವೊಂದರ ಸದಸ್ಯರು ಪ್ರತಿದಿನ ಬೆಳಿಗ್ಗೆ ಎದ್ದು, ರಾತ್ರಿ ಮಲಗುವವರೆಗೆ ಕನಿಷ್ಠ 25ರಿಂದ 30ರಷ್ಟು ಸರಕು ಮತ್ತು ಸೇವೆಗಳನ್ನು ಬಳಸುತ್ತದೆ. ಆ ಎಲ್ಲಾ ಸರಕು ಮತ್ತು ಸೇವೆಗಳಿಗೆ ತೆರಿಗೆ ಕಟ್ಟಲೇಬೇಕು. ಆ ಸರಕುಗಳನ್ನು ಅಂದೇ ಖರೀದಿಸಬಹುದು ಅಥವಾ ತಿಂಗಳಿಗೊಮ್ಮೆ ಖರೀದಿಸಬಹುದು. ಆದರೆ, ಹಾಗೆ ಖರೀದಿಸಿದ ಸರಕು ಮತ್ತು ಸೇವೆಗಳ ಮೇಲೆ ಆ ಕುಟುಂಬವು ದೊಡ್ಡ ಪ್ರಮಾಣದ ತೆರಿಗೆ ಪಾವತಿಸುತ್ತಲೇ ಇರುತ್ತದೆ.

ಅಡುಗೆ ಪದಾರ್ಥಗಳು

5% ಪ್ಯಾಕ್ ಮಾಡಲಾದ ಮತ್ತು ಲೇಬಲ್ ಹಾಕಲಾದ ಅಕ್ಕಿಯ ಮೇಲೆ ಕಟ್ಟುವ ಜಿಎಸ್‌ಟಿ (25 ಕೆ.ಜಿ.ಗಿಂತ ಹೆಚ್ಚು ಖರೀದಿಸಿದರೆ ಮತ್ತು ಜಿಎಸ್‌ಟಿ ಅನ್ವಯವಾಗುವುದಿಲ್ಲ)



5% ಪ್ಯಾಕ್ ಮಾಡಲಾದ ಮತ್ತು ಲೇಬಲ್ ಹಾಕಲಾದ ಗೋಧಿ ಮತ್ತು ಗೋಧಿ ಹಿಟ್ಟು

18% ಪ್ಯಾಕ್ ಮಾಡಲಾದ ಮತ್ತು ಲೇಬಲ್ ಹಾಕಲಾದ ಅವಲಕ್ಕಿ, ರವೆ, ಮಂಡಕ್ಕಿ

5% ಎಲ್ಲಾ ರೀತಿಯ ಅಡುಗೆ ಎಣ್ಣೆ

5% ಪ್ಯಾಕ್ ಮಾಡಲಾದ ಮತ್ತು ಲೇಬಲ್ ಹಾಕಲಾದ ಎಲ್ಲಾ ರೀತಿಯ ಮಸಾಲೆ ಪದಾರ್ಥಗಳು

18% ನೂಡಲ್ಸ್, ಬಿಸ್ಕೆಟ್

5% ಮೊಸರು

12% ಬೆಣ್ಣೆ **12%** ತುಪ್ಪ

ಪಾನೀಯಗಳು ಮತ್ತು ತಿಂಡಿ–ತಿನಿಸು

5% ಟೀ–ಪುಡಿ

5% ಕಾಫಿ–ಪುಡಿ

5% ಹಾಲು

5% ಬೆಲ್ಲ–ಸಕ್ಕರೆ

5% ರಸ್ಕ್

12% ಒಣಹಣ್ಣುಗಳು

18% ಬ್ರೆಡ್

12% ಪ್ಯಾಕ್ ಮಾಡಿದ ಹಣ್ಣಿನ ರಸ

28% ಜಿಎಸ್‌ಟಿ+**12%**ಸೆಸ್ ಕಾರ್ಬೋನೇಟೆಡ್ ಪಾನೀಯಗಳು

5%ನಿಂದ **28%** ಚಾಕೊಲೇಟ್‌ಗಳು



ಪ್ರಸಾಧನ ಮತ್ತು ಅಲಂಕಾರ ಸಾಮಗ್ರಿ

28% ಪೌಡರ್, ಫೇಸ್‌ಕ್ರೀಮ್, ಲಿಪ್‌ಸ್ಟಿಕ್, ಸನ್‌ಸ್ಕ್ರೀನ್ ಲೋಷನ್

18% ತಲೆಕೂದಲಿಗೆ ಬಳಸುವ ಎಣ್ಣೆ

12% ಹೇರ್‌ಕ್ಲಿಪ್ ಮತ್ತು ಹೇರ್‌ಬ್ಯಾಂಡ್

18% ಸುಗಂಧ ದ್ರವ್ಯ

5% ಬಳೆ



ಸ್ವಚ್ಛತೆ ಮತ್ತು ವೈಯಕ್ತಿಕ ಆರೈಕೆ

18% ಶೇವಿಂಗ್ ಕ್ರೀಂಗಳು, ಆಫ್ಟರ್‌ಶೇವ್

18% ಬಟ್ಟೆ ಸೋಪು, ಪೌಡರ್, ಲಿಕ್ವಿಡ್

18% ಟಾಯ್ಲೆಟ್ ಕ್ಲೀನರ್ ಮತ್ತು ಸುಗಂಧ ಸ್ಪ್ರೇ/ಬಿಲ್ಲೆ

18% ಸೋಪು

18% ಹಲ್ಲುಜ್ಜುವ ಪೇಸ್ಟ್

18% ಹಲ್ಲುಜ್ಜುವ ಬ್ರಷ್

28% ಶ್ಯಾಂಪೂ

18% ಸ್ಯಾನಿಟರಿ ನ್ಯಾಪ್‌ಕಿನ್



ಎಲ್ಲರೂ ಕಟ್ಟಲೇಬೇಕಾದ ಜಿಎಸ್‌ಟಿ



ಚಿತ್ರ: ಸಂತೋಷ್ ಸಸಿಹಿತ್ಲು

ಬಟ್ಟೆ, ಪಾದರಕ್ಷೆ

ಬಟ್ಟೆ, ಪಾದರಕ್ಷೆಗಳನ್ನು ಪ್ರತಿದಿನವೂ ಖರೀದಿಸುವುದಿಲ್ಲ. ಆದರೆ, ಅವನ್ನು ಪ್ರತಿದಿನ ಬಳಸಲಾಗುತ್ತದೆ. ಅಗತ್ಯ ಬಿದ್ದಾಗ ಖರೀದಿಸಲಾಗುವ ಇಂತಹ ಸರಕುಗಳ ಮೇಲೂ ದೊಡ್ಡ ಪ್ರಮಾಣದ ತೆರಿಗೆ ವಿಧಿಸಲಾಗುತ್ತಿದೆ. ₹2,000 ಬೆಲೆಯ ಬಟ್ಟೆ ಖರೀದಿಸಿದರೆ, ಅದರಲ್ಲಿ ₹240ರಷ್ಟು ತೆರಿಗೆ ಹಣವನ್ನೇ ಭರಿಸಬೇಕಾಗುತ್ತದೆ

5% ₹1,000ಕ್ಕಿಂತ ಕಡಿಮೆ ಬೆಲೆಯ ಬಟ್ಟೆ ಮೇಲೆ ಕಟ್ಟುವ ಜಿಎಸ್‌ಟಿ ಪ್ರಮಾಣ

12% ₹1,000ಕ್ಕಿಂತ ಹೆಚ್ಚು ಬೆಲೆಯ ಬಟ್ಟೆ ಮೇಲೆ ಕಟ್ಟುವ ಜಿಎಸ್‌ಟಿ ಪ್ರಮಾಣ

12% ₹1,000ಕ್ಕಿಂತ ಕಡಿಮೆ ಬೆಲೆಯ ಪಾದರಕ್ಷೆ ಮೇಲೆ ಕಟ್ಟುವ ಜಿಎಸ್‌ಟಿ ಪ್ರಮಾಣ

18% ₹1,000ಕ್ಕಿಂತ ಹೆಚ್ಚು ಬೆಲೆಯ ಪಾದರಕ್ಷೆ ಮೇಲೆ ಕಟ್ಟುವ ಜಿಎಸ್‌ಟಿ ಪ್ರಮಾಣ



ಓಡಾಟ ಮತ್ತು ಸಾರಿಗೆ

ಜನಸಾಮಾನ್ಯರು ಪ್ರತಿದಿನ ಓಡಾಡಲು ಸಾರ್ವಜನಿಕ ಸಾರಿಗೆಗಳನ್ನು ಬಳಸಿದರೂ, ಪರೋಕ್ಷವಾಗಿ ತೆರಿಗೆ ಕಟ್ಟುತ್ತಲೇ ಇರುತ್ತಾರೆ. ಬಸ್ ಖರೀದಿ, ಇಂಧನದ ಮೇಲಿನ ತೆರಿಗೆಗಳನ್ನು ಸೇರಿಸಿಯೇ ಟಿಕೆಟ್ ದರ ನಿಗದಿ ಮಾಡಲಾಗಿರುತ್ತದೆ. ಹೀಗಾಗಿ ಟಿಕೆಟ್‌ನಲ್ಲಿ ತೆರಿಗೆ ಕಟ್ಟಿಸಿಕೊಳ್ಳದಿದ್ದರೂ, ಪರೋಕ್ಷವಾಗಿ ತೆರಿಗೆ ಪಾವತಿ ಮಾಡಲೇಬೇಕು.

ಇನ್ನು ದ್ವಿಚಕ್ರ ವಾಹನಗಳಲ್ಲಿ ಓಡಾಡುವವರು ಪಟ್ರೋಲ್ ಅನ್ನು ಬಳಸಲೇಬೇಕು. ಪೆಟ್ರೋಲ್ ಮೇಲೆ ಕೇಂದ್ರ ಅಬಕಾರಿ ತೆರಿಗೆ ಮತ್ತು ವಿವಿಧ ಸೆಸ್‌ಗಳನ್ನು ಕಟ್ಟಬೇಕಾಗುತ್ತದೆ. ಜತೆಗೆ, ರಾಜ್ಯ ಮೌಲ್ಯವರ್ಧಿತ ತೆರಿಗೆಯನ್ನೂ ಕಟ್ಟಬೇಕಾಗುತ್ತದೆ. ಇನ್ನು ದ್ವಿಚಕ್ರ ವಾಹನಗಳ ಖರೀದಿ ವೇಳೆ ದೊಡ್ಡ ಮೊತ್ತದ ಜಿಎಸ್‌ಟಿ ಕಟ್ಟಬೇಕಾಗುತ್ತದೆ. ಜಿಎಸ್‌ಟಿ ಒಳಗೊಂಡ ಬೆಲೆಯ ಮೇಲೆ ಮತ್ತೆ ರಸ್ತೆ ತೆರಿಗೆ ಕಟ್ಟಬೇಕಾಗುತ್ತದೆ.



28% ದ್ವಿಚಕ್ರವಾಹನಗಳ ಮೇಲೆ ವಿಧಿಸಲಾಗುವ ಜಿಎಸ್‌ಟಿ ಪ್ರಮಾಣ

5% ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆಗಳ ಮೇಲೆ ಕಟ್ಟಬೇಕಿರುವ ಜಿಎಸ್‌ಟಿ ಪ್ರಮಾಣ



18% ಮೊಬೈಲ್ ಡಾಟಾ ರೀಚಾರ್ಜ್

18% ಕೇಬಲ್ ಟಿ.ವಿ. ಶುಲ್ಕ

18% ಒಟಿಟಿ ಸೇವಾ ಶುಲ್ಕ

18% ಕೆಲವು ಔಷಧಗಳಿಗೆ ವಿಧಿಸಲಾಗುತ್ತಿರುವ ಗರಿಷ್ಠ ಪ್ರಮಾಣದ ಜಿಎಸ್‌ಟಿ

12% ಪೆನ್ಸಿಲ್ ಮತ್ತು ಕ್ರೆಯಾನ್ಸ್

12% ಶಾರ್ಪನರ್

18% ಪೆನ್



ಪ್ರಜಾವಾಣಿ ಗ್ರಾಫಿಕ್ಸ್ : ವಿಜಯಕುಮಾರಿ ಆರ್. ಆಧಾರ: ಜಿಎಸ್‌ಟಿ ದರ ಪಟ್ಟಿ, ಪಿಟಿಐ

ಸಿನಿ ಬಿಟ್ಸ್



ಕಳೆದೊಂದು ವರ್ಷದಿಂದ 'ಹಾಸ್ಟೆಲ್ ಹುಡುಗರು ಎಲ್ಲಿದ್ದಾರೆ' ಎಂಬ ಪ್ರಶ್ನೆಯನ್ನು 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರತಂಡಕ್ಕೆ ಜನರು ಸಾಮಾಜಿಕ ಮಾಧ್ಯಮಗಳಲ್ಲಿ ಕೇಳುತ್ತಲೇ ಇದ್ದರು. ಈ ಪ್ರಶ್ನೆಗೆ ಕೊನೆಗೂ ಚಿತ್ರತಂಡ ಉತ್ತರಿಸಿದೆ. ಟೀಸರ್‌ಗಳು, ಹಾಡಿನ ಮೂಲಕ ನಿರೀಕ್ಷೆ ಹುಟ್ಟಿಸಿರುವ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಸಿನಿಮಾ ಬಿಡುಗಡೆಗೆ ಮುಹೂರ್ತ ನಿಗದಿಯಾಗಿದೆ. ಜುಲೈ 21ಕ್ಕೆ ಸಿನಿಮಾ ತೆರೆಗೆ ಬರಲಿದೆ.

ಯೂತ್ ಸಬ್ಜೆಕ್ಟ್ ಕಥೆಯನ್ನೊಳಗೊಂಡ ಈ ಸಿನಿಮಾವನ್ನು ನಿತಿನ್ ಕೃಷ್ಣಮೂರ್ತಿ ಕಥೆ ಬರೆದು ನಿರ್ದೇಶಿಸಿದ್ದಾರೆ. ಬಹುತೇಕ ರಂಗಭೂಮಿ ಪ್ರತಿಭೆಗಳು ನಟಿಸಿರುವ ಈ ಚಿತ್ರವನ್ನು ವರುಣ್ ಸ್ಟುಡಿಯೋಸ್ ಹಾಗೂ ಗುಲ್ ಮೊಹರ್ ಫಿಲಂಸ್ ಬ್ಯಾನರ್‌ನಡಿ ಪ್ರಜ್ವಲ್ ಬಿ.ಪಿ, ವರುಣ್ ಕುಮಾರ್ ಗೌಡ, ನಿತಿನ್ ಕೃಷ್ಣಮೂರ್ತಿ, ಅರವಿಂದ್ ಕೆ. ಕಶ್ಯಪ್ ಬಂಡವಾಳ ಹೂಡಿ ನಿರ್ಮಿಸಿದ್ದಾರೆ. ಈ ಸಿನಿಮಾವನ್ನು ರಕ್ಷಿತ್ ಶೆಟ್ಟಿ ತಮ್ಮದೇ ಪರಂವಃ ಪಿಕ್ಚರ್ಸ್ ಮೂಲಕ ಪ್ರಸ್ತುತಪಡಿಸುತ್ತಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನವಿರುವ ಈ ಚಿತ್ರದ 'ಪ್ರೊಟೆಸ್ಟ್' ಹಾಡು ಯೂಟ್ಯೂಬ್‌ನಲ್ಲಿ 2.5 ಮಿಲಿಯನ್ ವೀಕ್ಷಣೆ ಕಂಡಿದೆ. ಅರವಿಂದ್ ಅವರ ಛಾಯಾಚಿತ್ರಗ್ರಹಣ ಚಿತ್ರದ ಪ್ಲಸ್ ಪಾಯಿಂಟ್ ಎಂದಿದೆ ಚಿತ್ರತಂಡ. ಬಿಡುಗಡೆ ದಿನಾಂಕ ಘೋಷಿಸಿರುವ ಚಿತ್ರತಂಡ ಶೀಘ್ರದಲ್ಲಿಯೇ ಟ್ರೈಲರ್ ಬಿಡುಗಡೆ ಮಾಡುವುದಾಗಿ ತಿಳಿಸಿದೆ.

ತೆರೆಗೆ ಬರ್ತಿದ್ದಾನೆ 'ನ್ಯಾನೋ ನಾರಾಯಣಪ್ಪ'



'ಕೆಮಿಸ್ಟ್ರಿ ಆಫ್ ಕರಿಯಪ್ಪ', 'ಕ್ರಿಟಿಕಲ್ ಕೀರ್ತನೆಗಳು' ಸಿನಿಮಾಗಳ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡಿರುವವರು ನಿರ್ದೇಶಕ ಕುಮಾರ್. ಇವರು ಆ್ಯಕ್ಷನ್ ಕಟ್ ಹೇಳಿರುವ ಹೊಸ ಸಿನಿಮಾ 'ನ್ಯಾನೋ ನಾರಾಯಣಪ್ಪ' ತೆರೆಗೆ ಬರಲು ಸಜ್ಜಾಗಿದೆ.

'ಕೆ.ಜಿ.ಎಫ್. ತಾತ' ಖ್ಯಾತಿಯ ನಟ ದಿವಂಗತ ಕೃಷ್ಣೋಜಿ ರಾವ್ ನಾಯಕನಾಗಿ ನಟಿಸಿರುವ ಈ ಸಿನಿಮಾ ಜುಲೈ 7ಕ್ಕೆ ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ. ಹಾಸ್ಯದ ಜೊತೆಗೆ ಭಾವನಾತ್ಮಕ ಅಂಶಗಳನ್ನು ಹದವಾಗಿ ಬೆರೆಸಿ 'ನ್ಯಾನೋ ನಾರಾಯಣಪ್ಪ' ಕಥೆ ಹೆಣೆದಿದ್ದೇನೆ ಎನ್ನುತ್ತಾರೆ ಕುಮಾರ್. ಬಿಡುಗಡೆ ಹೊಸ್ತಿಲಿನಲ್ಲಿರುವ ಈ ಸಿನಿಮಾದ 'ಮನಿ ಹಂಟರ್' ಹಾಡು ಬಿಡುಗಡೆಯಾಗಿದ್ದು, ಕೇಳುಗರನ್ನು ಸೆಳೆಯುತ್ತಿದೆ. ಕುಮಾರ್ ಅವರೇ ಈ ಹಾಡಿಗೆ ಸಾಹಿತ್ಯ ಬರೆದಿದ್ದು, ಅಂಕಿತಾ ಕುಂಡು ಧ್ವನಿಯಾಗಿದ್ದಾರೆ. ಚಿತ್ರದ ಮತ್ತೊಂದು ಹಾಡಿಗೆ ಗಿರಿ ಶಿವಣ್ಣ, ಕಾಕ್ರೋಚ್ ಸುಧಿ ಸೇರಿದಂತೆ ಹಲವರು ಹೆಜ್ಜೆ ಹಾಕಿದ್ದಾರೆ ಎಂದಿದೆ ಚಿತ್ರತಂಡ.

ಕೇಸರಿ ಫಿಲಂ ಕ್ಯಾಪ್ಚರ್ ಬ್ಯಾನರ್‌ನಡಿ ಕುಮಾರ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಕಾಕ್ರೋಚ್ ಸುಧಿ, ಗಿರೀಶ್ ಶಿವಣ್ಣ, ಪ್ರಶಾಂತ್ ಸಿದ್ದಿ, ಅನಂತು, ಅಪೂರ್ವಾ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಶಿವಶಂಕರ ಛಾಯಾಚಿತ್ರಗ್ರಹಣ, ಆಕಾಶ್ ಪರ್ವ ಸಂಗೀತ, ದೀಪು ಮತ್ತು ಸಿದ್ದಾರ್ಥ್ ನಾಯಕ ಸಂಕಲನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ದೇಶ ಬದಲಾಗುತ್ತಿದೆ.. ಮುಸ್ಲಿಂ ಹುಡುಗನೊಬ್ಬ ಹೆಸರು ಬದಲಾಯಿಸಿಕೊಂಡು ಹಿಂದೂ ಹುಡುಗಿಯನ್ನು ಪ್ರೀತಿಸಿ ಅವಳನ್ನು ಅಪಹರಣ ಮಾಡುವ ಯತ್ನದಲ್ಲಿದ್ದಾಗ ಹಿಂದೂ ಸಮಾಜದ ಮಹಿಳೆಯರು ಮತ್ತು ಜನರ ಕೈಗೇ ಸಿಕ್ಕು, ಆದ ಗತಿ ನೋಡಿ. ಹಿಂದೂ ಸಮಾಜ ಜಾಗೃತ ಆಗುತ್ತಿದೆ...' ಎಂಬ ಬರಹ ಇರುವ ವಿಡಿಯೊ ಪೋಸ್ಟ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯು ಈ ಘಟನೆ ಕುರಿತು 2020ರ ಜನವರಿ 20ರಂದು ವರದಿ ಮಾಡಿತ್ತು. 'ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣುಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ವ್ಯಕ್ತಿಯನ್ನು ನಗ್ನವಾಗಿಸಿ ಮಹಿಳೆಯೊಬ್ಬರು ಥಳಿಸಿದ್ದಾರೆ. ಇದು ಹರಿಯಾಣದ ಅಂಬಾಲ ನಗರದಲ್ಲಿ ನಡೆದಿದೆ' ಎಂದು ಪತ್ರಿಕೆ ವರದಿ ಮಾಡಿದೆ. 'ಈತನ ಹೆಸರು ಪವನ್ (40). ಶಾಲಾ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ್ದಕ್ಕಾಗಿ ಆ ಹೆಣ್ಣುಮಕ್ಕಳ ಕುಟುಂಬದವರೂ ಈತನನ್ನು ಥಳಿಸಿದ್ದಾರೆ' ಎಂದೂ ವರದಿಯಲ್ಲಿ ಹೇಳಲಾಗಿತ್ತು. ಈತನ ವಿರುದ್ಧ ಐಪಿಸಿಯ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಘಟನೆ ಬಗ್ಗೆ ಮಹಿಳಾ ಪೊಲೀಸ್ ಠಾಣೆಯ ಎಸ್‌ಎಚ್‌ಒ ಸುನಿತಾ ಎಂಬವರು ಮಾಹಿತಿ ನೀಡಿರುವ ವಿಡಿಯೊ ಕೂಡ ಇದೆ. ಆದ್ದರಿಂದ ಮುಸ್ಲಿಂ ವ್ಯಕ್ತಿಯು ಹಿಂದೂ ಹೆಸರಿನಲ್ಲಿ ಪ್ರೀತಿಸಲು ಪ್ರಯತ್ನಿಸಿದ್ದ ಎಂಬುದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಪ್ರತಿಪದ್ ಗಂ. 13-39, ನಕ್ಷತ್ರ: ಪೂರ್ವಾಷಾಢ ಗಂ. 08-25 ಯೋಗ: ಇಂದ್ರ ಗಂ. 11-49 ಕರಣ: ಕೌಲವ ಗಂ. 13-39, ಮಿಥುನ ಮಾಸದ 19 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4. ರಾಹುಕಾಲ : ಬೆಳಿಗ್ಗೆ 03-00 – 04-30, ಸೂರ್ಯೋದಯ : 06-12 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 15 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 9, 10

ಮೇಷ: ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವಿರಿ. ವಿದ್ಯಾರ್ಥಿಗಳು ಹೆಚ್ಚಿನ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾಗುವರು. ಆಸ್ತಿ ವಿಷಯಗಳು ನಿರಾತಂಕವಾಗಿ ಬಗೆಹರಿಯುವುದು.

ವೃಷಭ: ಕಾಯಕವೇ ಕೈಲಾಸವೆಂದು ದುಡಿಯುವ ನಿಮಗೆ ಆಫೀಸಿನಲ್ಲಿ ಸ್ಥಾನಮಾನಗಳು ದೊರೆಯಲಿದೆ. ಮನೆಯಲ್ಲಿ ಮಂಗಳ ಕಾರ್ಯದ ತಯಾರಿ ನಡೆಯುವುದು. ಸಿಹಿ- ಕಹಿಯ ಮಿಶ್ರಫಲ ಅನುಭವಕ್ಕೆ ಬರಲಿದೆ.

ಮಿಥುನ: ಮನೆಯಲ್ಲಿನ ಕೌಟುಂಬಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಿರಿಯರ ಸಲಹೆ ಪಡೆದು ತೀರ್ಮಾನಕ್ಕೆ ಬರುವುದು ಉತ್ತಮ. ವೃತ್ತಿಯಲ್ಲಿ ಹೊಸ ಬದುಕು ಆರಂಭಿಸಲು ಅವಕಾಶಗಳ ಬಾಗಿಲು ತೆರೆದಿದೆ.

ಕರ್ಕಾಟಕ: ಮದುವೆ ವಿಷಯದಲ್ಲಿ ಮನೆಯವರಿಂದ ಒತ್ತಡ ಬರಲಿದೆ. ರಾಜಕೀಯ ರಂಗದಲ್ಲಿ ಬಹಳ ದಿನಗಳ ಯಶಸ್ಸು ದೊರೆಯಲಿದೆ. ಶತ್ರುಗಳ ಉಪಟಳ ಅನುಭವಕ್ಕೆ ಬಂದಂತಾಗಲಿದೆ. ಶ್ರೀರಾಮ ನಾಮ ಸ್ಮರಣೆ ಮಾಡಿ.

ಸಿಂಹ: ಮನೆ ಅಥವಾ ನಿವೇಶನದ ದಾಖಲೆ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಗೃಹನಿರ್ಮಾಣ ಕಾರ್ಯ ಪೂರ್ಣಗೊಳ್ಳುವುದು. ವಿದೇಶಿ ವಸ್ತುಗಳ ಖರೀದಿಗಾಗಿ ಧನವ್ಯಯವಾಗಬಹುದು.

ಕನ್ಯಾ: ವ್ಯವಹಾರವನ್ನು ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದರೆ ಅದನ್ನು ಅನುಷ್ಠಾನಕ್ಕೆ ತರಲು ಇದು ಸಕಾಲ. ಟ್ರಾವೆಲ್ ಏಜೆನ್ಸಿಯವರಿಗೆ ಆರ್ಥಿಕ ಮುನ್ನಡೆ ಇದ್ದು ಅವಕಾಶಗಳನ್ನು ಕಾಣುವಿರಿ. ಹಸಿರು ಬಣ್ಣ ಶುಭ ತರಲಿದೆ.

ತುಲಾ: ಕೆಲಸ ಮಾಡುವ ಮೊದಲು ಅದರ ಬಗ್ಗೆ ಸಾಕಷ್ಟು ಯೋಚಿಸಿ ನಂತರ ತೀರ್ಮಾನಿಸಿ. ಉದ್ಯಮಗಳಲ್ಲಿ ಸ್ವಂತ ಶ್ರಮ ಅಗತ್ಯವಾಗುವುದು. ಸಿನೆಮಾ ವ್ಯವಹಾರಗಳಿಂದ ಭರ್ಜರಿ ಲಾಭ ಪಡೆಯುವಿರಿ.

ವೃಶ್ಚಿಕ: ತಂದೆಯವರ ಮನಸ್ಸನ್ನು ನೋಯಿಸದೇ, ತಂದೆಯವರ ಮಾತಿನಂತೆ ನಡೆಯುವುದು ಶ್ರೇಯಸ್ಕರವಾಗಿರುತ್ತದೆ. ಕಾರ್ಯವನ್ನು ಜನರ ಎದುರು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ.

ಧನು: ಸ್ಟೇಷನರಿ ಮತ್ತು ಫ್ಯಾನ್ಸಿ ವಸ್ತುಗಳ ಮಾರಾಟದಿಂದ ಲಾಭ ಹೊಂದುವಿರಿ. ಹೊಸ ಉದ್ಯೋಗ ದೊರೆತು ಮನೆಯವರಿಗೆ ಸಮಾಧಾನವಾಗುವುದು. ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಡ್ತಿ ಪಡೆಯುವ ಕಾಲ.

ಮಕರ: ಕೋರ್ಟಿನ ಕೆಲಸಗಳನ್ನು ತ್ವರಿತ ಗತಿಯಲ್ಲಿ ನಡೆಸಿಕೊಡುವಂತೆ ವಕೀಲರಲ್ಲಿ ಕೇಳಿಕೊಳ್ಳಿರಿ. ಅಧ್ಯಯನ ನಿರತರಿಗೆ ಸೂಕ್ತ ಸಹಾಯ ಲಭ್ಯವಾಗುವುದು. ವ್ಯವಹಾರ ನಿಮಿತ್ತ ದೂರದ ಪ್ರಯಾಣ ಸಂಭವಿಸಲಿದೆ.

ಕುಂಭ: ಕುಟುಂಬದಲ್ಲಿ ಊಹೆಗೂ ನಿಲುಕದಂತಹ ಜವಾಬ್ದಾರಿಗಳನ್ನು ನಿಭಾಯಿಸ ಬೇಕಾಗುತ್ತದೆ. ಎಲ್ಲಾ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು. ಮುಂದಿನ ನಡೆಯ ಬಗ್ಗೆ ಗಮನಹರಿಸಿ.

ಮೀನ: ಯೋಚಿಸುವುದನ್ನು ಬಿಟ್ಟು ಇತರ ಕುರಿತು ಕಾಳಜಿ ವಹಿಸುವುದನ್ನು ಕೂಡ ಅಭ್ಯಾಸ ಮಾಡಿಕೊಳ್ಳಿ. ಮೇಲಧಿಕಾರಿಗಳಿಂದ ಹೆಚ್ಚಿನ ಹೊಸ-ಹೊಸ ಅವಕಾಶಗಳು ಹಾಗೂ ಪ್ರಶಂಸೆಯ ಮಾತುಗಳನ್ನು ಕೇಳುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ವಿಶ್ವವೊಂದು ಮರೀಚಿಕೆ

ಜೀವದುದಯ ರಹಸ್ಯ, ಜೀವವಿಲಯ ರಹಸ್ಯ |
ಜೀವನದ ದೃಶ್ಯ ಮರುವಿನ ಬಿಸಿಲ್ಗುದುರೆ ||
ಭಾವಿಸಲಿದೇ ತತ್ತ್ವ ಬ್ರಹ್ಮಮಾಯೆಯೆ ವಿಶ್ವ |
ಕೇವಲಾತ್ಮ ಬ್ರಹ್ಮ – ಮಂಕುತಿಮ್ಮ || 919 ||

ಪದ-ಅರ್ಥ: ಜೀವದುದಯ = ಜೀವದ + ಉದಯ, ಜೀವವಿಲಯ = ಜೀವ + ವಿಲಯ(ನಾಶ), ಮರುವಿನ = ಮರಳುಗಾಡಿನ, ಬಿಸಿಲ್ಗುದುರೆ = -ಮರೀಚಿಕೆ, ಭಾವಿಸಲಿದೇ = ಭಾವಿಸಲು + ಇದೇ, ಕೇವಲಾತ್ಮ = ಕೇವಲ + ಆತ್ಮ.

ವಾಚ್ಯಾರ್ಥ: ಜೀವದ ಹುಟ್ಟು, ನಾಶ ಎರಡೂ ರಹಸ್ಯಗಳೇ, ಬದುಕಿನ ದೃಶ್ಯ ಮರಳುಗಾಡಿನ ಮರೀಚಿಕೆ. ನಿಜವಾಗಿ ತಿಳಿದರೆ ಇದೇ ತತ್ವ. ವಿಶ್ವವೆನ್ನುವುದು ಬ್ರಹ್ಮನ ಮಾಯೆ, ಕೇವಲ ಆತ್ಮವೇ ಬ್ರಹ್ಮ.


ವಿವರಣೆ: ಹುಟ್ಟು, ಸಾವುಗಳೆರಡೂ ಅದ್ಭುತ ರಹಸ್ಯಗಳು. ಒಂದು ಜೀವ ಯಾಕೆ ಭೂಮಿಗೆ ಬಂದಿತು? ಏನದರ ಬಾಳಿನ ಗುರಿ? ಅದಕ್ಕೆ ಹಿಂದೊಂದು ಜನ್ಮವಿತ್ತೇ? ಇವು ಯಾವವೂ ನಮಗೆ ತಿಳಿಯವು. ಜೀವ ಭೂಮಿಗೆ ಬಂದದ್ದು ಮಾತ್ರ ಸತ್ಯ. ಅಂತೆಯೇ ಸಾವು ಖಚಿತ, ಅನಿವಾರ್ಯ ಮತ್ತು ಅನಿಶ್ಚಿತ. ಸಾವು ಯಾವಾಗ, ಯಾವ ರೂಪದಿಂದ ಬಂದೀತೆಂಬುದು ತಿಳಿಯದು. ಅದೂ ರಹಸ್ಯವೇ. ಹಾಗಾದರೆ ಹುಟ್ಟು-ಸಾವುಗಳ ನಡುವಿನ ಬದುಕು ಏನು? ಪ್ರಾಚೀನಕಾಲದಿಂದಲೂ ಹುಟ್ಟು-ಸಾವುಗಳು ಸಾಮಾನ್ಯ ಮನುಷ್ಯರನ್ನು ಚಿಂತೆಗೀಡು ಮಾಡಿದಂತೆ, ಚಿಂತನಶೀಲರನ್ನಾಗಿಯೂ ಮಾಡಿವೆ. ಭಾರತೀಯ ಅಧ್ಯಾತ್ಮ ಇದಕ್ಕೊಂದು ಸಮಾಧಾನವನ್ನು ಕಂಡುಕೊಂಡಿದೆ. ಜಗತ್ತು ಎನ್ನುವುದು ಬ್ರಹ್ಮಚೈತನ್ಯದ ವಿಕಾರ. ವಿಕಾರ ಮೂಲಚೈತನ್ಯವನ್ನು ಕೆಡಿಸಲಾರದು. ಮಣ್ಣು ಮೂಲವಸ್ತು, ಮಡಕೆ ಅದರ ವಿಕಾರ. ವಿಕಾರವು ಕ್ಷಣಿಕವಾದದ್ದು ಆದರೆ ಮೂಲದ್ರವ್ಯ ಶಾಶ್ವತ. ಆದ್ದರಿಂದ ಪ್ರಪಂಚದ ವ್ಯವಹಾರ, ನಮ್ಮ ಜೀವನದ ದೃಶ್ಯಗಳೆಲ್ಲ ಮರೀಚಿಕೆ ಇದ್ದಂತೆ ಎನ್ನುತ್ತದೆ. ಕಗ್ಗ. ದಾರಿಹೋಕನಿಗೆ ದೂರದಲ್ಲೆಲ್ಲೋ ನೀರು ಹರಿದಂತೆ ಭಾಸವಾಗುತ್ತದೆ. ಹತ್ತಿರ ಹೋದರೆ ಅಲ್ಲಿ ನೀರಿಲ್ಲ. ಮತ್ತೆ ಮುಂದೆಲ್ಲೋ ನೀರು ಚಲಿಸಿದಂತೆ ತೋರುತ್ತದೆ. ಇದೇ ಬಿಸಿಲ್ಗುದರೆ-ಮರೀಚಿಕೆ. ಅದು ಬರಿಯ ತೋರಿಕೆ ಮಾತ್ರ, ಅದು ನೀರಿನ ತೊರೆಯಲ್ಲ. ಈ ನೀರಿನ ತೋರಿಕೆಗೆ ಮೂರು ವಿಷಯಗಳು ಕಾರಣ. ಅವುಗಳ ಸಂಮೇಳದಿಂದ ಮರೀಚಿಕೆ. ಬಿಸಿಲು, ಮರಳುನೆಲ ಮತ್ತು ದೂರ, ಇವುಗಳ ಸಂಗತಪ್ರಭಾವದಿಂದ ನೀರಿನ ತೊರೆಯ ತೋರಿಕೆ. ಜಗತ್ತು ಹಾಗೆಯೇ ಒಂದು ವಿಚಿತ್ರವಾದ ತೋರಿಕೆ. ಈ ತೋರಿಕೆಗೆ ಮಾಯೆ ಕಾರಣ. ಮಾಯೆಯನ್ನು ಭಗವದ್ಗೀತೆ "ಮಾಯಯಾ ಅಪಹೃತಜ್ಞಾನಾ:" ಎನ್ನುತ್ತದೆ. ಹಾಗೆಂದರೆ ಮಾಯೆ ಜನರ ತತ್ವಜ್ಞಾನದ ಸಾಮರ್ಥ್ಯವನ್ನು ಮರೆಸಿಬಿಟ್ಟಿದೆ. ಇಲ್ಲದ್ದನ್ನು ಇದ್ದಂತೆ, ಇದ್ದದ್ದನ್ನು ಇಲ್ಲದಂತೆ ತೋರಿಸುವುದೇ ಮಾಯೆ. ಕಗ್ಗ ಹೇಳುತ್ತದೆ, ಈ ಮೆರಗು ತುಂಬಿದ ಪ್ರಪಂಚ ಮಾಯೆಯ ಕಾರ್ಯ, ಆದರೆ ಮೂಲವಸ್ತು ಮಾತ್ರ ಬ್ರಹ್ಮವೇ.

ಪದಬಂಧ 5369

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮಿಡಿಯಲ್ಲಿರುವ ವಯ್ಯಾರಿ (5)
4. ಬಲವಿರುವ ಬಯಕೆ (3)
5. ಬೆಳ್ಳಿ ಇಲ್ಲಿದೆ (3)
6. ಕರ ಕಡಿಯಲು ಬಂದಿರುವ ಭಲ್ಲೂಕ (3)
8. ಜನರ ನಡುವಿರುವ ಮಂದಿ (2)
9. ಹೂವನ್ನು ಹೀಗೂ ಹೇಳುವರು (2)
10. ನಸುಕಿನಲ್ಲಿ ಬಿದ್ದ ಸ್ವಪ್ನ (3)
14. ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
15. ಕಣ್ಣಿಗೆ ಕಾಣದಿರುವುದು ಪಕ್ಷದಲ್ಲಿದೆ (3)
16. ವ್ಯಾಕರಣದಲ್ಲಿ ಒಂದು ವಸ್ತುವನ್ನು ಕುರಿತು ಹೇಳುವುದು (5)

ಮೇಲಿಂದ ಕೆಳಕ್ಕೆ
1. ಚಿನ್ನ ಇಲ್ಲಿದೆ (3)
2. ಕರವನ್ನು ತಟ್ಟಿ ಹೊಡೆದ ಚಪ್ಪಾಳೆ (5)
3. ಉಲ್ಟಾ ಆಗಿರುವ ಜರಡಿ (3)
4. ಆತಂಕ ಉಂಟುಮಾಡಿರುವ ಖೂನಿಗಾರ (3)
7. ತಿರುಗಿದಾಗ ಸವಿಯಾದುದು ಕಂಡಿದೆ (3)
8. ಜೋಪಾನಕ್ಕೊಂದು ಪರ್ಯಾಯ ಪದ (3)
9. ತಿರುಗಿ ನಿಂತು ಗುಂಪುಗಳಾಗಿ ವಿಂಗಡಿಸು (5)
11. ದವಸ ಧಾನ್ಯಗಳು ಸಮೃದ್ಧಿಯಾಗಿರುವ ಕಾಲ (3)
12. ಒಗ್ಗಟ್ಟು ಇಲ್ಲಿ ಉಲ್ಟಾ ಆಗಿದೆ (3)
13. ಸಂತನ ಪೀಳಿಗೆ ಇದು (3)



5368ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ವಿರಾಮ 4.ಕಣ್ಣೀರು
6.ಜಲಜನಕ 7.ಯಮ
9.ಮಾತು 10.ನಾಳ
11.ನಿಜ 13.ಗುಣವಾಚಕ
16.ಡೆರಬಿ 17.ರುಧಿರ

ಮೇಲಿಂದ ಕೆಳಕ್ಕೆ:
1.ವಿನಿಮಯ 2.ಮನುಜ
3.ಸಹಜ 4.ಕಳಂಕ
5.ರುಜುವಾತು 8.ಮರುಳ
9.ಮಾನಿನಿ 10.ನಾಯಿಕೊಡೆ
12.ಜನಿವಾರ 13.ಗುಲಾಬಿ
14.ವಾಗ್ದಾನ 15.ಕಶೇರು

ಸುಡೊಕು 5755

3					8	2	7	
	5		4	9				3
		8			2		5	
	3			4			8	
		1	7		5	6	2	
	6			1				
6			5	2		1		7
	1				4			
9		5		7		3		8

ಆಡುವುದು ಹೇಗೆ?


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5754 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3







ಎನ್‌ಸಿಪಿ ದೂರು • ಎಚ್ಚರಿಕೆಯಿಂದ ಓದಿದ್ದೇನೆ, ಸೂಕ್ತ ಕ್ರಮ ಕೈಗೊಳ್ಳುತ್ತೇನೆ – ಸ್ಪೀಕರ್

ಅಜಿತ್, ಬೆಂಬಲಿಗರ ಅನರ್ಹತೆಗೆ ಪಟ್ಟು

ಮುಂಬೈ (ಪಿಟಿಐ): ಪಕ್ಷದ ವಿರುದ್ಧ ಬಂಡಾಯ ವೆದ್ದು ಏಕನಾಥ ಶಿಂದೆ ನೇತೃತ್ವದ ಸರ್ಕಾರ ಸೇರಿರುವ ಅಜಿತ್ ಪವಾರ್ ಹಾಗೂ ಎಂಟು ಶಾಸಕರನ್ನು ವಿಧಾನಸಭೆ ಸದಸ್ಯತ್ವದಿಂದ ಅನರ್ಹಗೊಳಿಸಲು ಕೋರಿ ಸ್ಪೀಕರ್ ಅವರಿಗೆ ಎನ್‌ಸಿಪಿ ಅರ್ಜಿ ಸಲ್ಲಿಸಿದೆ. ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಶಿಸ್ತು ಸಮಿತಿ ಬಂಡಾಯ ಶಾಸಕರ ಅನರ್ಹತೆ ಕುರಿತು ನಿರ್ಣಯ ಅಂಗೀಕರಿಸಿದೆ.

ಅಜಿತ್ ಪವಾರ್ ಅವರ ಸ್ಥಾನದಲ್ಲಿ ವಿರೋಧ ಪಕ್ಷದ ನಾಯಕನಾಗಿ ನೇಮಕಗೊಂಡಿ ರುವ ಎನ್‌ಸಿಪಿಯ ಜಿತೇಂದ್ರ ಅಹ್ವಾದ್ ಅವರು ಈ ಸಂಬಂಧ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ಭಾನುವಾರವೇ ದೂರು ಸಲ್ಲಿಸಿದ್ದಾರೆ.

'ಒಂಭತ್ತು ಶಾಸಕರ ಈ ನಡೆಯು ತಕ್ಷಣವೇ ಸದಸ್ಯತ್ವದಿಂದ ಅನರ್ಹಗೊಳಿಸಲು ಯೋಗ್ಯವಾಗಿದೆ. ಇಂತಹ ಪಕ್ಷಾಂತರ ಕ್ರಿಯೆ ಪಕ್ಷದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಇವರನ್ನು ಶಾಸನಸಭೆ ಸದಸ್ಯರಾಗಿ ಮುಂದುವರಿಯಲು ಬಿಟ್ಟರೆ, ಪಕ್ಷದ ಹಿತಾಸಕ್ತಿಯನ್ನು ಹತ್ತಿಕ್ಕಲು ಅವರು ಇನ್ನಷ್ಟು ಯತ್ನಿಸಬಹುದು' ಎಂದು ಎನ್‌ಸಿಪಿ ಶಿಸ್ತು ಸಮಿತಿಯು ನಿರ್ಣಯದಲ್ಲಿ ಅಭಿಪ್ರಾಯಪಟ್ಟಿದೆ.

'ಪಕ್ಷಾಂತರ ಕ್ರಿಯೆಯನ್ನು ಗೌಪ್ಯವಾಗಿ ಜಾರಿಗೊಳಿಸಲಾಗಿದೆ. ಅಧ್ಯಕ್ಷರಿಗೆ ಅರಿವಿಲ್ಲದೆ, ಅವರ ಒಪ್ಪಿಗೆಯಿಲ್ಲದೇ ಪಕ್ಷದಿಂದ ನಿರ್ಗಮಿಸಿರುವುದು ಅವರ ಅನರ್ಹತೆಗೆ ಸೂಕ್ತವಾದುದು. ಪಕ್ಷದ ನಿಯಮಗಳು, ಸಂವಿಧಾನದ 10ನೇ ಪರಿಚ್ಛೇದದ ಅನುಸಾರ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕು. ಈ ಅಂಶವನ್ನು ಪಕ್ಷದ ಮುಖ್ಯಸ್ಥ ಶರದ್ ಪವಾರ್ ಗಮನಕ್ಕೂ ತರಲಾಗಿದೆ' ಎಂದು ತಿಳಿಸಿದೆ.

ಮಹಾರಾಷ್ಟ್ರ ಎನ್‌ಸಿಪಿ ಅಧ್ಯಕ್ಷ ಜಯಂತ್ ಪಾಟೀಲ್ ಅವರೂ, ಅಜಿತ್ ಪವಾರ್ ಮತ್ತು ಇತರೆ ಎಂಟು ಜನರ ಸದಸ್ಯತ್ವ ಅನರ್ಹತೆ ಕೋರಿ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗಕ್ಕೂ ಈ ಸಂಬಂಧ ಇ-ಮೇಲ್ ಸಂದೇಶ ಕಳುಹಿಸಿದೆ. ಶರದ್ ಪವಾರ್ 1999ರಲ್ಲಿ ಸ್ಥಾಪಿಸಿದ್ದ ಎನ್‌ಸಿಪಿ ಭಾನುವಾರ ಇಬ್ಭಾಗವಾಗಿದೆ. ಪಕ್ಷದಿಂದ ಬೇರ್ಪಟ್ಟು ಅಜಿತ್ ಪವಾರ್ ಅವರು ಶಿವಸೇನೆ–ಬಿಜೆಪಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಸೇರ್ಪಡೆಯಾಗಿದ್ದಾರೆ ಎಂಬುದನ್ನು ಗಮನಕ್ಕೆ ತರಲಾಗಿದೆ ಎಂದು ಹೇಳಿದ್ದಾರೆ.

ಕೋಮುವಾದಿಗಳ ವಿರುದ್ಧ ಹೋರಾಟ: ಈ ಮಧ್ಯೆ ಮಹಾರಾಷ್ಟ್ರ ಹಾಗೂ ದೇಶದಲ್ಲಿ ವಿಭಜನೆಯಲ್ಲಿ ತೊಡಗಿರುವ ಕೋಮುವಾದಿಗಳ ವಿರುದ್ಧ ಹೋರಾಟ ನಡೆಸಬೇಕಾದ ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸುವ ಅಗತ್ಯವಿದೆ ಎಂದು ಶರದ್ ಪವಾರ್ ಅವರು ಹೇಳಿದ್ದಾರೆ.

ಕರದ್‌ನಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ವಿರೋಧ ಪಕ್ಷಗಳನ್ನು ವಿಭಜನೆ ಮಾಡುವ ಬಿಜೆಪಿಯ ತಂತ್ರಗಾರಿಕೆಗೆ ನಮ್ಮ ಪಕ್ಷದ ಕೆಲವರು ಈಗ ಮಣಿದಿದ್ದಾರೆ ಎಂದು ಅಭಿಪ್ರಾಯಪಟ್ಟರು.




ಮಹಾರಾಷ್ಟ್ರದ ಕರಾಡ್‌ನಲ್ಲಿರುವ ಮಾಜಿ ಮುಖ್ಯಮಂತ್ರಿ ದಿ.ಯಶವಂತರಾವ್ ಚವಾಣ್ ಅವರ ಸ್ಮಾರಕಕ್ಕೆ ಆಗಮಿಸಿದ್ದ ಶರದ್ ಪವಾರ್ ಅವರನ್ನು ಸ್ವಾಗತಿಸಲು ನೆರೆದಿದ್ದ ಕಾರ್ಯಕರ್ತರು

ಮಹಾರಾಷ್ಟ್ರ: ದಿನದ ಬೆಳವಣಿಗೆಗಳು...

ಎನ್‌ಸಿಪಿ (ಶರದ್ ಪವಾರ್)

- ಪಕ್ಷ ಸಂಘಟನೆಗೆ ಬೀದಿಗಿಳಿದ ಶರದ್ ಪವಾರ್. ಪುಣೆಯಿಂದಕರಾಡ್‌ಗೆ ರಸ್ತೆ ಮೂಲಕ ಪ್ರಯಾಣ. ಕಾರ್ಯಕರ್ತರಿಂದ ಅಭೂತಪೂರ್ವ ಸ್ವಾಗತ.
- ಮುಂಬೈನ ವೈ.ವಿ.ಚವಾಣ್ ಸಭಾಂಗಣದಲ್ಲಿ ಬುಧವಾರ ಮಧ್ಯಾಹ್ನ 1ಕ್ಕೆ ಎನ್‌ಸಿಪಿ ಸಭೆ ಕರೆದ ಶರದ್ ಪವಾರ್.
- ಎನ್‌ಸಿಪಿ ಮುಖ್ಯಸಚೇತಕರಾಗಿ ಜಿತೇಂದ್ರ ಅಹ್ವಾದ್ ನೇಮಿಸಿದ ರಾಜ್ಯ ಘಟಕದ ಅಧ್ಯಕ್ಷ ಜಯಂತ್ ಪಾಟೀಲ್.
- ವಿಧಾನಸಭೆಯಲ್ಲಿ ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕನಾಗಿಯೂ ಜಿತೇಂದ್ರ ಅಹ್ವಾದ್ ನೇಮಕ.
- ಪ್ರಫುಲ್ ಪಟೇಲ್, ಸುನಿಲ್ ತತ್ಕರೆ ವಿರುದ್ಧ ಕಠಿಣ ಕ್ರಮಕ್ಕೆ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಒತ್ತಾಯ.



ಎನ್‌ಸಿಪಿ (ಅಜಿತ್ ಪವಾರ್)

- ಜಯಂತ್ ಪಾಟೀಲ್ ಮತ್ತು ವಿಪಕ್ಷ ನಾಯಕನಾಗಿ ನೇಮಕವಾದ ಜಿತೇಂದ್ರ ಅಹ್ವದ್ ಅನರ್ಹತೆ ಕೋರಿ ಸ್ಪೀಕರ್‌ಗೆ ಅಜಿತ್ ಪವಾರ್ ಪತ್ರ
- ಮಹಾರಾಷ್ಟ್ರ ಎನ್‌ಸಿಪಿ ಅಧ್ಯಕ್ಷ ಸ್ಥಾನದಿಂದ ಜಯಂತ್ ಪಾಟೀಲ್ ಪದಚ್ಯುತಗೊಳಿಸಿ ಪ್ರಫುಲ್ ಪಟೇಲ್ ಆದೇಶ
- ನೂತನ ಅಧ್ಯಕ್ಷರಾಗಿ ಸುನಿಲ್ ತತ್ಕರೆ ನೇಮಕ
- ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕನಾಗಿ ಅಜಿತ್ ಪವಾರ್ ನೇಮಿಸಿದ ಪ್ರಫುಲ್ ಪಟೇಲ್
- ಎನ್‌ಸಿಪಿ ಮುಖ್ಯ ಸಚೇತಕರಾಗಿ ಅನಿಲ್ ಪಾಟೀಲ್ ಮುಂದುವರಿಕೆ
- ಬುಧವಾರ ಬೆಳಿಗ್ಗೆ 11 ಗಂಟೆಗೆ ಎನ್‌ಸಿಪಿ ಸಭೆ ಕರೆದ ಪ್ರಫುಲ್.



ಯಾರು, ಏನೆಂದರು?

ಪಕ್ಷದಿಂದ ಬಂಡಾಯ ಎದ್ದಿರುವ ಅಜಿತ್ ಪವಾರ್ ಅವರಿಗೆ ನನ್ನ ಆಶೀರ್ವಾದವಿಲ್ಲ. ಕೇವಲ ಸಣ್ಣತನದ ಚಿಂತನೆಯನ್ನು ಉಳ್ಳವರು ಮಾತ್ರವೇ ಹೀಗೆ ಹೇಳಬಹುದು

ಶರದ್ ಪವಾರ್
ಎನ್‌ಸಿಪಿ ಮುಖ್ಯಸ್ಥ

ಬಿಜೆಪಿಯು ಮಹಾರಾಷ್ಟ್ರ ಮುಖ್ಯಮಂತ್ರಿ ಮಾಡಲಾಗುವುದು ಎಂದು ಅಜಿತ್ ಪವಾರ್ ಅವರಿಗೆ ಭರವಸೆ ನೀಡಿತ್ತು. ಈ ಬಗ್ಗೆ ತಮಗೆ ಮಾಹಿತಿ ಇದೆ

ಪೃಥ್ವಿರಾಜ್ ಚೌಹಾಣ್
ಕಾಂಗ್ರೆಸ್ ಹಿರಿಯ ಮುಖಂಡ

ಅಜಿತ್ ಪವಾರ್ ಮತ್ತು ಎಂಟು ಶಾಸಕರ ಸದಸ್ಯತ್ವದ ಅನರ್ಹತೆ ಕೋರಿ ಎನ್‌ಸಿಪಿ ಸಲ್ಲಿಸಿರುವ ದೂರು ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಅಜಿತ್ ಪವಾರ್ ಅವರಿಗೆ ಎಷ್ಟು ಶಾಸಕರ ಬೆಂಬಲವಿದೆ ಎಂಬ ಮಾಹಿತಿ ಇಲ್ಲ

ರಾಹುಲ್ ನಾರ್ವೇಕರ್
ಸ್ಪೀಕರ್

ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಯಾವಾಗಲೂ ರಾಷ್ಟ್ರೀಯತೆ ಬಗ್ಗೆ ತುತ್ತೂರಿ ಊದುತ್ತದೆ. ಆದರೆ, ಪಕ್ಷಗಳನ್ನು ಇಬ್ಭಾಗಿಸುವುದರಲ್ಲಿಯೇ ಮುಳುಗಿದೆ

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

ಎನ್‌ಸಿಪಿ ಬಣಗಳಿಂದ ಪರಸ್ಪರ ಶಿಸ್ತುಕ್ರಮ

ಒಂದನೇ ಪುಟದಿಂದ...

ಜಯಂತ್ ಪಾಟೀಲ್ ವಜಾ -ಪ್ರಫುಲ್: ಪ್ರತಿಯಾಗಿ, ಮತ್ತೊಂದು ಬೆಳವಣಿಗೆಯಲ್ಲಿ ಅಜಿತ್ ಪವಾರ್ ನೇತೃತ್ವದ ಬಣವು ಕೆಲ ಪದಾಧಿಕಾರಿಗಳನ್ನು ವಜಾ ಮಾಡಿದ್ದು, ಪ್ರತಿಕಾರ ಕ್ರಮಕ್ಕೆ ಮುಂದಾಗಿದೆ.

ಎನ್‌ಸಿಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಜಯಂತ್ ಪಾಟೀಲ್ ಅವರನ್ನು ವಜಾ ಮಾಡಿದ್ದು, ಅವರ ಸ್ಥಾನದಲ್ಲಿ ಸಂಸದ ಸುನಿಲ್ ತತ್ಕರೆ ಅವರನ್ನು ನೇಮಿಸಲಾಗಿದೆ ಎಂದು ಪಕ್ಷದ ಕಾರ್ಯಾಧ್ಯಕ್ಷರಾದ ಪ್ರಫುಲ್ ಪಟೇಲ್ ಪ್ರಕಟಿಸಿದ್ದಾರೆ.

ಪಕ್ಷದಿಂದ ಹೊರಬಂದು ಈಗ ಉಪ ಮುಖ್ಯಮಂತ್ರಿಯಾಗಿರುವ ಅಜಿತ್ ಪವಾರ್ ಅವರೇ ಇನ್ನು ಮುಂದೆ ವಿಧಾನಸಭೆಯಲ್ಲಿ ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕರಾಗಿರುತ್ತಾರೆ ಎಂದು ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಒಗ್ಗಟ್ಟಿಗೆ ನಿತೀಶ್ ಒತ್ತು

ಒಂದನೇ ಪುಟದಿಂದ...

ಮಾಜಿ ಉಪ ಮುಖ್ಯಮಂತ್ರಿ, ಬಿಜೆಪಿ ನಾಯಕ ಸುಶೀಲ್ ಮೋದಿ, 'ನಿತೀಶ್ ಕುಮಾರ್ ಅವರ ನಡೆಯಿಂದ ಹಲವು ಶಾಸಕರು, ಸಂಸದರಿಗೆ ಅಸಮಾಧಾನವಿದೆ. ಎರಡೂ ಪಕ್ಷಗಳ ಶಾಸಕರ ನಡುವೆ 16–17 ವರ್ಷಗಳಿಂದ ಸಹಜ ಬಾಂಧವ್ಯವಿದೆ. ಅವರೀಗ ತಮ್ಮ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ.

ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರು, 'ಪ್ರತಿಪಕ್ಷಗಳು ಒಗ್ಗೂಡಲು ಇದು ಸಕಾಲ' ಎಂದು ಹೇಳಿದ್ದಾರೆ.

ಮಣಿಪುರ: ವಸ್ತುಸ್ಥಿತಿ ವರದಿಗೆ 'ಸುಪ್ರೀಂ' ಸೂಚನೆ

ನವದೆಹಲಿ(ಪಿಟಿಐ): ಮಣಿಪುರದಲ್ಲಿ ಕಾನೂನು ಸುವ್ಯಸ್ಥೆ ಪಾಲನೆ ಮತ್ತು ಸಂತ್ರಸ್ತರ ಪುನರ್ವಸತಿಗೆ ಕೈಗೊಂಡಿರುವ ಕ್ರಮಗಳ ಕುರಿತು ಸವಿವರವಾದ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಮಣಿಪುರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿ ಗಳಾದ ಪಿ.ಎಸ್.ನರಸಿಂಹ, ಮನೋಜ್ ಮಿಶ್ರಾ ಅವರಿದ್ದ ನ್ಯಾಯ ಪೀಠ, ಮಣಿಪುರದ ಜನಾಂಗೀಯ ಹಿಂಸಾಚಾರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಜುಲೈ 10ಕ್ಕೆ ನಿಗದಿಪಡಿಸಿತು.

ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ವಸ್ತುಸ್ಥಿತಿ ವರದಿಗೆ ಸೂಚಿಸಿದ ಪೀಠ, ಪುನರ್ವಸತಿ ಶಿಬಿರಗಳು, ಕಾನೂನು ಸ್ಥಿತಿಗತಿ, ಶಸ್ತ್ರಾಸ್ತ್ರಗಳ ಜಪ್ತಿ ಸೇರಿದಂತೆ ಸಮಗ್ರವಾದ ವರದಿಯನ್ನು ಸಲ್ಲಿಸಲು ಆದೇಶಿಸಿತು. ಇದೇ ವೇಳೆ, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗೆ ನಿಯೋಜಿಸಿರುವ ಭದ್ರತಾ ಪಡೆಗಳು, ಪ್ರಸ್ತುತ ಸ್ಥಿತಿಗತಿ ಕುರಿತು ವಿವರಿಸಿದ ಸಾಲಿಸಿಟರ್ ಜನರಲ್, 'ರಾಜ್ಯದಲ್ಲಿ ಈಗ ಕರ್ಫ್ಯೂ ಅವಧಿಯನ್ನು 24 ಗಂಟೆಗಳಿಂದ 5 ಗಂಟೆಗೆ ಇಳಿಸಲಾಗಿದೆ. ಸ್ಥಳೀಯ ಪೊಲೀಸರ ಜೊತೆಗೆ ಹೆಚ್ಚುವರಿಯಾಗಿ ಭಾರತೀಯ ಮೀಸಲು ಬೆಟಾಲಿಯನ್‌ಗಳು ಹಾಗೂ ಸಿಎಪಿಎಫ್‌ನ 114 ತುಕಡಿಗಳನ್ನು ರಾಜ್ಯದಲ್ಲಿ ನಿಯೋಜನೆ ಮಾಡಲಾಗಿದೆ' ಎಂದು ತಿಳಿಸಿದರು.

ಕುಕಿ ಸಮುದಾಯವನ್ನು ಪ್ರತಿನಿಧಿ ಸುತ್ತಿರುವ ಹಿರಿಯ ವಕೀಲ ಕಾಲಿನ್ ಗೊನ್‌ಸಾಲ್ವೇಸ್ ಅವರು ಈ ಪ್ರಕರಣಕ್ಕೆ ಕೋಮುವಾದಿ ಆಯಾಮವನ್ನು ನೀಡ ಬಾರದು ಎಂದು ಅಭಿಪ್ರಾಯಪಟ್ಟರು.

ಗೊನ್‌ಸಾಲ್ವೇಸ್ ಅವರು ಇದೇ ಸಂದರ್ಭದಲ್ಲಿ, ರಾಜ್ಯದಲ್ಲಿ ಕುಕಿ ಸಮುದಾಯದವರ ವಿರುದ್ಧ ಸದ್ಯ ನಡೆಯುತ್ತಿರುವ ಹಿಂಸಾಚಾರ ರಾಜ್ಯ ಸರ್ಕಾರದ ಪ್ರಾಯೋಜಿತವಾದುದಾಗಿದೆ ಎಂದು ಪೀಠದ ಗಮನಕ್ಕೆ ತಂದರು.

ಮೇತಿ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಸ್ಥಾನಮಾನ ನೀಡುವ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಿಜೆಪಿ ಶಾಸಕ ಸಲ್ಲಿಸಿರುವ ಅರ್ಜಿಯು ಸೇರಿದಂತೆ ಮಣಿಪುರ ಸ್ಥಿತಿ ಕುರಿತು ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಬುಡಕಟ್ಟು ವರ್ಗದ ಎನ್‌ಜಿಒವೊಂದು ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಿ ರಾಜ್ಯದಲ್ಲಿ ನಡೆದಿರುವ ಹಿಂಸಾಕೃತ್ಯದ ತನಿಖೆಗೆ ಎಸ್‌ಐಟಿ ರಚಿಸಬೇಕು ಎಂದು ಮನವಿ ಮಾಡಿದೆ. ಕುಕಿ ಸಮುದಾಯದವರಿಗೆ ಸೇನಾ ರಕ್ಷಣೆಯನ್ನು ಒದಗಿಸಬೇಕು ಎಂದು ಮನವಿ ಮಾಡಿ ಎನ್‌ಜಿಒ ಮಣಿಪುರ ಟ್ರೈಬಲ್ ಫೋರಂ ಕೂಡಾ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಪುರುಷರ ಆಯೋಗ ರಚನೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಕೌಟುಂಬಿಕ ಹಿಂಸೆಯಿಂದ ವಿವಾಹಿತ ಪುರುಷರ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಹಾಗಾಗಿ, ಅವರ ಸುರಕ್ಷತೆಗೆ ರಾಷ್ಟ್ರೀಯ ಪುರುಷರ ಆಯೋಗ ರಚಿಸಬೇಕೆಂಬ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಳ್ಳಿಹಾಕಿದೆ.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ದೀಪಾಂಕರ್ ದತ್ತಾ ಅವರಿದ್ದ ವಿಭಾಗೀಯ ಪೀಠವು, ಈ ಕುರಿತು ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಒಲವು ತೋರಲಿಲ್ಲ.

'ನೀವು ಒಂದು ಬದಿಯ ಚಿತ್ರಣವನ್ನಷ್ಟೇ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತಿದ್ದೀರಿ. ವಿವಾಹವಾದ ತಕ್ಷಣವೇ ಯುವತಿಯರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂಬ ಬಗ್ಗೆ ನೀವು ಅಂಕಿ–ಅಂಶ ಕೊಡಲು ಸಾಧ್ಯವೇ? ಯಾರೊಬ್ಬರೂ ಸ್ವಯಂಪ್ರೇರಣೆಯಿಂದ ಆತ್ಮಹತ್ಯೆಗೆ ಇಚ್ಛಿಸುವುದಿಲ್ಲ. ಪ್ರತಿ ಪ್ರಕರಣಗಳ ಹಿಂದೆ ಬೇರೆಯದೆ ಆದ ಕಾರಣಗಳಿರುತ್ತವೆ' ಎಂದು ಪೀಠ ಹೇಳಿತು. ವಕೀಲ ಮಹೇಶ್ ಕುಮಾರ್ ತಿವಾರಿ, 2021ರ ಎನ್‌ಸಿಆರ್‌ಬಿ ವರದಿ ಆಧರಿಸಿ ಪಿಐಎಲ್ ಸಲ್ಲಿಸಿದ್ದರು.

ಅರ್ಜಿದಾರರ ವಾದವೇನು?: ಆ ವರ್ಷದಲ್ಲಿ ದೇಶದಾದ್ಯಂತ 1,64,033 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪೈಕಿ 81,063 ವಿವಾಹಿತ ಪುರುಷರು ಹಾಗೂ 28,680 ವಿವಾಹಿತ ಮಹಿಳೆಯರು ಇದ್ದಾರೆ. ವಿವಾಹಿತ ಪುರುಷರ ಆತ್ಮಹತ್ಯೆ ಹೆಚ್ಚಳಕ್ಕೆ ಕೌಟುಂಬಿಕ ಹಿಂಸೆಯೇ ಮೂಲ ಕಾರಣ. ಇದರ ತಡೆಗೆ ಕೇಂದ್ರ ಸರ್ಕಾರವು ಆಯೋಗವನ್ನೂ ರಚಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದರು.

ಕೌಟುಂಬಿಕ ಹಿಂಸೆ ಅಥವಾ ವೈವಾಹಿಕ ಸಮಸ್ಯೆಗಳು, ಮದುವೆ ವಿಷಯಕ್ಕೆ ಸಂಬಂಧಿಸಿದಂತೆ ವಿವಾಹಿತರ ಸಾವಿನ ಕಾರಣಗಳ ಬಗ್ಗೆ ಸಂಶೋಧನೆ ನಡೆಸಲು ಭಾರತೀಯ ಕಾನೂನು ಆಯೋಗಕ್ಕೂ ನಿರ್ದೇಶನ ನೀಡಬೇಕು ಎಂದು ಕೋರಿದ್ದರು.



370ನೇ ವಿಧಿ ರದ್ದತಿ: ಸಾಂವಿಧಾನಿಕ ಪೀಠ ರಚನೆ

ನವದೆಹಲಿ: ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡಿದ್ದ ಸಂವಿಧಾನದ 370ನೇ ವಿಧಿ ರದ್ದತಿಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಗೆ ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಸಾಂವಿಧಾನಿಕ ಪೀಠವನ್ನು ಸೋಮವಾರ ಸುಪ್ರೀಂಕೋರ್ಟ್ ರಚಿಸಿತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠವು ನ್ಯಾಯಮೂರ್ತಿ ಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್.ಗವಾಯಿ ಮತ್ತು ಸೂರ್ಯಕಾಂತ್ ಅವರನ್ನು ಒಳಗೊಂಡಿದೆ. ಇದು ಜುಲೈ 11ರಿಂದ ಅರ್ಜಿಗಳ ವಿಚಾರಣೆ ನಡೆಸಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅತೀಕ್ ಹತ್ಯೆ: 14ರಂದು ವಿಚಾರಣೆ

ನವದೆಹಲಿ (ಪಿಟಿಐ): ಗ್ಯಾಂಗ್‌ಸ್ಟರ್ ಮತ್ತು ರಾಜಕಾರಣಿ ಅತೀಕ್ ಅಹ್ಮದ್ ಮತ್ತು ಅಶ್ರಫ್ ಹತ್ಯೆ ಕುರಿತು ಸ್ವತಂತ್ರ ತನಿಖೆಗೆ ಕೋರಿ ಆತನ ಸಹೋದರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜುಲೈ 14ರಂದು ನಡೆಸಲಿದೆ.

ಪೊಲೀಸರ 'ವಶದಲ್ಲಿ' ಇದ್ದಾಗಲೇ ನಡೆದಿರುವ ಅತೀಕ್ ಅಹ್ಮದ್ ಮತ್ತು ಅಶ್ರಫ್ ಅವರ ಹತ್ಯೆ ಕೃತ್ಯದ ತನಿಖೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ಈ ಸಂಬಂಧ ಸಲ್ಲಿಸಲಾಗಿರುವ ಎರಡು ಪ್ರತ್ಯೇಕ ಅರ್ಜಿಗಳು ನ್ಯಾಯಮೂರ್ತಿಗಳಾದ ಎಸ್.ಆರ್.ಭಟ್ ಮತ್ತು ಅರವಿಂದ ಕುಮಾರ್ ಅವರಿದ್ದ ಪೀಠದ ಎದುರು ವಿಚಾರಣೆಗೆ ಬಂದಿತು.

'ಸುಪ್ರೀಂ'ನಲ್ಲಿ ಉಚಿತ ವೈಫೈ'

ನವದೆಹಲಿ (ಪಿಟಿಐ): ನ್ಯಾಯಾಂಗ ವ್ಯವಸ್ಥೆಯಲ್ಲಿ ಡಿಜಿಟಲೀಕರಣದತ್ತ ಮಹತ್ವದ ಹೆಜ್ಜೆ ಇಟ್ಟಿರುವ ಸುಪ್ರೀಂ ಕೋರ್ಟ್, ತನ್ನ ಆವರಣದಲ್ಲಿ ವಕೀಲರು, ಮಾಧ್ಯಮದವರು, ಅರ್ಜಿದಾರರು ಸೇರಿದಂತೆ ಇತರರಿಗೆ ಉಚಿತ ವೈಫೈ ಸೌಲಭ್ಯ ಕಲ್ಪಿಸಿದೆ.

'ಸುಪ್ರೀಂ ಕೋರ್ಟಿನ ಮೊದಲ ಐದು ನ್ಯಾಯಾಲಯಗಳ ಕೊಠಡಿಗಳಲ್ಲಿ ಉಚಿತ ವೈಫೈ ಸೌಲಭ್ಯ ಕಲ್ಪಿಸಲಾಗಿದ್ದು, ಕೋರ್ಟ್ ಹಾಲ್‌ಗಳಲ್ಲಿ ಕಾನೂನು ಪುಸ್ತಕಗಳಾಗಲಿ, ಪತ್ರಿಕೆಗಳಾಗಲಿ ಇರುವುದಿಲ್ಲ. ಇನ್ನು ಮುಂದೆ ನಾವು ಪುಸ್ತಕಗಳನ್ನು ಅವಲಂಬಿಸುವಂತಿಲ್ಲ' ಎಂದು ಸಿಜೆಐ ಘೋಷಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಐಎಂಎಫ್‌ನಿಂದ ಮತ್ತೆ ಸಾಲ ಪಡೆಯಲು ಮುಂದಾದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಸಾಲದ ಸುಳಿಯಲ್ಲಿ ಸಿಲುಕಿರುವ ಪಾಕಿಸ್ತಾನ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್)ಯಿಂದ ಮುಂದಿನ ಒಂಬತ್ತು ತಿಂಗಳಲ್ಲಿ ಮತ್ತೆ ₹24,571 ಕೋಟಿ (3 ಬಿಲಿಯನ್ ಡಾಲರ್) ಸಾಲ ಪಡೆಯಲಿದೆ. ಇದರೊಂದಿಗೆ ಐಎಂಎಫ್‌ನಿಂದ ಅತಿ ಹೆಚ್ಚು ಸಾಲ ಪಡೆದ ನಾಲ್ಕನೇ ದೇಶ ಎನಿಸಿಕೊಳ್ಳಲಿದೆ.

ಒಪ್ಪಂದಕ್ಕೆ ಐಎಂಎಫ್ ಮಂಡಳಿಯು ಇನ್ನಷ್ಟೇ ಅನುಮೋದನೆ ನೀಡಬೇಕಿದೆ.

ಫ್ರಾನ್ಸ್: ತಗ್ಗಿದ ಹಿಂಸಾಚಾರ

ಪ್ಯಾರಿಸ್ (ಎಪಿ): 17 ವರ್ಷದ ಯುವಕನನ್ನು ಪೊಲೀಸರು ಗುಂಡಿಟ್ಟು ಕೊಂದ ನಂತರ ಫ್ರಾನ್ಸ್‌ನಾದ್ಯಂತ ಭುಗಿಲೆದ್ದಿದ್ದ ಹಿಂಸಾಚಾರ ಸೋಮವಾರ ಸ್ವಲ್ಪಮಟ್ಟಿಗೆ ನಿಯಂತ್ರಣಕ್ಕೆ ಬಂದಿತ್ತು. ಆದರೂ ಹಲವೆಡೆ ಉದ್ರಿಕ್ತ ಪ್ರತಿಭಟನಕಾರರು ಸಾರ್ವಜನಿಕ ಕಟ್ಟಡಗಳು, ಕಾರುಗಳನ್ನು ಗುರಿಯಾಗಿಸಿಕೊಂಡು ಬೆಂಕಿ ಇಟ್ಟು, ಧ್ವಂಸಗೊಳಿಸಿದರು. 'ಭಾನುವಾರ ರಾತ್ರಿ 157 ಪ್ರತಿಭಟನಕಾರರನ್ನು ಬಂಧಿಸಲಾಗಿದೆ. ಇದರೊಂದಿಗೆ ಒಟ್ಟು 3,354 ಜನರನ್ನು ಬಂಧಿಸಿದಂತಾಗಿದೆ' ಎಂದು ಸಚಿವಾಲಯ ತಿಳಿಸಿದೆ.

ಅಂತರರಾಷ್ಟ್ರೀಯ ನೆರವು ಕೇಂದ್ರ ಸ್ಥಾಪನೆ

ದಿ ಹೇಗ್, ನೆದರ್‌ಲೆಂಡ್ (ಎಪಿ): ಉಕ್ರೇನ್ ಆಕ್ರಮಣದಲ್ಲಿನ ಯುದ್ಧ ಅಪರಾಧಗಳಿಗೆ ರಷ್ಯಾದ ನಾಯಕತ್ವ ಮತ್ತು ಆ ದೇಶದ ಹಿರಿಯ ನಾಯಕರನ್ನು ಹೊಣೆಯಾಗಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ತನಿಖೆಗೆ ನೆರವಾಗಲು ಅಂತರರಾಷ್ಟ್ರೀಯ ಕೇಂದ್ರವೊಂದನ್ನು ದಿ ಹೇಗ್‌ನಲ್ಲಿ ಸೋಮವಾರ ತೆರೆಯಲಾಗಿದೆ.

ಈ ಕೇಂದ್ರವು ಐರೋಪ್ಯ ಒಕ್ಕೂಟದ ನ್ಯಾಯಾಂಗ ಸಹಕಾರ ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಕಾರ್ಯಾರಂಭ ಮಾಡಿದೆ. ಇದು ಆರೋಪಿಗಳ ವಿರುದ್ಧ ದೋಷಾರೋಪ, ಬಂಧನ ವಾರಂಟ್ ಹೊರಡಿಸುವುದಿಲ್ಲ. ಅದರ ಬದಲಿಗೆ, ಈಗಾಗಲೇ ಉಕ್ರೇನ್ , ಎಸ್ಟೋನಿಯಾ, ಲಿಥುವೇನಿಯಾ ಮತ್ತು ಪೋಲೆಂಡ್‌ನಲ್ಲಿ ನಡೆಯುತ್ತಿರುವ ಅಂತರರಾಷ್ಟ್ರೀಯ ನ್ಯಾಯಾಲಯದ ತನಿಖೆಗಳಿಗೆ ಬೆಂಬಲ ನೀಡಲಿದೆ.

ಸೀನಿಯರ್ ಈಜು ಚಾಂಪಿಯನ್‌ಷಿಪ್: ಕರ್ನಾಟಕಕ್ಕೆ ಮತ್ತೆ 5 ಚಿನ್ನ

ಹಷಿಕಾ ರಾಷ್ಟ್ರೀಯ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಸ್ಪರ್ಧಿಗಳ ಪಾರಮ್ಯ ಮುಂದುವರಿದಿದ್ದು, ಹಷಿಕಾ ರಾಮಚಂದ್ರ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಹೈದರಾಬಾದ್‌ನ ಗಚ್ಚಿಬೌಲಿ ಕ್ರೀಡಾಂಗಣದ ಈಜುಕೊಳದಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ ಕರ್ನಾಟಕದ ಈಜುಪಟುಗಳು ಸೋಮವಾರ ಐದು ಚಿನ್ನದ ಪದಕ ಜಯಿಸಿದರು.

ಮಹಿಳೆಯರ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಹಷಿಕಾ 2 ನಿ. 21.15 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ರಿಚಾ ಮಿಶ್ರಾ (2 ನಿ. 23.62 ಸೆ.) ಅವರು 2010 ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು ಅವರು ಮುರಿದರು. ಹಷಿಕಾ ಅವರಿಗೆ ಪ್ರಬಲ ಪೈಪೋಟಿ ನೀಡಿದ ಮಹಾರಾಷ್ಟ್ರದ ಅಪೇಕ್ಷಾ ಫರ್ನಾಂಡಿಸ್ ಎರಡನೇ ಸ್ಥಾನ ಗಳಿಸಿದರು.



ಹಷಿಕಾ ರಾಮಚಂದ್ರ

ಪುರುಷರ 200 ಮೀ. ಮೆಡ್ಲೆಯಲ್ಲಿ ಚಿನ್ನ ಮತ್ತು ಬೆಳ್ಳಿ ಕರ್ನಾಟದ ಪಾಲಾಯಿತು. ಎಸ್.ಶಿವ (2 ನಿ.6.08 ಸೆ.) ಅಗ್ರಸ್ಥಾನ ಪಡೆದರೆ, ಶೋಯನ್ ಗಂಗೂಲಿ (2 ನಿ. 7.71 ಸೆ.) ಎರಡನೇ ಸ್ಥಾನ ಗಳಿಸಿದರು.

ಪುರುಷರ 100 ಮೀ. ಫ್ರೀಸ್ಟೈಲ್‌ನಲ್ಲಿ ತನಿಷ್ ಜಾರ್ಜ್ ಮ್ಯಾಥ್ಯೂ 50.90 ಸೆ.ಗಳೊಂದಿಗೆ ಅಗ್ರಸ್ಥಾನ ಪಡೆದರು. ಎಸ್‌ಎಸ್‌ಸಿಬಿಯ ಆನಂದ್ (51.09 ಸೆ.) ಮತ್ತು ದೆಹಲಿಯ ವಿಶಾಲ್ ಗ್ರೆವಾಲ್ ಅವರನ್ನು ಹಿಂದಿಕ್ಕುವಲ್ಲಿ ತನಿಷ್ ಯಶಸ್ವಿಯಾದರು.

ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ 33.25 ಸೆ.ಗಳೊಂದಿಗೆ ಮಾನವಿ ವರ್ಮಾ ಚಿನ್ನ ಗೆದ್ದರೆ, ಎ.ಕೆ.ಲಿನೇಶಾ (33.86 ಸೆ.) ಅವರು ಎರಡನೆಯವರಾದರು. ಲಿನೇಶಾ ಅವರು ಭಾನುವಾರ 200 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು.

ಕರ್ನಾಟಕದ ಮತ್ತೊಂದು ಚಿನ್ನ 4X100 ಮೀ. ಫ್ರೀಸ್ಟೈಲ್ ಮಿಕ್ಸಡ್ ರಿಲೇ ಸ್ಪರ್ಧೆಯಲ್ಲಿ ಬಂತು. ತನಿಷ್ ಜಾರ್ಜ್, ಶಾಲಿನಿ ಆರ್.ದೀಕ್ಷಿತ್, ನೀನಾ ವೆಂಕಟೇಶ್ ಮತ್ತು ಅನೀಶ್ ಎಸ್. ಗೌಡ ಅವರನ್ನೊಳಗೊಂಡ ತಂಡ 3 ನಿ. 42.92 ಸೆ.ಗಳಲ್ಲಿ ಗುರಿ ತಲುಪಿತು. ಬೆಳ್ಳಿ ಹಾಗೂ ಕಂಚು ಕ್ರಮವಾಗಿ ಆರ್‌ಎಸ್‌ಪಿಬಿ ಮತ್ತು ಮಹಾರಾಷ್ಟ್ರ ತಂಡಗಳ ಪಾಲಾದವು.

ಮುಖ್ಯಾಂಶಗಳು

- ಮಹಿಳೆಯರ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಸಾಧನೆ
- 2 ನಿ. 21.15 ಸೆ.ಗಳಲ್ಲಿ ಗುರಿ ತಲುಪಿದ ಹಷಿಕಾ
- ಶಿವ, ತನಿಷ್, ಮಾನವಿಗೆ ಚಿನ್ನ

ಪುರುಷರ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅನೀಶ್ ಎಸ್.ಗೌಡ 8 ನಿ.16.92 ಸೆ.ಗಳೊಂದಿಗೆ ಕಂಚಿನ ಪದಕ ತಮ್ಮದಾಗಿಸಿಕೊಂಡರು. 100 ಮೀ. ಫ್ರೀಸ್ಟೈಲ್‌ನಲ್ಲಿ ನಾಲ್ಕನೇ ಸ್ಥಾನ ಪಡೆದು, ಕಂಚಿನ ಪದಕವನ್ನು ಅಲ್ಪ ಅಂತರದಲ್ಲಿ ಕಳೆದುಕೊಂಡರು.

ಮಹಿಳೆಯರ 100 ಮೀ. ಫ್ರೀಸ್ಟೈಲ್‌ನಲ್ಲಿ ಧೀನಿಧಿ ದೇಸಿಂಗು ಮೂರನೇ ಸ್ಥಾನ ಪಡೆದರು. ಅವರು ಸ್ಪರ್ಧೆ ಕೊನೆಗೊಳಿಸಲು 58.07 ಸೆ.ಗಳನ್ನು ತೆಗೆದುಕೊಂಡರು. ಪುರುಷರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಡಿ.ಎಸ್.ಪೃಥ್ವಿಕ್ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

ಕೆನಡಾ ಓಪನ್: ಸಿಂಧು, ಸೇನ್ ಮೇಲೆ ನಿರೀಕ್ಷೆ

ಕಾಲ್ಗರಿ, ಕೆನಡಾ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ಕೆನಡಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ.

27 ವರ್ಷದ ಸಿಂಧು ಅವರು ಗಾಯದಿಂದ ಚೇತರಿಸಿಕೊಂಡು ಮರಳಿದ ಬಳಿಕ ಯಾವುದೇ ಟೂರ್ನಿ ಜಯಿಸಿಲ್ಲ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿದ್ದ ಅವರು ಈಗ 12ನೇ ಸ್ಥಾನಕ್ಕೆ ಕುಸಿತ ಕಂಡಿದ್ದಾರೆ.

ಸಿಂಧು ಅವರು ಏಪ್ರಿಲ್‌ನಲ್ಲಿ ನಡೆದಿದ್ದ ಮ್ಯಾಡ್ರಿಡ್ ಮಾಸ್ಟರ್ಸ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು. ಆ ಬಳಿಕ ಪಾಲ್ಗೊಂಡ ಎರಡು ಟೂರ್ನಿಗಳಲ್ಲಿ ಮೊದಲ ಸುತ್ತಿನಲ್ಲೂ, ಇನ್ನೊಂದು ಟೂರ್ನಿಯಲ್ಲಿ ಎರಡನೇ ಸುತ್ತಿನಲ್ಲೂ ಸೋತಿದ್ದರು. ಸಿಂಧು ಮೊದಲ ಸುತ್ತಿನಲ್ಲಿ ಸ್ಥಳೀಯ ಸ್ಪರ್ಧಿ ತಲಿಯಾ ಎಂಗ್ ಅವರ ಸವಾಲನ್ನು ಎದುರಿಸುವರು.

ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಲಕ್ಷ್ಯ ಸೇನ್ ಕೂಡಾ ಹಳೆಯ ಫಾರ್ಮ್‌ಗೆ ಮರಳು ಪ್ರಯತ್ನದಲ್ಲಿದ್ದಾರೆ.

ಇ.ಡಿಯಿಂದ ಅನಿಲ್ ಅಂಬಾನಿ ವಿಚಾರಣೆ



ಅನಿಲ್ ಅಂಬಾನಿ

ಮುಂಬೈ (ಪಿಟಿಐ): ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಎಫ್‌ಇಎಂಎ) ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ರಿಲಯನ್ಸ್ ಎಡಿಎ ಸಮೂಹದ ಮುಖ್ಯಸ್ಥ ಅನಿಲ್ ಅಂಬಾನಿ ಅವರು ಸೋಮವಾರ ಜಾರಿ ನಿರ್ದೇಶನಾಲಯದ (ಇ.ಡಿ) ಇಲ್ಲಿನ ಕಚೇರಿ ಎದುರು ಹಾಜರಾಗಿ ವಿಚಾರಣೆ ಎದುರಿಸಿದ್ದು, ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೆಸ್ ಬ್ಯಾಂಕ್ ಪ್ರವರ್ತಕ ರಾಣಾ ಕಪೂರ್ ಮತ್ತಿತರರ ವಿರುದ್ಧ ದಾಖಲಾಗಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 2020ರಲ್ಲಿ ಅನಿಲ್ ಅಂಬಾನಿ ಇ.ಡಿ ವಿಚಾರಣೆ ಎದುರಿಸಿದ್ದರು.

₹420 ಕೋಟಿ ತೆರಿಗೆ ವಂಚನೆ ಪ್ರಕರಣ ಸಂಬಂಧ ಕಳೆದ ವರ್ಷ ಆದಾಯ ತೆರಿಗೆ ಇಲಾಖೆಯು ಅನಿಲ್ ಅಂಬಾನಿ ಅವರಿಗೆ ನೋಟಿಸ್ ಜಾರಿ ಮಾಡಿತ್ತು. ಕಳೆದ ಮಾರ್ಚ್ ತಿಂಗಳಿನಲ್ಲಿ ಬಾಂಬೆ ಹೈಕೋರ್ಟ್ ಷೋಕಾಸ್ ನೋಟಿಸ್ ಮತ್ತು ದಂಡಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿತ್ತು.

ವಿಂಬಲ್ಡನ್: ಎರಡನೇ ಸುತ್ತಿಗೆ ಮುನ್ನಡೆದ ಶ್ರೇಯಾಂಕ ಆಟಗಾರರು

ಶ್ವಾಂಟೆಕ್, ಜೊಕೊವಿಚ್ ಶುಭಾರಂಭ

ವಿಂಬಲ್ಡನ್ (ರಾಯಿಟರ್ಸ್): ಹುಲ್ಲಿನಂಕಣದಲ್ಲಿ ಮೊದಲ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ಯತ್ನದಲ್ಲಿರುವ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್, ಸೋಮವಾರ ಆರಂಭವಾದ ವಿಂಬಲ್ಡನ್ ಟೂರ್ನಿಯ ಮೊದಲ ಸುತ್ತಿನಲ್ಲಿ 6–1, 6–3 ರಿಂದ ಚೀನಾ ಝು ಲಿನ್ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು.

ಕಳೆದ ತಿಂಗಳು ಮೂರನೇ ಬಾರಿ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದುಕೊಂಡ 22 ವರ್ಷದ ಪೋಲೆಂಡ್‌ನ ಆಟಗಾರ್ತಿ, ವಿಂಬಲ್ಡನ್‌ನಲ್ಲಿ ಇಲ್ಲಿಯವರೆಗೆ ನಾಲ್ಕನೇ ಸುತ್ತನ್ನು ದಾಟಿಲ್ಲ. ಆದರೆ ಮೊದಲ ಸುತ್ತಿನಲ್ಲಿ ವಿಶ್ವ ಕ್ರಮಾಂಕದಲ್ಲಿ 34ನೇ ಸ್ಥಾನದಲ್ಲಿರುವ ಝು ವಿರುದ್ಧ ಗೆಲ್ಲಲು ಪ್ರಯಾಸಪಡಲಿಲ್ಲ.

ಅಮೆರಿಕದ ಆಟಗಾರ್ತಿಯರಿದ್ದ ಮೊದಲ ಸುತ್ತಿನ ಇನ್ನೊಂದು ಸೆಣಸಾಟದಲ್ಲಿ ನಾಲ್ಕನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ 6–2, 6–7 (8–10), 6–3 ರಿಂದ ಲಾರೆನ್ ಡೇವಿಸ್ ವಿರುದ್ಧ ಜಯಗಳಿಸಿದರು.

ಪುರುಷರ ವಿಭಾಗದಲ್ಲಿ ಎರಡನೇ ಶ್ರೇಯಾಂಕ ಪಡೆದಿರುವ ಸರ್ಬಿಯದ ನೊವಾಕ್ ಜೊಕೊವಿಚ್ 6–3, 6–3, 7–6 ರಲ್ಲಿ ಅರ್ಜೆಂಟೀನಾದ ಪೆಡ್ರಿ ಕಾಚಿನ್ ವಿರುದ್ಧ ಗೆದ್ದರು.



ಇಗಾ ಶ್ವಾಂಟೆಕ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ಏಳನೇ ಶ್ರೇಯಾಂಕದ ಪಡೆದಿರುವ, ಆಂಡ್ರೆ ರುಬ್ಲೇವ್ ಮೂರನೇ ಕೋರ್ಟ್‌ನಲ್ಲಿ 6–3, 7–5, 6–4 ರಿಂದ ಮ್ಯಾಕ್ಸ್ ಪರ್ಸೆಲ್ (ಆಸ್ಟ್ರೇಲಿಯಾ) ವಿರುದ್ಧ ಜಯಗಳಿಸಿ ಎರಡನೇ ಸುತ್ತಿಗೆ ಮುನ್ನಡೆದರು. ವಿಂಬಲ್ಡನ್‌ಗೆ ಮರಳಿದ ನಂತರ ಗೆದ್ದ ರಷ್ಯಾದ ಮೊದಲ ಆಟಗಾರ ಎನಿಸಿದರು.

14ನೇ ಶ್ರೇಯಾಂಕದ ಲೊರೆಂಜೊ ಮುಸೆಟ್ಟಿ (ಇಟಲಿ) 6–3 6–1, 7–5 ರಿಂದ ಪೆರುವಿನ ಜುವಾನ್ ಪಾಬ್ಲೊ ವೆರಿಲ್ಲಾಸ್ ಅವರನ್ನು ಸೋಲಿಸಿದರು.

ಮಹಿಳೆಯರ ವಿಭಾಗದಲ್ಲಿ ವಿಶ್ವದ ಮಾಜಿ ನಂಬರ್ ವನ್ ಆಟಗಾರ್ತಿ ವಿಕ್ಟೋರಿಯಾ ಅಜರೆಂಕಾ (ಬೆಲಾರಸ್) 6–4, 5–7, 6–4 ರಿಂದ ಚೀನಾದ ಯುವಾನ್ ಯೆ ಮೇಲೆ ಜಯಗಳಿಸಿದರೆ, ರಷ್ಯಾದ ಆಟಗಾರ್ತಿ ವೆರೋನಿಕಾ ಕುದೆರ್‌ಮೆಟೆವಾ, ಎಸ್ಟೊನಿಯಾದ ಕೆಯಿಯಾ ಕನೆಪಿ ಮೇಲೆ ಜಯಗಳಿಸಿದರು.

ವೀನಸ್‌ಗೆ ನಿರಾಸೆ: 43 ವರ್ಷದ ವೀನಸ್ ವಿಲಿಯಮ್ಸ್ 4–6, 3–6 ರಲ್ಲಿ ಎಲಿನಾ ಸ್ವಿಟೊಲಿನಾ ಎದುರು ಸೋತರು.

ಫೆಡರರ್‌ಗೆ ಇಂದು ಗೌರವ

ರೋಜರ್ ಫೆಡರರ್ ಮಂಗಳವಾರ ವಿಂಬಲ್ಡನ್ ಸೆಂಟರ್ ಕೋರ್ಟ್‌ಗೆ ಮರಳಲಿದ್ದಾರೆ. ಆದರೆ ಈ ಬಾರಿ ಆಟಗಾರನಾಗಿ ಅಲ್ಲ; ಇಲ್ಲಿನ ಹುಲ್ಲಿನಂಕಣದಲ್ಲಿ ದಾಖಲೆ ಸಾಧನೆಗಾಗಿ ಗೌರವ ಸ್ವೀಕರಿಸಲು.

ಕಳೆದ ವರ್ಷ ನಿವೃತ್ತಿ ಪ್ರಕಟಿಸಿದ್ದ ಸ್ವಿಜರ್ಲೆಂಡ್‌ನ ಈ ಆಟಗಾರ ವೃತ್ತಿ ಜೀವನದಲ್ಲಿ ಜಯಿಸಿರುವ 20 ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಎಂಟನ್ನು ಅಲ್ ಇಂಗ್ಲೆಂಡ್ ಕ್ಲಬ್‌ನಲ್ಲೇ ಗೆದ್ದುಕೊಂಡಿದ್ದಾರೆ. ಪುರುಷರ ವಿಭಾಗದಲ್ಲಿ ಅತಿ ಹೆಚ್ಚು ಸಿಂಗಲ್ಸ್ ಪ್ರಶಸ್ತಿ ಗೆದ್ದ ದಾಖಲೆ ಸದ್ಯ ಅವರ ಹೆಸರಿನಲ್ಲಿದೆ.

ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಬಾರಿ ಫೆಡರರ್ ಸಾಧನೆ ಸರಿಗಟ್ಟಲು ಯತ್ನಿಸಲಿದ್ದಾರೆ.

ವಿಶ್ವಕಪ್ ಅರ್ಹತಾ ಟೂರ್ನಿ: ಒಮಾನ್ ವಿರುದ್ಧ ಜಯ

ನೆದರ್ಲೆಂಡ್ಸ್ ತಂಡದ ಆಸೆ ಜೀವಂತ

ಹರಾರೆ (ಎಎಫ್‌ಪಿ): ಏಕದಿನ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಯತ್ನದಲ್ಲಿರುವ ನೆದರ್ಲೆಂಡ್ಸ್ ತಂಡ ಸೋಮವಾರ ನಡೆದ ಅರ್ಹತಾ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಒಮಾನ್ ವಿರುದ್ಧ ಸುಲಭ ಜಯ ಗಳಿಸಿದೆ.

ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್ 48 ಓವರುಗಳಲ್ಲಿ 7 ವಿಕೆಟ್‌ಗೆ 362 ರನ್ ಗಳಿಸಿತು. ಈ ಹಂತದಲ್ಲಿ ಮಂದ ಬೆಳಕು, ಮಳೆಯಿಂದ ಪಂದ್ಯಕ್ಕೆ ಕೆಲಕಾಲ ಅಡ್ಡಿಯಾಯಿತು. ನಂತರ ಡಕ್‌ವರ್ತ್ ಲೂಯಿಸ್ ನಿಯಮದಡಿ ಒಮಾನ್ ಗೆಲುವಿಗೆ 44 ಓವರುಗಳಲ್ಲಿ 321 ರನ್ ಗಳಿಸುವ ಸವಾಲು ನೀಡಲಾಯಿತು. ಒಮಾನ್ ತಂಡ 6 ವಿಕೆಟ್‌ಗೆ 244 ರನ್ ಗಳಿಸಲು ಮಾತ್ರ ಶಕ್ತವಾಗಿ, ಎದುರಾಳಿ ತಂಡ 74 ರನ್‌ಗಳ ಜಯಪಡೆಯಿತು.


ನೆದರ್ಲೆಂಡ್ಸ್ ಪರ ಆರಂಭ ಆಟಗಾರ ವಿಕ್ರಮ್‌ಜಿತ್ ಸಿಂಗ್ 109 ಎಸೆತಗಳಲ್ಲಿ 110 ರನ್ ಹೊಡೆದರೆ, ಮಧ್ಯಮ ಕ್ರಮಾಂಕದಲ್ಲಿ ವೆಸ್ಲಿ ಬರೆಸಿ ಬ್ಯಾಟ್ ಬೀಸಿ 65 ಎಸೆತಗಳಲ್ಲಿ 97 ರನ್ ಬಾರಿಸಿದರು. ಇದರಲ್ಲಿ 10 ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು. ಒಮಾನ್ ಪರ ಮಧ್ಯಮ ಕ್ರಮಾಂಕದ ಆಟಗಾರ ಅಯಾನ್ ಖಾನ್ 92 ಎಸೆತಗಳಲ್ಲಿ 105 ರನ್ ಹೊಡೆದು ಹೋರಾಟ ತೋರಿದರು. ಅವರ ಆಟದಲ್ಲಿ 11 ಬೌಂಡರಿ, ಎರಡು ಸಿಕ್ಸರ್‌ಗಳಿದ್ದವು.



ಶತಕ ಗಳಿಸಿದ ಸಂಭ್ರಮದಲ್ಲಿ ವಿಕ್ರಮ್‌ಜಿತ್ ಸಿಂಗ್ –ಎಪಿ ಚಿತ್ರ

ಈ ದೊಡ್ಡ ಗೆಲುವಿನ ಅಂತರದಿಂದ ನೆದರ್ಲೆಂಡ್ ರನ್ ದರ ಏರಿಕೆಯಾಗಿದೆ. ಮಂಗಳವಾರ ಆತಿಥೇಯ ಜಿಂಬಾಬ್ವೆ, ಸ್ಕಾಟ್ಲೆಂಡ್ ವಿರುದ್ಧ ಗೆದ್ದರೆ ಎರಡನೇ ತಂಡವಾಗಿ ವಿಶ್ವಕಪ್‌ಗೆ ಅರ್ಹತೆ ಪಡೆಯಲಿದೆ. ಒಂದೊಮ್ಮೆ ಸೋತರೆ ಗುರುವಾರ ನಡೆಯುವ ಸ್ಕಾಟ್ಲೆಂಡ್– ನೆದರ್ಲೆಂಡ್ಸ್ ನಡುವಣ ಪಂದ್ಯ ನಿರ್ಣಾಯಕ ಆಗಲಿದೆ. ಶ್ರೀಲಂಕಾ ಈಗಾಗಲೇ ಅರ್ಹತೆ ಪಡೆದಿದೆ.

ಷೇರುಪೇಟೆ ವಹಿವಾಟು ▲487



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,189
ಇಂದಿನ ಅಂತ್ಯ	19,322
▲	133
ದಿನದ ಗರಿಷ್ಠ	19,345

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹14400
ಎಸಿ	₹7280
ಆರ್‌ಪಿ	₹10000
ಆರ್‌ಸಿ	₹5950

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹580
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹580

ಖಾದ್ಯ ತೈಲ ಮುಂಬೈ (10 ಕೆಜಿಗೆ)



ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹970 (960)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹877 (865)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಬೆಂಗಳೂರು	₹11000-12500
ಕೆ.ಆರ್. ಪೇಟೆ	₹7900-7900
ತುರುವೇಕೆರೆ	₹7700-7700

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)



ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹145.50
ಗುಡ್ ಲಾಟ್	₹127

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹245-395
ದ್ವಿತಳಿ (ಬಿ.ವಿ)	₹244-540

₹298 ಲಕ್ಷ ಕೋಟಿಗೆ ಏರಿದ ಬಿಎಸ್‌ಇ ಮಾರುಕಟ್ಟೆ ಮೌಲ್ಯ

65 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಗೂಳಿ ಓಟ ಜೋರಾಗಿದ್ದು, ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲಿಗೆ 65 ಸಾವಿರದ ಗಡಿ ದಾಟಿದೆ. ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 487 ಅಂಶ ಏರಿಕೆ ಕಂಡು 65,205 ಅಂಶಗಳಿಗೆ ತಲುಪಿತು. ವಹಿವಾಟಿನ ಒಂದು ಹಂತದಲ್ಲಿ 65,300 ಅಂಶಗಳಿಗೂ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 133 ಅಂಶ ಏರಿಕೆ ಕಂಡು 19,322 ಅಂಶಗಳ ದಾಖಲೆ ಮಟ್ಟದಲ್ಲಿ ವಹಿವಾಟು ಅಂತ್ಯಗೊಂಡಿತು.

ಜೂನ್ ತಿಂಗಳ ಜಿಎಸ್‌ಟಿ ಸಂಗ್ರಹ ಹೆಚ್ಚಾಗಿರುವುದು, ಮುಂಗಾರು ಮಳೆಯು ದೇಶದ ಬಹುಪಾಲು ಪ್ರದೇಶಗಳಿಗೆ ವ್ಯಾಪಿಸಿರುವುದು ಹೂಡಿಕೆದಾರರಲ್ಲಿ ಉತ್ಸಾಹ ಮೂಡಿಸಿದೆ. ವಿದೇಶಿ ಬಂಡವಾಳ ಒಳಹರಿವು ಹೆಚ್ಚಾಗಿರುವುದೂ ಸೂಚ್ಯಂಕದ ಏರಿಕೆ ಕಾರಣವಾಗಿರಬಹುದು ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.



ಸೆನ್ಸೆಕ್ಸ್ ಮೈಲಿಗಲ್ಲು (ವಹಿವಾಟಿನ ಅಂತ್ಯ)

- **2023 ಜುಲೈ 3:** 65,205 ಅಂಶ
- **2021 ಸೆಪ್ಟೆಂಬರ್ 24:** 60,000 ಅಂಶ
- **2021 ಆಗಸ್ಟ್ 13:** 55,000 ಅಂಶ
- **2021 ಫೆಬ್ರುವರಿ 3:** 50,000 ಅಂಶ

ಸೆನ್ಸೆಕ್ಸ್‌ನಲ್ಲಿ ಸೋಮವಾರ ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಶೇ 2.53ರಷ್ಟು ಗರಿಷ್ಠ ಏರಿಕೆ ಕಂಡಿತು. ವಲಯವಾರು ತೈಲ ಮತ್ತು ಅನಿಲ ಶೇ 2.28ರಷ್ಟು, ಇಂಧನ ಶೇ 2.08ರಷ್ಟು, ಲೋಹ ಶೇ 1.11ರಷ್ಟು ಮತ್ತು ಎಫ್‌ಎಂಸಿಜಿ ಶೇ 1.09ರಷ್ಟು ಗಳಿಕೆ ಕಂಡಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.97ರಷ್ಟು ಏರಿಕೆ ಕಂಡು ಬ್ಯಾರಲ್‌ಗೆ 76.14 ಡಾಲರ್‌ಗೆ ತಲುಪಿತು.

ಮಾರುಕಟ್ಟೆ ಮೌಲ್ಯ ವೃದ್ಧಿ: ಸೋಮವಾರದ ವಹಿವಾಟಿನ ಅಂತ್ಯದ ವೇಳೆಗೆ ಬಿಎಸ್‌ಇ ಮಾರುಕಟ್ಟೆ ಬಂಡವಾಳ ಮೌಲ್ಯವು ₹298.21 ಲಕ್ಷ ಕೋಟಿಗೆ ತಲುಪುವ ಮೂಲಕ ದಾಖಲೆ ಮಟ್ಟಕ್ಕೆ ಏರಿತು. ನಾಲ್ಕು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ಮೌಲ್ಯ ₹7.54 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ.

> ಮಾರುಕಟ್ಟೆ ಮೌಲ್ಯ ಗರಿಷ್ಠ ಮಟ್ಟದಲ್ಲಿ ಇರುವಾಗ ಅಪಾಯವೂ ಹೆಚ್ಚು. ಕೆಲವು ನಕಾರಾತ್ಮಕ ವಿದ್ಯಮಾನಗಳು ಷೇರುಪೇಟೆಯಲ್ಲಿ ತೀವ್ರ ಕುಸಿತಕ್ಕೆ ಕಾರಣವಾಗಬಹುದು. ಹೀಗಾಗಿ ಹೂಡಿಕೆದಾರರು ಎಚ್ಚರಿಕೆಯಿಂದ ಇರಬೇಕು
>
> **-ವಿ.ಕೆ.ವಿಜಯಕುಮಾರ್,** ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ

> ನಿಫ್ಟಿ ಬ್ಯಾಂಕ್ ಇಂಡೆಕ್ಸ್ ಉತ್ತಮ ಗಳಿಕೆ ಕಂಡಿದ್ದು, 45 ಸಾವಿರದ ಗಡಿಯನ್ನು ದಾಟಿದೆ. ಈ ಏರುಗತಿಯ ಪ್ರಯೋಜನ ಪಡೆಯಲು ವರ್ತಕರು ಮತ್ತು ಹೂಡಿಕೆದಾರರು ಖರೀದಿ ಪ್ರವೃತ್ತಿಯನ್ನು ಮುಂದುವರಿಸಬೇಕು. ಆದರೆ, ಮುಂದೆ 45,500ದ ಗಡಿ ಇದ್ದು, ಅಲ್ಲಿ ಸೂಚ್ಯಂಕದ ಏರುಮುಖ ಚಲನೆಯ ವೇಗ ತಗ್ಗುವ ಸಾಧ್ಯತೆ ಇದೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.
>
> **-ಕುನಾಲ್ ಶಾ,** ಎಲ್‌ಕೆಪಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ

ಜುಲೈ 17ರಿಂದ ಟಾಟಾ ಪ್ರಯಾಣಿಕ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಜುಲೈ 17ರಿಂದ ಜಾರಿಗೆ ಬರುವಂತೆ ಪ್ರಯಾಣಿಕ ವಾಹನಗಳ ಬೆಲೆ ಹೆಚ್ಚಿಸುವುದಾಗಿ ಸೋಮವಾರ ಹೇಳಿದೆ.

ವಿದ್ಯುತ್ ಚಾಲಿತ ವಾಹನಗಳನ್ನೂ ಒಳಗೊಂಡು ಎಲ್ಲ ಪ್ರಯಾಣಿಕ ವಾಹನಗಳ ಬೆಲೆಯನ್ನು ಸರಾಸರಿ ಶೇಕಡ 0.6ರಷ್ಟು ಹೆಚ್ಚಳ ಮಾಡಲಾಗುವುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ತಯಾರಿಕಾ ವೆಚ್ಚದಲ್ಲಿ ಆಗುತ್ತಿರುವ ಏರಿಕೆಯನ್ನು ಸರಿದೂಗಿಸಲು ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಹೇಳಿದೆ.

ಜುಲೈ 16ರವರೆಗೆ ಬುಕಿಂಗ್ ಮಾಡುವವರಿಗೆ ಮತ್ತು ಜುಲೈ 31ರವರೆಗೆ ವಿತರಣೆ ಆಗಲಿರುವ ಗ್ರಾಹಕರಿಗೆ ಈ ಬೆಲೆ ಏರಿಕೆ ಅನ್ವಯಿಸುವುದಿಲ್ಲ ಎಂದು ಕಂಪನಿಯು ತಿಳಿಸಿದೆ.

ಪವನ್ ಹನ್ಸ್ ಖಾಸಗೀಕರಣ ನಿರ್ಧಾರ ಕೈಬಿಟ್ಟ ಕೇಂದ್ರ

ನವದೆಹಲಿ (ಪಿಟಿಐ): ಪವನ್ ಹನ್ಸ್ ಕಂಪನಿಯಲ್ಲಿನ ಹೂಡಿಕೆ ಹಿಂತೆಗೆತ ಪ್ರಕ್ರಿಯೆಯನ್ನು ಕೈಬಿಡುವ ತೀರ್ಮಾನವನ್ನು ಕೇಂದ್ರ ಸರ್ಕಾರವು ಸೋಮವಾರ ಕೈಗೊಂಡಿದೆ. ಕೇಂದ್ರ ಸರ್ಕಾರ ಹಾಗೂ ಒಎನ್‌ಜಿಸಿ ನಡುವಿನ ಪಾಲುದಾರಿಕೆಯಲ್ಲಿ ಪವನ್ ಹನ್ಸ್ ಕಂಪನಿಯನ್ನು ನಡೆಸಲಾಗುತ್ತಿದೆ.

ಕೇಂದ್ರವು ಈ ಕಂಪನಿಯನ್ನು ₹211 ಕೋಟಿಗೆ, ಮೂರು ಸಂಸ್ಥೆಗಳ ಒಕ್ಕೂಟವಾಗಿರುವ ಸ್ಟಾರ್9 ಮೊಬಿಲಿಟಿ ಪ್ರೈ.ಲಿ. ಕಂಪನಿಗೆ ಮಾರಾಟ ಮಾಡಲು ತೀರ್ಮಾನಿಸಿತ್ತು. ಆದರೆ ಈ ಮೂರು ಸಂಸ್ಥೆಗಳ ಪೈಕಿ ಒಂದಾಗಿರುವ ಆಲ್ಮಾಸ್ ಗ್ಲೋಬಲ್ ಅಪಾರ್ಚುನಿಟಿ ಫಂಡ್ ಎಸ್‌ಪಿಸಿ ವಿರುದ್ಧ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯಲ್ಲಿ ಪ್ರಕರಣವೊಂದು ಬಾಕಿ ಇದೆ ಎಂಬುದು ಗೊತ್ತಾದ ನಂತರ, ಮಾರಾಟ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿತ್ತು.



'ಬಿಡ್ ಗೆದ್ದುಕೊಂಡಿರುವ ಸ್ಟಾರ್9 ಮೊಬಿಲಿಟಿ ಪ್ರೈ.ಲಿ. ಕಂಪನಿಯನ್ನು ಹೂಡಿಕೆ ಹಿಂತೆಗೆತ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗಿದೆ' ಎಂದು ಕೇಂದ್ರ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಹೇಳಿದೆ.

ವಿನಿಮಯ ದರ

$ ಡಾಲರ್	81.91
£ ಪೌಂಡ್	103.86

ಮುಂಬೈ ಧಾರಣೆ

ಶೇಂಗಾ 3–7–2023

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	910 (895)
ಪಾಮ್ ವಾರದ ಡೆಲಿವರಿ	875 (863)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 58,100 (58,100)

ಬೆಳ್ಳಿ ಕೆ.ಜಿ 69,500 (69,300)

ಆವರಣದಲ್ಲಿ ಶನಿವಾರದ ಧಾರಣೆ

ತುಸು ತಗ್ಗಿದ ತಯಾರಿಕಾ ಚಟುವಟಿಕೆ

ಭಾರತದ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ: ಎಸ್‌ಆ್ಯಂಡ್‌ಪಿ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ 31 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದ್ದ ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಜೂನ್‌ನಲ್ಲಿ ಇಳಿಕೆ ಕಂಡಿವೆ. ಹೀಗಿದ್ದರೂ ಸಕಾರಾತ್ಮಕ ಮಟ್ಟದಲ್ಲಿಯೇ ಇವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಮೇ ತಿಂಗಳಿನಲ್ಲಿ 58.7ರಷ್ಟು ಇದ್ದಿದ್ದು ಜೂನ್‌ನಲ್ಲಿ 57.8ಕ್ಕೆ ಇಳಿದಿದೆ. ಮಾರುಕಟ್ಟೆಯು ಅನುಕೂಲಕರವಾಗಿ ಇರುವುದರಿಂದ ಹೊಸ ವಹಿವಾಟುಗಳಿಗೆ ಬೇಡಿಕೆಯು ವೇಗವಾಗಿ ಹೆಚ್ಚಾಗುತ್ತಿದೆ. ಹೀಗಾಗಿ ಸಕಾರಾತ್ಮಕ ಬೆಳವಣಿಗೆ ಮುಂದುವರಿದಿದೆ ಎಂದು ಅದು ತಿಳಿಸಿದೆ.

ಮುಖ್ಯಾಂಶಗಳು

- 24ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- 6 ತಿಂಗಳ ಗರಿಷ್ಠ ಮಟ್ಟಕ್ಕೆ ವಹಿವಾಟು ನಡೆಸುವ ವಿಶ್ವಾಸ

ಭಾರತದಲ್ಲಿ ತಯಾರಾಗುವ ಉತ್ಪನ್ನಗಳಿಗೆ ದೇಶ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆ ಇದೆ ಎನ್ನುವುದನ್ನು ಜೂನ್ ತಿಂಗಳ ಅಂಕಿ–ಅಂಶವು ಮತ್ತೊಮ್ಮೆ ಹೇಳಿದೆ ಎಂದು ಅದು ತಿಳಿಸಿದೆ.



ಹೆಚ್ಚುವರಿ ಕೆಲಸಗಾರರನ್ನು ನೇಮಿಸಿಕೊಳ್ಳುವ ಮೂಲಕ ಕಂಪನಿಗಳು ಬೇಡಿಕೆಯನ್ನು ಪೂರೈಸುತ್ತಿವೆ. ಆದರೆ, ನೇಮಕಾತಿ ಹೆಚ್ಚಳದಲ್ಲಿನ ವೇಗವು ಮಂದಗತಿಯಲ್ಲಿದ್ದು ಬಹುತೇಕ ಮೇ ತಿಂಗಳ ಮಟ್ಟಕ್ಕೆ ಸಮನಾಗಿದೆ.

ಬೇಡಿಕೆ ಚೆನ್ನಾಗಿ ಇರುವ ಕಾರಣ, ತಯಾರಿಕಾ ವಲಯದ ಕಂಪನಿಗಳು ತಮ್ಮ ಬೆಲೆಯನ್ನು ಅದಕ್ಕೆ ಹೊಂದಿಸಿಕೊಳ್ಳುತ್ತಿವೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಬ್ಯಾಂಕ್‌ಗೆ ಮರಳಿದ ₹2000ದ ಶೇ 76ರಷ್ಟು ನೋಟುಗಳು

ಮುಂಬೈ (ಪಿಟಿಐ): ಚಲಾವಣೆಯಲ್ಲಿ ಇದ್ದ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇಕಡ 76ರಷ್ಟು ನೋಟುಗಳು ಬ್ಯಾಂಕ್‌ಗಳಿಗೆ ಮರಳಿವೆ ಎಂದು ಆರ್‌ಬಿಐ ಸೋಮವಾರ ತಿಳಿಸಿದೆ. ಈ ನೋಟುಗಳನ್ನು ಜಮಾ ಮಾಡಲು ಅಥವಾ ವಿನಿಮಯ ಮಾಡಿಕೊಳ್ಳಲು ಸೆಪ್ಟೆಂಬರ್ 30ರವರೆಗೆ ಸಮಯ ಇದೆ.

ಈ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವುದಾಗಿ ಆರ್‌ಬಿಐ ಮೇ 19ರಂದು ಹೇಳಿತು. ಅಂದು ಚಲಾವಣೆಯಲ್ಲಿದ್ದ ಈ ನೋಟುಗಳ ಮೌಲ್ಯವು ₹3.56 ಲಕ್ಷ ಕೋಟಿ. ಜೂನ್ 30ರಂದು ಚಲಾವಣೆಯಲ್ಲಿದ್ದ ಈ ಮುಖಬೆಲೆಯ ನೋಟುಗಳ ಮೌಲ್ಯವು ₹84 ಸಾವಿರ ಕೋಟಿ ಎಂದು ಆರ್‌ಬಿಐ ತಿಳಿಸಿದೆ.

ಬ್ಯಾಂಕ್‌ಗಳಿಗೆ ಮರಳಿರುವ ಈ ನೋಟುಗಳ ಪೈಕಿ ಶೇ 87ರಷ್ಟನ್ನು ಜಮಾ ಮಾಡಲಾಗಿದೆ. ಇನ್ನುಳಿದ ಪ್ರಮಾಣದ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲಾಗಿದೆ.

ಸೆಪ್ಟೆಂಬರ್ 30ಕ್ಕೆ ಮೊದಲು ವಿನಿಮಯ ಮಾಡಿಕೊಳ್ಳದೆ ಇದ್ದರೆ ಅಥವಾ ಜಮಾ ಮಾಡದೆ ಇದ್ದರೆ ₹2,000 ಮುಖಬೆಲೆಯ ನೋಟುಗಳಿಗೆ ಕಾನೂನು ಮಾನ್ಯತೆ ಇಲ್ಲವಾಗುತ್ತದೆಯೇ ಎಂಬುದನ್ನು ಆರ್‌ಬಿಐ ಸ್ಪಷ್ಟಪಡಿಸಿಲ್ಲ.

ಜಗತ್ತಿನ ಟಾಪ್–10 ಪಟ್ಟಿಯಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್

ಮುಂಬೈ (ರಾಯಿಟರ್ಸ್): ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ವಿಲೀನ ಪೂರ್ಣಗೊಂಡಿದ್ದು, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮೌಲ್ಯವು ಸೋಮವಾರ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತ್ತು. ವಿಲೀನದ ಪರಿಣಾಮವಾಗಿ, ಎಚ್‌ಡಿಎಫ್‌ಸಿ ಬ್ಯಾಂಕ್ ಈಗ ಮಾರುಕಟ್ಟೆ ಬಂಡವಾಳದ ಲೆಕ್ಕದಲ್ಲಿ ಜಗತ್ತಿನ ಟಾಪ್–10 ಬ್ಯಾಂಕ್‌ಗಳ ಸಾಲಿಗೆ ಸೇರಿದೆ.

ವಿಲೀನದ ನಂತರದ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ರಾಯಿಟರ್ಸ್ ಲೆಕ್ಕಾಚಾರದ ಪ್ರಕಾರ ಅಂದಾಜು ₹12.86 ಲಕ್ಷ ಕೋಟಿ ಆಗುತ್ತದೆ. ಇದು ಮಾರ್ಗನ್ ಸ್ಟ್ಯಾನ್ಲಿ ಮತ್ತು ಎಚ್‌ಎಸ್‌ಬಿಸಿ ಬ್ಯಾಂಕ್ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕಿಂತ ಹೆಚ್ಚು.

ಹೀಗಿದ್ದರೂ, ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯವು ದುಬಾರಿ ಅಲ್ಲ ಎಂದು ಮಾರ್ಗನ್ ಸ್ಟ್ಯಾನ್ಲಿ ಅಂದಾಜು ಮಾಡಿದೆ. 'ನಾವು ಈಗ ಬೆಳವಣಿಗೆ ಕಾಣುತ್ತಿರುವ ವೇಗವನ್ನು ಗಮನಿಸಿದರೆ, ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಇನ್ನೊಂದು ಎಚ್‌ಡಿಎಫ್‌ಸಿ ಬ್ಯಾಂಕ್ ಸೃಷ್ಟಿಸಬಹುದು' ಎಂದು ಬ್ಯಾಂಕ್‌ನ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಜಗದೀಶನ್ ಈಚೆಗೆ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	48000-50500
ಕುಮಟಾ	
ಚಿಪ್ಪು	28960-32290
ಕೋಕ	21609-32899
ಫ್ಯಾಕ್ಟರಿ	28960-32290
ಹಳೆಚಾಲಿ	37399-40679
ಹೊಸಚಾಲಿ	35819-38205
ಕಾರ್ಕಳ	
ಹೊಸತು	30000-41500
ಹಳತು	40000-50000
ಶಿವಮೊಗ್ಗ	
ಬೆಟ್ಟೆ	50099-53609
ಗೊರಬಲು	18029-42750
ರಾಶಿ	40300-55421
ಸರಕು	56100-77700
ಸಿದ್ದಾಪುರ	
ಬಿಳಿಗೋಟು	28799-33299
ಚಾಲಿ	37411-38839
ಕೋಕ	28199-31289
ಕೆಂಪುಗೋಟು	31889-33289
ರಾಶಿ	46599-51599
ತಟ್ಟಿಬೆಟ್ಟೆ	38769-50699
ಶಿರಸಿ	
ಬೆಟ್ಟೆ	40299-47849
ಬಿಳಿಗೋಟು	25399-34609
ಚಾಲಿ	35218-39612
ಕೆಂಪುಗೋಟು	26296-37021
ರಾಶಿ	45299-50789
ಯಲ್ಲಾಪುರ	
ಬಿಳಿಗೋಟು	23299-34799
ಚಾಲಿ	35899-39290
ಕೋಕ	18318-33501
ಕೆಂಪುಗೋಟು	26899-35610
ರಾಶಿ	44599-53709
ತಟ್ಟಿಬೆಟ್ಟೆ	40101-48019

₹999ಕ್ಕೆ ಜಿಯೊ ಭಾರತ್ ಫೋನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಜಿಯೊ ಕಂಪನಿಯು ಇಂಟರ್ನೆಟ್ ಸಂಪರ್ಕ ಇರುವ 'ಜಿಯೊ ಭಾರತ್' ಹೆಸರಿನ 4ಜಿ ಫೋನ್ ಬಿಡುಗಡೆ ಮಾಡಿದೆ. ಇದರ ಬೆಲೆ ₹999. ಕಂಪನಿಯು ಇದೇ 7ರಿಂದ 10 ಲಕ್ಷ ಇಂತಹ ಫೋನ್‌ಗಳ ಪ್ರಯೋಗಾರ್ಥ ಪರೀಕ್ಷೆ ಆರಂಭಿಸುವುದಾಗಿ ತಿಳಿಸಿದೆ.

'ಇಂಟರ್ನೆಟ್ ಸೌಲಭ್ಯ ಇರುವ ಫೋನ್ ಇಷ್ಟು ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವುದು ಇದೇ ಮೊದಲು' ಎಂದು ಕಂಪನಿ ಹೇಳಿದೆ. ಈ ಫೋನ್‌ನಲ್ಲಿ ಜಿಯೊ ಪೇ ಮೂಲಕ ಯುಪಿಐ ಸೌಲಭ್ಯ ಬಳಸಬಹುದು. ಜಿಯೊ ಸಿನಿಮಾದಲ್ಲಿನ ಕಾರ್ಯಕ್ರಮಗಳನ್ನು ವೀಕ್ಷಿಸಬಹುದು.

ಭಾರತದಲ್ಲಿ 25 ಕೋಟಿ ಜನ ಈಗಲೂ ಫೀಚರ್ ಫೋನ್ ಬಳಸುತ್ತಿದ್ದಾರೆ. ಈ ಫೋನ್‌ಗಳಲ್ಲಿ ಇಂಟರ್ನೆಟ್ ಸೌಲಭ್ಯ ಇಲ್ಲ. ಜಿಯೊ ಭಾರತ್ ಫೋನ್ ಮೂಲಕ ಉತ್ತಮ ಗುಣಮಟ್ಟದ ಹಾಗೂ ಕೈಗೆಟಕುವ ದರದ ಇಂಟರ್ನೆಟ್ ಸಂಪರ್ಕವು ಪ್ರತಿ ಭಾರತೀಯನಿಗೆ ಸಿಗಲಿದೆ ಎಂದು ಕಂಪನಿ ಹೇಳಿದೆ.

ಜಿಯೊ ಭಾರತ್ ಫೋನ್‌ಗೆ ನಿಗದಿ ಮಾಡಿರುವ ಶುಲ್ಕವು ಇತರ ಕಂಪನಿಗಳ ಫೀಚರ್ ಫೋನ್‌ಗಿಂತ ಶೇ 30ರವರೆಗೆ ಕಡಿಮೆ ಇದೆ. 7 ಪಟ್ಟು ಹೆಚ್ಚು ಡೇಟಾ ನೀಡುತ್ತದೆ ಎಂದು ಜಿಯೊ ಹೇಳಿಕೊಂಡಿದೆ.

ಸ್ಯಾಫ್ ಫುಟ್‌ಬಾಲ್ ಟೂರ್ನಿ: ಫೈನಲ್‌ನಲ್ಲಿ ಇಂದು ಕುವೈತ್ ವಿರುದ್ಧ ಸೆಣಸು

ಭಾರತಕ್ಕೆ 9ನೇ ಪ್ರಶಸ್ತಿಯ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಭಾರತ ತಂಡದವರು ಸ್ಯಾಫ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಮಂಗಳವಾರ ಕುವೈತ್ ತಂಡವನ್ನು ಎದುರಿಸಲಿದ್ದು, ಫುಟ್‌ಬಾಲ್ ಪ್ರೇಮಿಗಳು ಮತ್ತೊಂದು ರೋಚಕ ಹೋರಾಟದ ನಿರೀಕ್ಷೆಯಲ್ಲಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯ ಗೆದ್ದು ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ ತನ್ನ ಪಾರಮ್ಯ ಮುಂದುವರಿಸುವುದು ಸುನಿಲ್ ಚೆಟ್ರಿ ಬಳಗದ ಗುರಿ. ಇದುವರೆಗೆ ಎಂಟು ಸಲ ಕಿರೀಟ ಮುಡಿಗೇರಿಸಿಕೊಂಡಿರುವ ಭಾರತ, ಒಂಬತ್ತನೇ ಪ್ರಶಸ್ತಿಯ ನಿರೀಕ್ಷೆಯಲ್ಲಿದೆ.

ಜೂನ್ 27 ರಂದು 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಇವೆರಡು ತಂಡಗಳು ಎದುರಾಗಿದ್ದಾಗ 1-1 ಡ್ರಾ ಆಗಿತ್ತು. ಆ ಪಂದ್ಯದಲ್ಲಿ ಕುವೈತ್ ತಂಡ ಒರಟಾದ ಆಟ ಆಡಿತ್ತಲ್ಲದೆ, ಸಾಕಷ್ಟು ಫೌಲ್‌ಗಳನ್ನು ಮಾಡಿತ್ತು. ಉಭಯ ತಂಡಗಳ ಆಟಗಾರರು ಹಲವು ಸಲ ಪರಸ್ಪರ ತಳ್ಳಾಡಿದ್ದರು. ಮಂಗಳವಾರ ಕೂಡಾ ಪ್ರಬಲ ಪೈಪೋಟಿ ನಡೆಯುವ ಸಾಧ್ಯತೆಯಿದೆ.

'ಕುವೈತ್ ಮತ್ತು ಲೆಬನಾನ್ (ಸೆಮಿಫೈನಲ್) ವಿರುದ್ಧದ ಪಂದ್ಯಗಳಲ್ಲಿ ಕಾವೇರಿದ ವಾತಾವರಣ ಸೃಷ್ಟಿಯಾಗಿತ್ತು. ಫೈನಲ್ ಪಂದ್ಯದಲ್ಲಿ ತಾಳ್ಮೆ ಕಳೆದುಕೊಳ್ಳದೆ ಶಾಂತವಾಗಿ ಆಡುವಂತೆ ಆಟಗಾರರಿಗೆ ಸೂಚಿಸಲಾಗಿದೆ' ಎಂದು ಭಾರತ ತಂಡದ ಸಹಾಯಕ ಕೋಚ್ ಮಹೇಶ್ ಗಾವ್ಳಿ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಭಾರತ ತಂಡದ ಸಹಾಯಕ ಕೋಚ್ ಮಹೇಶ್ ಗಾವ್ಳಿ (ಎಡದಿಂದ), ಡಿಫೆಂಡರ್ ಸಂದೇಶ್ ಜಿಂಗನ್, ಕುವೈತ್ ತಂಡದ ಆಟಗಾರ ಬದೆರ್ ಅಲ್ ಸನೂನ್ ಮತ್ತು ಕೋಚ್ ರೂಯಿ ಬೆಂಟೊ ಅವರು ಸೋಮವಾರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಟ್ರೋಫಿಯೊಂದಿಗೆ ಕಾಣಿಸಿಕೊಂಡರು –ಪ್ರಜಾವಾಣಿ ಚಿತ್ರ

ಸೆಮಿಫೈನಲ್‌ನಂತೆ ಫೈನಲ್ ಪಂದ್ಯದ ವೇಳೆಯೂ ಮುಖ್ಯ ಕೋಚ್ ಇಗೋರ್ ಸ್ಟಿಮ್ಯಾಚ್ ಅವರ ಮಾರ್ಗದರ್ಶನ ಭಾರತದ ಆಟಗಾರರಿಗೆ ಲಭಿಸದು. ಸ್ಯಾಫ್ ಶಿಸ್ತು ಸಮಿತಿಯು ಸ್ಟಿಮ್ಯಾಚ್ ಮೇಲೆ ಎರಡು ಪಂದ್ಯಗಳ ನಿಷೇಧ ಹೇರಿದೆ. ಆದ್ದರಿಂದ ಗಾವ್ಳಿ ಅವರೇ ಟಚ್‌ಲೈನ್ ಬಳಿ ನಿಂತು ತಂಡದ ತಂತ್ರಗಾರಿಕೆಯನ್ನು ಕಾರ್ಯರೂಪಕ್ಕಿಳಿಸಲು ಆಟಗಾರರಿಗೆ ನೆರವಾಗಲಿದ್ದಾರೆ.

ಒಂದು ಪಂದ್ಯದ ನಿಷೇಧಕ್ಕೆ ಒಳಗಾಗಿದ್ದ ಸಂದೇಶ್ ಜಿಂಗನ್ ಅವರು ಫೈನಲ್‌ನಲ್ಲಿ ಕಣಕ್ಕಿಳಿಯಲಿದ್ದು, ಭಾರತದ ರಕ್ಷಣಾ ವಿಭಾಗಕ್ಕೆ ಹೆಚ್ಚಿನ ಬಲ ನೀಡಲಿದೆ. ಪಾಕಿಸ್ತಾನ ಮತ್ತು ಕುವೈತ್ ವಿರುದ್ಧದ ಪಂದ್ಯಗಳಲ್ಲಿ ಹಳದಿ ಕಾರ್ಡ್ ಪಡೆದಿದ್ದರಿಂದ ಅವರು ಸೆಮಿಫೈನಲ್‌ನಲ್ಲಿ ಆಡಿರಲಿಲ್ಲ.

'ಕುವೈತ್ ತಂಡ ಬಲಿಷ್ಠವಾಗಿದ್ದು, ಅವರ ರಕ್ಷಣಾ ವಿಭಾಗವನ್ನು ಬೇಧಿಸಿ ಗೋಲು ಗಳಿಸುವುದು ಕಷ್ಟ. ಕಳೆದ 10 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ನಾವು ಎದುರಿಸಿದ ತಂಡಗಳಲ್ಲಿ ಕುವೈತ್ ಅತ್ಯಂತ ಪ್ರಬಲ ತಂಡ ಎನಿಸಿದೆ' ಎಂದು ಜಿಂಗನ್ ಹೇಳಿದರು.

ಸೆಮಿ ಪಂದ್ಯದ ಕೊನೆಯ ಕೆಲವು ನಿಮಿಷಗಳ ಆಟದಲ್ಲಿ ಕಾಲು ನೋವಿನಿಂದ ಬಳಲಿದ್ದ ಚೆಟ್ರಿ, ಫೈನಲ್‌ನಲ್ಲಿ ಪೂರ್ಣ ಅವಧಿ ಆಡುವರೇ ಎಂಬುದು ಖಚಿತವಾಗಿಲ್ಲ. 'ತಂಡದ ಎಲ್ಲ ಆಟಗಾರರು ಫಿಟ್ ಆಗಿದ್ದಾರೆ' ಎಂದು ಗಾವ್ಳಿ ಹೇಳಿದ್ದಾರೆ.

ಕುವೈತ್ ತಂಡದ ಡಿಫೆಂಡರ್‌ಗಳ ಮೇಲೆ ಒತ್ತಡ ಹೇರಬೇಕಾದರೆ, ಚೆಟ್ರಿ ಅವರಿಗೆ ಇತರ ಆಟಗಾರರು ನಿಖರ ಪಾಸ್‌ಗಳನ್ನು ನೀಡುವುದು ಅಗತ್ಯ. ಸಹಲ್ ಅಬ್ದುಲ್ ಸಮದ್, ಮಹೇಶ್ ಸಿಂಗ್, ಆಶಿಖ್ ಕುರುಣಿಯನ್ ಮತ್ತು ಉದಾಂತ ಸಿಂಗ್ ಅವರ ಪ್ರದರ್ಶನವೂ ನಿರ್ಣಾಯಕ ಎನಿಸಲಿದೆ.

ಅರಬ್ ನಾಡಿನ ತಂಡವು ಪ್ರಮುಖ ಸ್ಟ್ರೈಕರ್ ಅಬ್ದುಲ್ಲಾ ಅಲ್ ಬಲೂಶಿ ಅವರನ್ನು ನೆಚ್ಚಿಕೊಂಡಿದೆ. ಬಾಂಗ್ಲಾದೇಶ ವಿರುದ್ಧದ ಸೆಮಿಫೈನಲ್‌ನ ಹೆಚ್ಚುವರಿ ಅವಧಿಯಲ್ಲಿ ಗೋಲು ಗಳಿಸಿದ್ದ ಅವರು, ಭಾರತದ ಎದುರಿನ ಲೀಗ್ ಪಂದ್ಯದಲ್ಲೂ ಮಿಂಚಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಡಿಡಿ ಸ್ಪೋರ್ಟ್ಸ್ ಮತ್ತು ಫ್ಯಾನ್‌ಕೋಡ್ ಆ್ಯಪ್

13 ಪಂದ್ಯಗಳಲ್ಲಿ ಅಜೇಯ ಸಾಧನೆ

ಭಾರತ ತಂಡ 2019ರ ಸೆಪ್ಟೆಂಬರ್ ಬಳಿಕ ತವರು ನೆಲದಲ್ಲಿ ಆಡಿದ 13 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಸೋತಿಲ್ಲ. 11 ಪಂದ್ಯಗಳನ್ನು ಗೆದ್ದಿದ್ದು, ಎರಡನ್ನು ಡ್ರಾ ಮಾಡಿಕೊಂಡಿದೆ. ಎದುರಾಳಿಗಳಿಗೆ ಕೇವಲ ಎರಡು ಗೋಲನ್ನು ಬಿಟ್ಟುಕೊಟ್ಟಿದೆ.

ಬಿಎಫ್‌ಸಿ: ಒಪ್ಪಂದ ಮುಂದುವರಿಸಿದ ಚೆಟ್ರಿ


ಸುನಿಲ್ ಚೆಟ್ರಿ


ಬೆಂಗಳೂರು (ಪಿಟಿಐ): ಭಾರತ ಫುಟ್‌ಬಾಲ್ ತಂಡದ ನಾಯಕ ಸುನಿಲ್ ಚೆಟ್ರಿ, ಬಿಎಫ್‌ಸಿ ತಂಡದಲ್ಲಿ ಇನ್ನೊಂದು ವರ್ಷ ಮುಂದುವರಿಯಲಿದ್ದಾರೆ.

'ನಾನು ಬಿಎಫ್‌ಸಿ ಜತೆಗಿನ ಒಪ್ಪಂದಕ್ಕೆ ಹಲವು ಸಲ ಸಹಿ ಹಾಕಿದ್ದೇನೆ. ಇದೀಗ ಒಪ್ಪಂದವನ್ನು ಇನ್ನೊಂದು ಅವಧಿಗೆ ವಿಸ್ತರಿಸಿದ್ದೇನೆ' ಎಂದು ಚೆಟ್ರಿ ಹೇಳಿದ್ದಾರೆ.

ಚೆಟ್ರಿ ಅವರು 2013 ರಿಂದಲೂ ಬಿಎಫ್‌ಸಿ ಪರ ಆಡುತ್ತಿದ್ದಾರೆ. 10 ಋತುಗಳಲ್ಲಿ ಅವರು ಹಲವು ಟೂರ್ನಿಗಳಲ್ಲಿ ತಂಡವನ್ನು ಪ್ರತಿನಿಧಿಸಿದ್ದಾರೆ. ಕ್ಲಬ್ ಪರ 250ಕ್ಕೂ ಅಧಿಕ ಪಂದ್ಯಗಳನ್ನು ಆಡಿದ್ದು, 116 ಗೋಲುಗಳನ್ನು ಗಳಿಸಿದ್ದಾರೆ.

ಈ ಅವಧಿಯಲ್ಲಿ ಬಿಎಫ್‌ಸಿ ಏಳು ಪ್ರಶಸ್ತಿಗಳನ್ನು ಜಯಿಸಿದೆ. ಐ–ಲೀಗ್ (2014, 2016), ಫೆಡರೇಷನ್ ಕಪ್ (2015, 2017), ಸೂಪರ್ ಕಪ್ (2018), ಐಎಸ್‌ಎಲ್ (2019) ಮತ್ತು ಡುರಾಂಡ್ ಕಪ್ (2022) ಟ್ರೋಫಿಯನ್ನು ಗೆದ್ದುಕೊಂಡಿದೆ.

'ಚೆಟ್ರಿ ಅವರು ಬಿಎಫ್‌ಸಿ ಜತೆಗಿನ ಒಪ್ಪಂದದ ಅವಧಿಯನ್ನು ಇನ್ನೊಂದು ವರ್ಷಕ್ಕೆ ವಿಸ್ತರಿಸಿರುವುದು ಕ್ಲಬ್ ಪಾಲಿಗೆ ಹೆಮ್ಮೆಯ ಸಂಗತಿ. ಅವರು ನಮ್ಮ ಕ್ಲಬ್‌ನ ಅವಿಭಾಜ್ಯ ಅಂಗವಾಗಿದ್ದಾರೆ' ಎಂದು ಬಿಎಫ್‌ಸಿ ತಂಡದ ಮಾಲೀಕ ಪಾರ್ಥ್ ಜಿಂದಾಲ್ ತಿಳಿಸಿದ್ದಾರೆ.



ಮಾಜಿ ವಿಶ್ವ ಚಾಂಪಿಯನ್‌ಗಳು 2023ರ ವಿಶ್ವಕಪ್‌ಗೆ ಅರ್ಹತೆ ಪಡೆಯಲು ವಿಫಲರಾಗಿದ್ದಾರೆ !

ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್‌ಗೆ ಗ್ಲೋಬಲ್ ಚೆಸ್ ಲೀಗ್ ಪ್ರಶಸ್ತಿ

ದುಬೈ: ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡ, ಭಾನುವಾರ ರಾತ್ರಿ ಮುಕ್ತಾಯಗೊಂಡ ಪ್ರಪ್ರಥಮ ಗ್ಲೋಬಲ್ ಚೆಸ್ ಲೀಗ್‌ನ ಚಾಂಪಿಯನ್ ಕಿರೀಟ ಧರಿಸಿಕೊಂಡಿತು.

'ಸಡನ್ ಡೆತ್' ಗೇಮ್‌ನಲ್ಲಿ ಡೆನ್ಮಾರ್ಕ್‌ನ ಗ್ರ್ಯಾಂಡ್‌ಮಾಸ್ಟರ್ ಯೋನಸ್ ಬ್ಯುಯೆರ ಅವರು ಅಪ್‌ಗ್ರಾಡ್ ಮುಂಬಾ ಮಾಸ್ಟರ್ಸ್ ಆಟಗಾರ ಜಾವೊಖಿರ್ ಸಿಂದರೋವ್ ಅವರನ್ನು ಸೋಲಿಸಿದ್ದು ತ್ರಿವೇಣಿ ತಂಡಕ್ಕೆ ನಿರ್ಣಾಯಕ ಗೆಲುವು ತಂದುಕೊಟ್ಟಿತು.

ವಿಜೇತ ತಂಡವನ್ನು ನಿರ್ಧರಿಸಲು ಇದ್ದ ಎರಡು ಸುತ್ತುಗಳ ರ್‍ಯಾಪಿಡ್ ಪಂದ್ಯಗಳು ಮತ್ತು ಇನ್ನೆರಡು ಸುತ್ತುಗಳ ಬ್ಲಿಟ್ಸ್ ಹಣಾಹಣಿ 'ಡ್ರಾ'ಗಳ ಮೂಲಕ ಸಮನಾದವು. ಹೀಗಾಗಿ ಅಂತಿಮವಾಗಿ ಸಡನ್ ಡೆತ್ ಸರಣಿ ಪಂದ್ಯಗಳ ಮೂಲಕ ವಿಜೇತ ತಂಡ ನಿರ್ಧರಿಸಬೇಕಾಯಿತು. ನಾಲ್ಕನೇ ಪಂದ್ಯದಲ್ಲಿ ನಿರ್ಣಾಯಕ ಫಲಿತಾಂಶ ಬಂತು.

ಈ ಟೂರ್ನಿಯಲ್ಲಿ ಅತಿ ಕಡಿಮೆ ಅನುಭವ ಹೊಂದಿದ್ದ ಬ್ಯುಯೆರ ಅವರು ಅವಶ್ಯಕ ಸಂದರ್ಭದಲ್ಲೇ ಗೆಲುವು ಸಾಧಿಸಿದರು. ಈ ಮೊದಲು ಸಿಂಧರೋವ್ ವಿರುದ್ಧ ನಾಲ್ಕು ಪಂದ್ಯಗಳನ್ನು ಸೋತಿದ್ದ ಬ್ಯುಯರೆ, 17 ವರ್ಷದ ಉಜ್ಬೇಕ್ ಆಟಗಾರ ಸಿಂಧರೋವ್ ವಿರುದ್ಧ ಜಯಗಳಿಸಿದರು. ಆ ಮೂಲಕ ತಂಡಕ್ಕೆ ಮೊದಲ ಬಹುಮಾನ ಮೊತ್ತವಾದ ₹ 4 ಕೋಟಿ ಪಡೆಯಲು ನೆರವಾದರು.


ನೀರಜ್ ಚೋಪ್ರಾ

ಫಿಟ್ನೆಸ್ ಬಗ್ಗೆ ಚಿಂತೆಯಿತ್ತು ಎಂದ ಒಲಿಂಪಿಕ್ ಚಾಂಪಿಯನ್

ಲುಸಾನ್‌ನಲ್ಲಿ ಕಳವಳದಲ್ಲೇ ಸ್ಪರ್ಧಿಸಿದ್ದೆ: ನೀರಜ್

ನವದೆಹಲಿ (ಪಿಟಿಐ): 'ಸ್ನಾಯು ಸೆಳೆತದಿಂದ ಚೇತರಿಸಿಕೊಂಡು ಆಗಷ್ಟೇ ಪುನರಾಗಮನ ಮಾಡಿದ್ದ ಕಾರಣ ನನ್ನ ಫಿಟ್ನೆಸ್ ಮಟ್ಟ ಪೂರ್ಣಪ್ರಮಾಣದಲ್ಲಿರಲಿಲ್ಲ. ಹೀಗಾಗಿ ಕಳೆದ ವಾರ, ಲುಸಾನ್‌ನ ಡೈಮಂಡ್ ಲೀಗ್‌ನಲ್ಲಿ ನನ್ನೆಲ್ಲಾ ಸಾಮರ್ಥ್ಯ ಬಳಸಿಕೊಳ್ಳಬೇಕೇ, ಬೇಡವೇ ಎಂಬ ದ್ವಂದ್ವದಲ್ಲಿದ್ದೆ' ಎಂದು ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ ಸೋಮವಾರ ಒಪ್ಪಿಕೊಂಡಿದ್ದಾರೆ.

ಒಲಿಂಪಿಕ್ ಚಾಂಪಿಯನ್ ಚೋಪ್ರಾ ಅವರು ಜೂನ್ 30ರಂದು ನಡೆದ ಡೈಮಂಡ್ ಲೀಗ್‌ನಲ್ಲಿ 87.66 ಮೀ. ಸಾಧನೆಯೊಡನೆ ಸತತ ಎರಡನೇ ಚಿನ್ನ ಗೆದ್ದುಕೊಂಡಿದ್ದರು. ಆದರೆ ಈ ಪ್ರದರ್ಶನ ಅವರ ಇತ್ತೀಚಿನ ಉತ್ತಮ ಥ್ರೋಗಳ ಸನಿಹದಲ್ಲಿರಲಿಲ್ಲ.

ಸ್ಪರ್ಧೆಯ ನಂತರ ಚೋಪ್ರಾ ಅವರು ತಮ್ಮ ಮುಂದಿನ ಸ್ಪರ್ಧೆ ಬುಡಾಪೆಸ್ಟ್‌ನಲ್ಲಿ ಎಂದು ಹೇಳಿದ್ದರು. ಹೀಗಾಗಿ ಅವರು ಕೆಲವು ಅಂತರರಾಷ್ಟ್ರೀಯ ಕೂಟಗಳನ್ನು ಕಳೆದುಕೊಳ್ಳಲಿದ್ದಾರೆ. ಹಂಗೆರಿಯ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಆಗಸ್ಟ್ 19 ರಿಂದ 27ರವರೆಗೆ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ನಡೆಯಲಿದೆ. ಜಾವೆಲಿನ್ ಸ್ಪರ್ಧೆ ಆ. 25ರಂದು ಅರ್ಹತಾ ಸುತ್ತಿನೊಡನೆ ಆರಂಭವಾಗಲಿದೆ.

'ಒಟ್ಟಾರೆ (ಲೂಸಾನ್‌ನಲ್ಲಿ) ನನ್ನ ಫಿಟ್ನೆಸ್ ಮಟ್ಟ ಸ್ವಲ್ಪ ಕಡಿಮೆಯಿತ್ತು. ಈ ಹಿಂದೆ ಗಾಯಾಳಾಗಿದ್ದ ಕಾರಣ ನನ್ನ ಮನಸ್ಸಿನಲ್ಲಿ ನಾನು ಶೇ 100ರಷ್ಟು ಫಿಟ್ ಆಗಿದ್ದೇನೆಯೇ, ಇಲ್ಲವೇ? ನಾನು ಸಾಮರ್ಥ್ಯವನ್ನು ಪೂರ್ಣವಾಗಿ ತೊಡಗಿಸಿಕೊಳ್ಳಬೇಕೇ, ಬೇಡವೇ ಎಂಬ ಪ್ರಶ್ನೆಗಳು ಎದ್ದಿದ್ದವು' ಎಂದು ಚೋಪ್ರಾ ಅವರು ವರ್ಚುವಲ್ ಆಗಿ ನಡೆದ ಮಾಧ್ಯಮ ಸಂವಾದದಲ್ಲಿ ಹೇಳಿದರು.

'ತರಬೇತಿ ಮೂಲಕ ಫಿಟ್ನೆಸ್ ಸುಧಾರಿಸಿಕೊಳ್ಳಬೇಕಿದೆ. ಇದರಿಂದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ನಾನು ಅತ್ಯುತ್ತಮ ಪ್ರಯತ್ನ ಹಾಕಿ ಚಿನ್ನ ಗೆಲ್ಲುವ ಕನಸನ್ನು ಈಡೇರಿಸಿಕೊಳ್ಳಲು ಸಾಧ್ಯ' ಎಂದರು.

25 ವರ್ಷದ ಚೋಪ್ರಾ, ವರ್ಷದ ಮೊದಲ ಪ್ರಮುಖ ಕೂಟವಾದ ದೋಹಾ ಡೈಮಂಡ್ ಲೀಗ್‌ನಲ್ಲಿ (ಮೇ 5ರಂದು) ಚಿನ್ನ ಗೆದ್ದುಕೊಂಡಿದ್ದರು. ಆದರೆ, ನಂತರ ತರಬೇತಿ ವೇಳೆ ಸ್ನಾಯು ನೋವು ಕಾಣಿಸಿಕೊಂಡಿದೆ ಎಂದು ಅವರು ಮೇ 29ರಂದು ಹೇಳಿದ್ದರು.

'ಈ ವರ್ಷ ಮೂರು ಪ್ರಮುಖ (ಆಗಸ್ಟ್‌ನಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್, ಸೆಪ್ಟೆಂಬರ್‌ನಲ್ಲಿ ನಡೆಯುವ ಡೈಮಂಡ್ ಲೀಗ್ ಫೈನಲ್ಸ್ ಮತ್ತು ಅಕ್ಟೋಬರ್‌ನಲ್ಲಿ ನಡೆಯುವ ಏಷ್ಯನ್ ಗೇಮ್ಸ್) ಕೂಟಗಳು ನಿಗದಿಯಾಗಿವೆ. ಹೀಗಾಗಿ ಗಾಯಗೊಳ್ಳದಂತೆ ನೋಡಿಕೊಳ್ಳುವುದು ನನ್ನ ಮೊದಲ ಗುರಿ' ಎಂದಿದ್ದಾರೆ.

ಕ್ರೀಡಾಂಗಣದಲ್ಲೇ ಮಾಜಿ ಅಥ್ಲೀಟ್‌ಗಳ ಜಗಳ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣದಲ್ಲಿ ತರಬೇತಿ ನೀಡುವ ಮಾಜಿ ಜೂನಿಯರ್ ಅಂತರರಾಷ್ಟ್ರೀಯ ಅಥ್ಲೀಟ್ ಬಿಂದುರಾಣಿ ಮತ್ತು ಮಾಜಿ ಅಥ್ಲೀಟ್ ಯತೀಶ್ ಅವರ ಪತ್ನಿ ಶ್ವೇತಾ ಎಂಬವರ ನಡುವೆ ಸೋಮವಾರ ಬೆಳಿಗ್ಗೆ ವಾಗ್ವಾದ ನಡೆದಿದೆ. ಬಿಂದುರಾಣಿ ಅವರನ್ನು ಏರುದನಿಯಲ್ಲಿ ನಿಂದಿಸಿರುವ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಲ ತಿಂಗಳ ಹಿಂದೆ ಕೋಚಿಂಗ್ ಪ್ರಮಾಣಪತ್ರ ಪಡೆದಿದ್ದ ಬಿಂದುರಾಣಿ ತರಬೇತಿ ನೀಡುವ ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವೈಯಕ್ತಿಕ ಸಾಧನೆಯನ್ನು ಉತ್ಪ್ರೇಕ್ಷೆಯ ಮೂಲಕ ಬಿಂಬಿಸಲು ಯತ್ನಿಸುತ್ತಿದ್ದಾರೆ ಎಂಬುದು ಇತರ ಕೋಚ್‌ಗಳ ಆಕ್ಷೇಪಕ್ಕೆ ಕಾರಣವಾಗಿದೆ ಎಂದು ರಾಜ್ಯದ ಹಿರಿಯ ತರಬೇತುದಾರರೊಬ್ಬರು ತಿಳಿಸಿದ್ದಾರೆ.

ಬಿಂದುರಾಣಿ ನಡೆಯನ್ನು ತರಬೇತುದಾರರಾಗಿರುವ ಯತೀಶ್ ಹಾಗೂ ಪತ್ನಿ, ಮಾಜಿ ಟೆನಿಸ್ ಆಟಗಾರ್ತಿ ಶ್ವೇತಾ ಅವರು ಪ್ರಶ್ನಿಸಿದ್ದರು ಎನ್ನಲಾಗಿದೆ. ಇದು ಸೋಮವಾರ ಬೆಳಿಗ್ಗೆ ಕ್ರೀಡಾಂಗಣದಲ್ಲೇ ಜಗಳಕ್ಕೆ ತಿರುಗಿದೆ.

ಯತೀಶ್ ಮತ್ತು ಶ್ವೇತಾ ವಿರುದ್ಧ ಬಿಂದುರಾಣಿ ಅವರು ನೀಡಿರುವ ದೂರಿನ ಹಿನ್ನೆಲೆಯಲ್ಲಿ ಸಂಪಂಗಿರಾಮನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ನಾಗೇಂದ್ರ ಅವರು 'ಅವರಿಬ್ಬರೂ ನಮ್ಮ ಇಲಾಖೆಯಡಿ ಬರುವವರಲ್ಲ. ಮಕ್ಕಳಿಗೆ ಅನುಕೂಲವಾಗಲಿ ಎಂದು ತರಬೇತಿ ನೀಡಲು ಅವಕಾಶ ಕಲ್ಪಿಸಿದ್ದೇವೆ. ಕ್ರೀಡಾಪಟುಗಳು ಹಾಗೂ ಮಕ್ಕಳ ಮುಂದೆ ಈ ರೀತಿ ವರ್ತನೆ ಮಾಡಿರುವುದು ಸರಿಯಲ್ಲ. ಅವರಿಬ್ಬರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಹಿಳಾ ತಂಡದ ಕೋಚ್: ಅಮೋಲ್ ನೇಮಕ ಸಾಧ್ಯತೆ


ಅಮೋಲ್

ನವದೆಹಲಿ (ಪಿಟಿಐ): ಮಾಜಿ ಆಟಗಾರ ಅಮೋಲ್ ಮಜುಂದಾರ್ ಅವರು ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಳ್ಳುವ ಸಾಧ್ಯತೆಯಿದೆ.

ಮಹಿಳಾ ತಂಡದ ಕೋಚ್ ಆಯ್ಕೆ ಸಂಬಂಧ ಅಶೋಕ್ ಮಲ್ಹೋತ್ರ, ಜತಿನ್ ಪರಾಂಜಪೆ ಮತ್ತು ಸುಲಕ್ಷಣಾ ಕುಲಕರ್ಣಿ ಅವರನ್ನೊಳಗೊಂಡ ಕ್ರಿಕೆಟ್ ಸಲಹಾ ಸಮಿತಿಯು (ಸಿಎಸಿ) ಮುಂಬೈನಲ್ಲಿ ಸೋಮವಾರ ಆಕಾಂಕ್ಷಿಗಳ ಸಂದರ್ಶನ ನಡೆಸಿತು.

'ಮಹಿಳಾ ತಂಡದ ಯಶಸ್ಸಿಗೆ ಮಜುಂದಾರ್ ಹೊಂದಿರುವ ಸ್ಪಷ್ಟ ಯೋಜನೆಗಳು ಸಮಿತಿಗೆ ಇಷ್ಟವಾಗಿದೆ. ಇತರ ಅಭ್ಯರ್ಥಿಗಳಿಗೆ ಹೋಲಿಸಿದರೆ ಮಜುಂದಾರ್ ಅವರ ಪ್ರಸ್ತುತಿಯು ಅತ್ಯುತ್ತಮವಾಗಿತ್ತು. ಸಿಎಸಿ ಈ ಹುದ್ದೆಗೆ ಅವರ ಹೆಸರನ್ನೇ ಶಿಫಾರಸು ಮಾಡಲಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟೇಬಲ್ ಟೆನಿಸ್: ಯಶಸ್ವಿನಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ರಿಯೊ ಡಿ ಜನೈರೊದಲ್ಲಿ ನಡೆದ ವಿಶ್ವ ಟೇಬಲ್ ಟೆನಿಸ್ ಯೂತ್ ಕಂಟೆಂಡರ್ ಟೂರ್ನಿಯಲ್ಲಿ ಬಾಲಕಿಯರ 19 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.

ಶನಿವಾರ ನಡೆದ ಫೈನಲ್‌ನಲ್ಲಿ ಯಶಸ್ವಿನಿ 11-6, 11-9, 11-7 ರಲ್ಲಿ ಬ್ರೆಜಿಲ್‌ನ ಗುಲಿಯಾ ತಕಹಶಿ ಅವರನ್ನು ನೇರ ಗೇಮ್‌ಗಳಿಂದ ಮಣಿಸಿದರು.

ರಾಷ್ಟ್ರೀಯ ತಂಡ ಆಯ್ಕೆ ಮಾಡಿಕೊಂಡ ಮೂವರಿಗೆ 'ಪರಿಹಾರ'

ಢಾಕಾ (ಎಎಫ್‌ಪಿ): ಈ ಋತುವಿನಲ್ಲಿ ಶ್ರೀಮಂತ ಲೀಗ್ ಐಪಿಎಲ್ ಬದಲು ರಾಷ್ಟ್ರೀಯ ತಂಡಕ್ಕೆ ಆಡಲು ಆದ್ಯತೆ ನೀಡಿದ ಕಾರಣ ಮೂವರು ಹಿರಿಯ ಆಟಗಾರರಿಗೆ ಒಟ್ಟು ₹ 53.30 ಲಕ್ಷ ಮೊತ್ತವನ್ನು 'ಪರಿಹಾರ'ವಾಗಿ ನೀಡಲಾಗಿದೆ ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ಇದು ನಮ್ಮ ಕಡೆಯಿಂದ ಸಣ್ಣ ಕೊಡುಗೆ' ಎಂದು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಕ್ರಿಕೆಟ್ ಆಪರೇಷನ್ಸ್ ಮುಖ್ಯಸ್ಥ ಜಲಾಲ್ ಯೂನುಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಈ ಹಣವನ್ನು ಶಕೀಬ್ ಅಲ್ ಹಸನ್, ತಸ್ಕಿನ್ ಅಹ್ಮದ್ ಮತ್ತು ಲಿಟನ್ ದಾಸ್ ಅವರಿಗೆ ಹಂಚಲಾಗಿದೆ.

ಅವರು ನಮ್ಮಿಂದೇನೂ ಹಣವನ್ನು ಕೇಳಲಿಲ್ಲ. ಆದರೆ ಐಪಿಎಲ್ ತ್ಯಜಿಸಿದ್ದರಿಂದ ಆಗುವ ನಷ್ಟಕ್ಕೆ ಭಾಗಶಃ ಆದರೂ ತುಂಬಿಕೊಡಬೇಕು ಎಂದು ನಮಗೆ ಅನಿಸಿತು ಎಂದು ಸ್ವಲ್ಪವಾದರೂ ಆದರೂ ಹಣವನ್ನು ಸರಿದೂಗಿಸಬೇಕಿತ್ತು ಜಲಾಲ್ ಹೇಳಿದರು.